

ಸಂಪುಟ 22 ಸಂಚಿಕೆ 14
ಏಪ್ರಿಲ್ 2, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಕ್ಲಿಂಟನ್ ಕಾಲು ನೆಕ್ಕಲು 'ಸ್ವದೇಶಿ'ವಾದಿಗಳು ರೆಡಿ!






ದೇಶದ ಹರಾಜಿಗೆ ಅಡ್ಡನಿಂತ ದುಡಿವ ಜನ

ಇನ್ಫೋಸಿಸ್-ಷೇರು ಸುಗ್ಗಿ ನೀರ ಮೇಲಿನ ಗುಳ್ಳೆ



ಪಂಚಾಯತ್ ಮಸೂದೆ ವಿವಾದ



ನೆನಪಿನ ದೋಣಿಯಲ್ಲಿ

ಜನರನ್ನು ಸುಡುವ ಬೆಲೆ ಏರಿಕೆ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ದೇಶದ ಮಧ್ಯಮ ಮತ್ತು ಬಡ ಜನತೆಯನ್ನು 'ಬೆಲೆ ಏರಿಕೆ'ಯ ಯಜ್ಞಾಕುಂಡಕ್ಕೆ ನೂಕುತ್ತಿದೆ. 2000-2001 ರ ಸಾಲಿನ ಕೇಂದ್ರದ ಯಶವಂತ ಸಿನ್ಹರ ಮುಂಗಡ ಪತ್ರ ರಾಸಾಯನಿಕ ಗೊಬ್ಬರದ ಮೇಲಿನ ಸಬ್ಸಿಡಿ ಕಡಿತಗೊಳಿಸಿ ದೇಶದ ರೈತರನ್ನು ಅಧೀರಗೊಳಿಸಿತ್ತು. ಜೊತೆಗೆ 'ಪಡಿತರ ವ್ಯವಸ್ಥೆ' ಮೂಲಕ ವಿತರಿಸುವ ಅಕ್ಕಿ, ಗೋಧಿ, ಸಕ್ಕರೆ ಇತ್ಯಾದಿಗಳ ಪ್ರಮಾಣದಲ್ಲಿ 10 ಕೆ.ಜಿ.ಯಿಂದ 20 ಕೆ.ಜಿ.ಗೆ ಹೆಚ್ಚಿಸಿ ಅದರ ಬೆಲೆಯನ್ನು ಏರಿಸಿ ಬಡ ಜನರನ್ನು ಬಗ್ಗು ಬಡಿದು ಅವರ ಕೊಳ್ಳುವ ಶಕ್ತಿಯನ್ನು ಕುಗ್ಗಿಸಿದೆ.

ಈಗ ಸೀಮೆಎಣ್ಣೆ ಹಾಗೂ ಅಡುಗೆ ಅನಿಲದ ಬೆಲೆಯನ್ನು ಬಿಜೆಪಿಯ ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಹೆಚ್ಚಿಸಿ ತಕ್ಷಣ ಜಾರಿಗೆ ತಂದಿದೆ. ಎನ್‌ಡಿಎ ಸರ್ಕಾರದಲ್ಲಿರುವ ಡಿಎಂಕೆ ಮತ್ತು ತೃಣಮೂಲ ಕಾಂಗ್ರೆಸ್ ಬೆಲೆ ಏರಿಕೆ ವಿಚಾರವನ್ನು ನಮ್ಮ ಗಮನಕ್ಕೆ ತರಲೇ ಇಲ್ಲ ಎಂದು ಆರೋಪಿಸಿವೆ. ತೆಲುಗುದೇಶಂ ಕೂಡ ವಿರೋಧಿಸಿದೆ. ಈ ಪಕ್ಷಗಳು ಬೆಲೆ ಏರಿಕೆಯನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸಿವೆ. ತೆಲುಗುದೇಶಂ ಒಂದು ಹೆಜ್ಜೆ ಮುಂದೆ ಹೋಗಿ ಗ್ಯಾಸ್ ಮತ್ತು ಸೀಮೆಎಣ್ಣೆ ಬೆಲೆ ಏರಿಕೆಯನ್ನು ತಕ್ಷಣ ಕೈ ಬಿಡಬೇಕೆಂದು ಆಗ್ರಹಪಡಿಸಿವೆ. ಇಲ್ಲವೇ ಹೋರಾಟ ಅನಿವಾರ್ಯವಾಗುವುದೆಂದು ಬೆದರಿಸಿದೆ.

ಸಂಪಾದಕೀಯ

ಅಡುಗೆ ಅನಿಲದ ಸಬ್ಸಿಡಿ ಕಡಿತಗೊಳಿಸಿ ಸೀಮೆಎಣ್ಣೆ ಬೆಲೆ ಏರಿಕೆಯನ್ನು ಬಿಜೆಪಿ ನಾಚಿಕೆ ಬಿಟ್ಟು ಸ್ವಾಗತಿಸಿದೆ. 'ಜನತಾಕಲ್ಯಾಣ'ಕ್ಕೋಸ್ಕರ ನಾವು ಎನ್‌ಡಿಎ ಸೇರಿದ್ದೇವೆ ಎಂದು ಹೇಳಿಕೊಳ್ಳುವ ಡಿ.ಎಂ.ಕೆ., ಅಕಾಲಿದಳ, ಜನತಾದಳ(ಯು), ತೃಣಮೂಲ ಕಾಂಗ್ರೆಸ್ ಇತ್ಯಾದಿಗಳು ಜನರ ಮೇಲೆ ದುಷ್ಪರಿಣಾಮ ಬೀರುವ ಈ ಬೆಲೆ ಏರಿಕೆಯನ್ನು ಬಿಜೆಪಿ ಸಮರ್ಥಿಸಿಕೊಳ್ಳುತ್ತಿರುವ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗಿದೆ.

ದೇಶದ ಜನತೆಯ ಹೀತ ಹಾಗೂ ಕೋಮು ಸಾಮರಸ್ಯದ ಹಿತದೃಷ್ಟಿಯಿಂದ ಬಿಜೆಪಿ ಸರ್ಕಾರಕ್ಕೆ ನೀಡಿರುವ ಬೆಂಬಲ ವಾಪಸ್ಸು ಪಡೆಯಲು ಸಾಧ್ಯವೇ? ಎಂದು ಎನ್‌ಡಿಎ ಮಿತ್ರ ಪಕ್ಷಗಳಿಗೆ ಸಿಪಿಐ(ಎಂ)ನ ಸವಾಲು ಸಮರ್ಥನೀಯವೇ ಸರಿ.

ಈಗಾಗಲೇ ಈ ದರಗಳ ಏರಿಕೆಯನ್ನು ಎಡಪಕ್ಷಗಳು, ಕಾಂಗ್ರೆಸ್ ಹಾಗೂ ಎನ್‌ಡಿಎ ಸದಸ್ಯ ಪಕ್ಷಗಳು ವಿರೋಧಿಸಿವೆ. ಜನತೆಯನ್ನು ಕಷ್ಟಕ್ಕೀಡು ಮಾಡುವ ಕೇಂದ್ರದ ಈ ಧೋರಣೆ ವಿರುದ್ಧ ಜನತೆ ಚಳುವಳಿ ಹೂಡಬೇಕಾಗಿದೆ.



ಕೃಪೆ: ಜನವಾಹಿನಿ

ಮೈಕೊ ಕಾಮಧೇನು ಕೋ-ಆಪರೇಟಿವ್ ಸೊಸೈಟಿ ಚುನಾವಣೆ ಸೂರಿ ನೇತೃತ್ವದ ಆನೆ ತಂಡಕ್ಕೆ ವಿಜಯ

ಮೈಕೊ ಕಾಮಧೇನು ಕೋ-ಆಪರೇಟಿವ್ ಸೊಸೈಟಿ ನೌಕರರ ಸಂಘದ ಚುನಾವಣೆಯಲ್ಲಿ ಆನೆ ತಂಡದಿಂದ ಸ್ಪರ್ಧಿಸಿದ್ದ 9 ಉಮೇದುವಾರರು ಜಯಶೀಲರಾಗಿದ್ದಾರೆ. ಅದರಲ್ಲಿ ಒಂದು ಮಹಿಳಾ ಸ್ಥಾನ ಅವಿರೋಧವಾಗಿ ಆಯ್ಕೆಯಾಗಿದೆ. ಮೈಕೊ ಕಾರ್ಮಿಕರ ಸಂಘ(ಅ) ಶತಾಯ-ಗತಾಯ ಗೆಲ್ಲಲೇಬೇಕೆಂಬ ಅಬ್ಬರದ ಪ್ರಚಾರ ಮತ್ತು ಅಕ್ರಮಗಳನ್ನು ಮಾಡಿದ್ದರೂ ಸಹ ಸೋಲನ್ನು ಅನುಭವಿಸಿದ್ದಾರೆ. ಈ ಜಯ ಸಿಐಟಿಯು ಬೆಂಬಲಿಗರ ಜಯವಾಗಿದೆ.

ಇತಿಹಾಸದ ಪುಟಗಳಿಂದ

ಇತಿಹಾಸದ ಪುಟಗಳಿಂದ 'ಐಕ್ಯರಂಗ'ದ ಹೊಸ ಕಾಲಂ. ನಮ್ಮ ಸಮಾಜದ ಬೆಳವಣಿಗೆಯ ವಿವಿಧ ಅವಸ್ಥೆ ಹಂತಗಳನ್ನು ಪರಿಚಯಿಸುವ ಪ್ರಯತ್ನ. ಆತ್ಮಚರಿತ್ರೆ, ಕಥೆ, ಕಾದಂಬರಿ, ಪ್ರಬಂಧಗಳು ಇಂತಹ ಬರಹಗಳಿಂದ ಆಯ್ದು ಕರ್ನಾಟಕದ, ಭಾರತದ, ವಿಶ್ವದ ಬೆಳವಣಿಗೆಯನ್ನು ನಿಮ್ಮ ಕಣ್ಣಮುಂದೆ ಬಿಚ್ಚುವ ಪ್ರಯತ್ನ. ಇದಕ್ಕೆ ನಿವೂ ಸಹಾಯ ಮಾಡಬಹುದು. ನೀವು ಓದಿದ ಪುಸ್ತಕಗಳಿಂದ ಈ ಕಾಲಂಗೆ ತಕ್ಕ ಬರಹಗಳನ್ನು ಸೂಚಿಸುವ ಮೂಲಕ.

- ಸಂಪಾದಕರು

ಇತಿಹಾಸದ ಪುಟಗಳಿಂದ

ನಿನ್ನ ಕ್ಯಾಸ್ಟ್ ಮಾರ್ಕ್ ಎಲ್ಲಿ?





ಕುವೆಂಪುರವರು ಕನ್ನಡ ಜನಮನವನ್ನು ಮಿಡಿದ ಕವಿ. ಕಂದಾಚಾರದ ವಿರುದ್ಧ ನಿರಂತರವಾಗಿ ಸೆಣೆಸಿ ಕರ್ನಾಟಕದ ಜನತೆಯ ಪ್ರೀತಿಗಳಿಸಿದವರು. 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಚರಿತ್ರೆ ಅವರು ಬೆಳೆದ ಪರಿಸರದ ಸಾಂಸ್ಕೃತಿಕ ದಾಖಲೆ. ಅಂದಿನ ಶಿಕ್ಷಣದಲ್ಲಿ ತಾಂಡವವಾಡುತ್ತಿದ್ದ ಜಾತಿಭೇದದ ತಣ್ಣಗಿನ ಕ್ರೌರ್ಯವನ್ನು ವರ್ಣಿಸಿದ್ದಾರೆ ಇಲ್ಲಿ......

ನಮ್ಮ ಉಪಾಧ್ಯಾಯರುಗಳಲ್ಲಿ ಒಬ್ಬರು ರಾಮರಾಯರು. ಅವರು ಇಂಗ್ಲೀಷ್ ಪಾಠಕ್ಕೆ ಬರುತ್ತಿದ್ದರು. ಬಿಳಿಯ ಪೇಟೆ, ಕೋಟು, ಕಚ್ಚೆ ಹಾಕಿ ನೀಟಾಗಿರುತ್ತಿದ್ದರು. ಇತರ ಕೆಲವರಂತೆ ಅವರು ಹೊಡೆಯುತ್ತಲೂ ಇರಲಿಲ್ಲ; ಹೆದರಿಸುತ್ತಿದ್ದರೂ ತುಂಬ ಸೌಮ್ಯವಾಗಿ ನಾಗರಿಕವಾಗಿ ನಗುನಗುತ್ತಲೇ ಇರುತ್ತಿದ್ದರು. ಆದ್ದರಿಂದ ನಮಗೆಲ್ಲ ಅವರಲ್ಲಿ ಹೆಚ್ಚು ಗೌರವ, ವಿಶ್ವಾಸ. ಅವರದ್ದು ಒಂದು ಹಟ; ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜಾತಿಯ ಲಲಾಟ ಚಿಹ್ನೆಯನ್ನು, ಅವರು ಹೇಳುತ್ತಿದ್ದಂತೆ 'ಕ್ಯಾಸ್ಟ್‌ಮಾರ್ಕ್' ಅನ್ನು, ಇಟ್ಟುಕೊಂಡೇ ಕ್ಲಾಸಿಗೆ ಬರಬೇಕು ಎಂದು. ಬ್ರಾಹ್ಮಣರು, ಕೊಂಕಣಿಗಳು ತಪ್ಪದೆ ಹಾಗೆ ತಿಲಕ ಧರಿಸಿಯೇ ಬರುತ್ತಿದ್ದರು. ನಾನು, ಹೆಸರಿಗೆ ನಾಮಧಾರಿ. ಒಕ್ಕಲಿಗ ಜಾತಿಗೆ ಸೇರಿದ್ದರೂ, ಲಾಂಛನಗಳ ವಿಚಾರದಲ್ಲಿ ಅಷ್ಟೇನೂ ಆಸಕ್ತನಾಗಿರಲಿಲ್ಲ. ಮನೆಯಲ್ಲಿ ಇನ್ನೂ ಚಿಕ್ಕವನಾಗಿದ್ದಾಗ, ನಾಮದ ಪೆಟ್ಟಿಗೆಯ ಮುಂದೆ ಕುಳಿತು ಅಪ್ಪಯ್ಯ ಅಜ್ಜಯ್ಯ ಯಾರಾದರೂ ಹಿರಿಯರು ನಾಮ ಧರಿಸಿಕೊಳ್ಳುತ್ತಿದ್ದಾಗ, ನಾನೂ ಮುಖ ಚಾಚಿ ನಾಮ ಇಡಿಸಿಕೊಳ್ಳುತ್ತಿದ್ದೆ. ಅಷ್ಟೆ ಹೊರತೂ ಅದನ್ನು ಧಾರ್ಮಿಕ ಶ್ರದ್ಧೆಯನ್ನಾಗಿ ಗೌರವಿಸುತ್ತಿರಲಿಲ್ಲ. ತೀರ್ಥಹಳ್ಳಿಯಲ್ಲಂತೂ ನಾಮ ಇಟ್ಟುಕೊಳ್ಳುವುದೆಲ್ಲಿ ಬಂತು? ಆದರೆ ರಾಮರಾಯರ ಪೀಡೆ ತಡೆಯಲಾರದೆ ಒಂದು ಉಪಾಯ ಹೂಡಿದ್ದೆ. ಅವರ ಕ್ಲಾಸು ಇರುವಾಗ, ಯಾರಾದರೂ ಹಣಗೆ ನಾಮ ಇಟ್ಟುಕೊಂಡ ಬಂದ ಗೆಳೆಯನನ್ನು ಹಿಡಿದು, ಅವನ ಹಣೆಗೆ ನನ್ನ ಹಣೆಯನ್ನು ಒತ್ತಿ, ಬಲವಾಗಿ ಒತ್ತಿ, ನನ್ನ ಹಣೆಗೂ ನಾಮದ ಗುರುತು ಬೀಳುವಂತೆ ಮಾಡಿಕೊಂಡು ರಾಮರಾಯರ ತರಗತಿಗೆ ಧೈರ್ಯವಾಗಿ ಹೋಗುತ್ತಿದ್ದೆ. ಒಮ್ಮೊಮ್ಮೆ ಒಂದೆ ನಾಮ ಇಟ್ಟುಕೊಂಡ ಗೆಳೆಯ ಸಿಕ್ಕದಿದ್ದರೆ, ಮೂರು ನಾಮದ ಐಯ್ಯಂಗಾರ್ ಗೆಳೆಯನನ್ನೇ ಹಿಡಿದು, ಅವನ ಹಣೆಗೆ ನನ್ನ ಹಣೆ ಡಿಕ್ಕಿ ಹೊಡೆಸುತ್ತಿದ್ದೆ. ಆದರೆ ಒಕ್ಕಲಿಗರ ಹುಡುಗ ಎರಡು ಬಿಳಿನಾಮಗಳ ನಡುವೆ ಒಂದು ಕೆಂಪುನಾಮ ಇಟ್ಟುಕೊಳ್ಳುತ್ತಿದ್ದುದು ಅಪೂರ್ವ. ರಾಮರಾಯರು ಇದೇನು ಐಯ್ಯಂಗಾರ್ ನಾಮ ಹಾಕಿಕೊಂಡಿದ್ದೀಯಾ ಎಂದು ಕೇಳಿದರೆ, ಒಮ್ಮೊಮ್ಮೆ ವಿಶೇಷ ದಿನಗಳಲ್ಲಿ ಗೌಡರೂ ಮೂರು ನಾಮ ಹಾಕಿಕೊಳ್ಳುತ್ತಾರೆ, ದಾಸಯ್ಯಗಳಂತೆ ಎಂದು ಹೇಳಿ ತಪ್ಪಿಸಿಕೊಳ್ಳುತ್ತಿದೆ. ಆದರೆ ಒಮ್ಮೆ ಇಂತಹ ಘಟನೆ ಸಂಭವಿಸಿದ ತರುವಾಯು, ಸ್ನೇಹಿತನ ಹಣೆಯ ಮೂರು ನಾಮ ನನ್ನ ಹಣೆಗೆ ಬಂದಿದ್ದರೂ, ಅವನ ಕೈಯಿಂದಲೇ ಅಕ್ಕಪಕ್ಕದ ಎರಡು ಬಿಳಿನಾಮಗಳನ್ನು ಎಚ್ಚರಿಕೆಯಿಂದ ಒರಸಿಹಾಕುವಂತೆ ಮಾಡುತ್ತಿದ್ದೆ.

ಈ ನಾಮದ ದೆಸೆಯಿಂದ ಒಮ್ಮೆ ಕೇಡಿರಿಜಿಸ್ಟರಿಗೆ ನ್ನ ಹೆಸರು ದಾಖಲಾಗಿದ್ದುದೂ ಉಂಟು. ಕೆಲವು ಐಯ್ಯಂಗಾರ ಹುಡುಗರು ಶೂದ್ರನ ಹಣೆಗೆ ಹಣೆಯೊತ್ತಿದರೆ ತಮ್ಮ ಜಾತಿ ಕೆಟ್ಟು ಹೋಗುತ್ತದೆ, ಮಡಿಕೆಟ್ಟು ಮೈಲಿಗೆಯಾಗುತ್ತದೆ ಎಂದು ಹಣೆ ಮುದ್ರಣಕ್ಕೆ ಒಪ್ಪುತ್ತಿರಲಿಲ್ಲ. ಒಮ್ಮೆ ಜಾತಿಭೇದ ಇಲ್ಲದ ಸ್ನೇಹಿತರಾರೂ ಸಿಕ್ಕಲಿಲ್ಲ, ಹಣೆಗೆ ನಾಮ ಒತ್ತಿಸಿಕೊಳ್ಳುವುದಕ್ಕೆ. ಆದರೆ

ಯೌವನದ ದಿನಗಳಲ್ಲಿ ಕುವೆಂಪು



ರಾಮರಾಯರ ಕ್ಲಾಸಿಗೆ ಹೋಗಲೆ ಬೇಕಾಯಿತು. ಯಾರಾದರೇನಂತೆ? ಹಣೆಗೆ ನಾಮದ ಚಿಹ್ನೆ ಬಿದ್ದರಾಯಿತು ಎಂದು, ಹತ್ತಿರದ ಗೆಳೆಯನಲ್ಲದ, ಥಟ್ಟನೆ ಎದುರಾಗಿ ಕಣ್ಣಿಗೆ ಬಿದ್ದ ಹುಡುಗನೊಬ್ಬನ್ನು ಹಣೆಗೆ ಹಣೆಯೊತ್ತಿ, ನಾನು ಬೆಂಚಿನ ಮೇಲೆ ನಿಲ್ಲಬೇಕಾದ ಶಿಕ್ಷಾ ಪ್ರಸಂಗದಿಂದ ಪಾರು ಮಾಡುವಂತೆ ಕೇಳಿಕೊಂಡೆ. 'ಶೂದ್ರ' 'ಮುಟ್ಟಾಳು' ಎಂದು ಏನೇನೋ ಹೇಳಿಬಿಟ್ಟ. ನನಗೆ ಸಿಟ್ಟು ಏರಿ 'ನಿನ್ನ ಜನಿವಾರ ಕಿತ್ತುಹಾಕಿ, ಮುಖದ ಮೇಲೆ ಉಗುಳಿ ಜಾತಿ ಕೆಡಿಸುತ್ತೇನೆ' ಎಂದೆ. ಈ ಕಾಲದಲ್ಲಿ ಬ್ರಾಹ್ಮಣರ ಹುಡುಗರು ಎಷ್ಟೇ ಬಲಿಷ್ಟರಾಗಿರಲಿ ಚಿಕ್ಕ ಚಿಕ್ಕ ಸಾಬರ ಹುಡುಗರಿಗೂ ಶೂದ್ರ ಮಕ್ಕಳಿಗೂ ಹೆದರಿಕೊಳ್ಳುತ್ತಿದ್ದರು, ಎಲ್ಲಿ ಉಗುಳಿ ಜಾತಿ ಕೆಡಿಸುತ್ತಾರೋ ಎಂದು! ಅಂತೂ ಆ ಹುಡುಗ ಹೆಡಾಸ್ಟರಿಗೆ ದೂರು ಕೊಟ್ಟ. ಸರಿ, ಹೆಡಾಸ್ಟರೂ ಬ್ರಾಹ್ಮಣರು. ಶೂದ್ರ ಮಕ್ಕಳೆಲ್ಲಾ ಬ್ರಾಹ್ಮಣ ಬಾಲಕರೊಡನೆ ಒಂದೇ ಬೆಂಚಿನ ಮೇಲೆ ಮೈಗೆ ಮೈ ಮುಟ್ಟುವಂತೆ ಕುಳಿತುಕೊಂಡು ಬ್ರಾಹ್ಮಣತ್ವವೆಲ್ಲ ಹಾಳಾಗಿಹೋಗುತ್ತಿದೆ ಎಂದು ಮೊದಲೇ ಈರ್ಷ್ಯೆಯಲ್ಲಿದ್ದ ಆ ಪುಣ್ಯಾತ್ಮ ನನ್ನನ್ನು ಆಫೀಸುರೂಮಿಗೆ ಕರೆಸಿ, ವಿಚಾರಣೆ ಮಾಡಿದ. ಆ ಹುಡುಗ ನಾನು ಉಗುಳುತ್ತೇನೆ ಎಂಬುದನ್ನು 'ಉಗುಳಿಯೇ ಬಿಟ್ಟ' ಎಂದು ವರದಿ ಮಾಡಿದ್ದ. ನಾನು 'ಉಗುಳಲಿಲ್ಲ, ಉಗುಳುತ್ತೇನೆ ಎಂದು ಹೆದರಿಸಿದೆನಷ್ಟೆ' ಎಂದು ಹೇಳಿದರೂ 'ಉಗುಳುತ್ತೇನೆ ಎಂದದ್ದು ಉಗುಳಿದ್ದಕ್ಕಿಂತಲೂ ಕಡುಪಾಪ!" ಎಂದು ಶಿಕ್ಷೆ ವಿಧಿಸಿಯೇ ಬಿಟ್ಟ. ಬೆತ್ತದಿಂದ ಅಂಗೈಗಳಿಗೆ ಏಟು ಬಿಗಿದು, ಕೇಡಿರಿಜಿಸ್ಟರಿಗೆ ನನ್ನ ಹೆಸರನ್ನು ಸೇರಿಸಿಬಿಟ್ಟ! ಕೇಡಿ ರಿಜಿಸ್ಟರಿಗೆ ಹೆಸರು ಸೇರುವುದೆಂದರೆ ಬಹಳ ಕೆಟ್ಟದ್ದು! ತರುವಾಯದ ಬದುಕಿನಲ್ಲಿ ಹುಡುಗನ ಜೀವನೋಪಾಯಕ್ಕೆ ಧಕ್ಕೆ ತರುತ್ತದೆ! ಅವನು ಮುಂದೆ ಯಾವ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳಲಿ ಅವನ ಮುಖದಲ್ಲಿರುವ ಈ ಕರೀಗೀಟು - ಬ್ಲಾಕ್ ಮಾರ್ಕ್ - ಅವನಿಗೆ ಕಂಟಕಪ್ರಾಯ ವಾಗಿ ನಿಲ್ಲುತ್ತದೆ! - ಎಂದೆಲ್ಲ ಹೆದರಿಸಿದರು. ಆದರೆ ನನಗಿದ್ದದ್ದು ಈ ಭವಿಷ್ಯ ಜೀವನದ ಅಪಾಯ ಭಯವಲ್ಲ, ಅಂಗೈಗೆ ಬಿದ್ದ ಬೆತ್ತದೇಟಿನ ನೋವು!

ಶೂದ್ರ ಮುಂಡೇದಕ್ಕೆ ಸಂಸ್ಕೃತ ಬೇರೆ ಕೇಡು

ಇನ್ನೊಂದು ಅರ್ಥಗರ್ಭಿತವಾದ ಸಂದರ್ಭವನ್ನೂ ಕುರಿತು ಇಲ್ಲಿಯೆ ಹೇಳಿಬಿಡುತ್ತೇನೆ. ಕಾಲಕ್ರಮದಲ್ಲಿ, ಅದು ನಡೆದದ್ದು ನಾನು ಮಾಧ್ಯಮಿಕ ತರಗತಿಗಳಿಗೆ ಪ್ರವೇಸಿದಾಗ ಎಂದು ತೋರುತ್ತದೆ. ಅದು ಸಂಸ್ಕೃತಕ್ಕೆ ಸಂಬಂಧಪಟ್ಟುದು.

ಬೇಸಗೆಯ ರಜ ಮುಗಿದು ಸ್ಕೂಲು ಪ್ರಾರಂಭವಾದ ಮೊದಲ ದಿನಗಳಲ್ಲಿ ಒಂದು ದಿನ ನಮ್ಮ ಕ್ಲಾಸಿನ ಹುಡುಗರನ್ನೆಲ್ಲ ಒಂದೆಡೆ ಒಟ್ಟುಗೂಡಿಸಿದರು. ಬಹುಶಃ ಪ್ರಾಥಮಿಕ ಪೂರೈಸಿ ಮಾಧ್ಯಮಿಕಕ್ಕೆ ಬಂದಿದ್ದೇವೆಂದು ತೋರುತ್ತದೆ. ತೇರ್ಗಡೆ ಹೊಂದಿದ ಉತ್ಸಾಹದಲ್ಲಿ ದೀರ್ಘ ಕಾಲದ ರಜದಿಂದ ಹಿಂದಿರುಗಿದ್ದ ಹುಡುಗರೆಲ್ಲ ಗಟ್ಟಿಯಾಗಿ ಸಂಭಾಷಿಸುತ್ತಾ ಗುಲ್ಲೋಗುಲ್ಲ ಮಾಡುತ್ತಿದ್ದರು. ಮೇಷ್ಟರು ಪ್ರವೇಶಿಸಿ ಮೇಜಿಗೆ ಬೆತ್ತ ಬಡಿದು 'ಸದ್ದೂ!' ಎಂದು ಕೂಗಿದೊಡನೆಯೆ ಗಲಾಟೆ ತಟಕ್ಕನೆ ನಿಂತು ಹೊಯ್ದ ಮಳೆ ಹೊಳವಾದಂತಾಯ್ತು. "ನಿಮ್ಮಲ್ಲಿ ಯಾರು ಸಂಸ್ಕೃತ ತೆಗೆದುಕೊಳ್ಳುವವರು? ಯಾರು ಕತನ್ನಡ ತೆಗೆದುಕೊಳ್ಳುವವರು? ಸಂಸ್ಕೃತ ತೆಗೆದುಕೊಳ್ಳಲು ಇಚ್ಛಿಸುವರೆಲ್ಲ ಎದ್ದು ನಿಲ್ಲಿ!" ಎಂದರು. ಅನೇಕರು ಎದ್ದುನಿಂತರು.ನಾನು ಎದ್ದು ನಿಂತೆ. ಅಷ್ಟೊಂದು ಮಂದಿ ಎದ್ದು ನಿಲ್ಲುವಾಗ ನಾನೇಕೆ ಕೂತಿರಬೇಕು? ನಾನೇನು ಕಡಿಮೆ? " ಸಂಸ್ಕೃತದ ವಿದ್ಯಾರ್ಥಿಗಳೆಲ್ಲ ಮತ್ತೊಂದು ಕೊಠಡಿಗೆ ಹೋಗಿ" ಎಂದರು ಮೇಸ್ಟರು. ತುಂಬ ಹೆಮ್ಮೆಯಿಂದ ನಾನೂ ಇತರರೊಡನೆ ಹೋಗಿ ಬೇರೆ ಕೊಠಡಿಯಲ್ಲಿ ಕುಳಿತೆ. ನನ್ನ ಕೆಲವು ಬ್ರಾಹ್ಮಣೇತರ ಮಿತ್ರರು, ಕನ್ನಡ ತರಗತಿಯಲ್ಲಿಯೇ ಉಳಿದರು. "ಸಂಸ್ಕೃತ

ಪುಟ 4 ಕ್ಕೆ

ಪಂಚಾಯತ್ ಮಸೂದೆ ತಿದ್ದುಪಡಿ: ಜನಾಧಿಕಾರ ಕಿತ್ತುಕೊಳ್ಳುವ ಯತ್ನ

ಈ ವಾರವಿಡೀ ವಿಧಾನ ಸಭೆಯಲ್ಲಿ ಗದ್ದಲ, ಧರಣಿ, ವಿರೋಧ ಪಕ್ಷಗಳ ಪ್ರತಿಭಟನೆ, ಕಲಾಪಗಳ ಬಹಿಷ್ಕಾರ, ಕೊನೆಗೆ ರಾಜ್ಯಪಾಲರವರಿಗೆ ದೂರು ಆದರೂ ಬದಲಾಗದ ಸರ್ಕಾರದ ನಿಲುವು.. ಕೊನೆಗೆ .... ವಿಧಾನಪರಿಷತ್‌ನಲ್ಲಿ ಮಸೂದೆ ತಿದ್ದುಪಡಿ ಸೋಲು... ಮುಂದೇನು?

ಪಂಚಾಯತ್ ರಾಜ್ ಮಸೂದೆಗೆ ತಿದ್ದುಪಡಿ ತಂದು ಜಿಲ್ಲಾ-ತಾಲೂಕು ಪಂಚಾಯತ್‌ಗಳನ್ನು ಒಳಗೊಂಡು ಸ್ಥಳೀಯ ಸಂಸ್ಥೆಗಳ ಕ್ಷೇತ್ರವಿಂಗಡನೆ, ಅಧ್ಯಕ್ಷರು-ಉಪಾಧ್ಯಕ್ಷರ ಅವಧಿ ಮತ್ತು ಮೀಸಲಾತಿಯನ್ನು ನಿಗದಿಪಡಿಸುವ ಅಧಿಕಾರವನ್ನು ಚುನಾವಣಾ ಆಯೋಗದಿಂದ ಕರ್ನಾಟಕ ಸರ್ಕಾರ ವಾಪಾಸು ಪಡೆದಿದೆ. ಅದನ್ನು ಜಿಲ್ಲಾಧಿಕಾರಿಗಳಿಗೆ ನೀಡಿದೆ. ಹೀಗೆ **ರಾಜ್ಯ ಸರ್ಕಾರವು ಚುನಾವಣಾ ಆಯೋಗದಿಂದ ಅಧಿಕಾರ ಕಿತ್ತುಕೊಂಡಿದ್ದಾರಲ್ಲದೆ ಪ್ರಜಾಸತ್ತಾತ್ಮಕ ಸಂಸ್ಥೆಗಳ ಜನಪ್ರತಿನಿಧಿಗಳ ಪಾತ್ರ ಮತ್ತು ಹಕ್ಕನ್ನು ತಾನೇ ನಿಯಂತ್ರಿಸಿ, ತಾಳಕ್ಕೆ ತಕ್ಕಂತೆ ಕುಣಿಸಲು ಬಯಸಿದೆ.** ಸ್ಥಳೀಯ ಸಂಸ್ಥೆಗಳಲ್ಲಿಯೂ ತನ್ನದೇ ಅಧಿಕಾರ ಸ್ಥಾಪಿಸುವ ಷಡ್ಯಂತ್ರ ಹೊಸೆದಿದೆ.

ಗ್ರಾಮೀಣ ಜನತೆಯ ಅಭಿವೃದ್ಧಿ ಸಾಧನೆಯನ್ನೇ ಧ್ಯೇಯವನ್ನಾಗಿರಿಸಿಕೊಂಡು ಜನತೆಯ ಕೈಗೆ ಅಧಿಕಾರ ನೀಡುವ ಪ್ರಜಾಸತ್ತಾತ್ಮಕ ಆಶಯದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ಬಂದಿದೆ. ಪಶ್ಚಿಮ ಬಂಗಾಳ, ಕೇರಳ ರಾಜ್ಯಗಳಲ್ಲಿ ಎಡ ಪಕ್ಷಗಳು ಅಧಿಕಾರ ನಡೆಸುವಲ್ಲಿ ಈ ಆಶಯವನ್ನು ಸಾಧಿಸಲು ನಡೆದಿರುವ ಪ್ರಾಮಾಣಿಕ ಪ್ರಯತ್ನಗಳು ಮತ್ತು ಅದರಿಂದ ಸಾಧಿಸಿದ್ದು ಗಮನಾರ್ಹವಾದ ದಾಖಲೆಯಾಗಿದೆ. ಇದು ಭಾರತದ ಪ್ರಜಾಸತ್ತೆಯಲ್ಲಿ ಒಂದು ಹೊಸ ಪರ್ಯಾಯದ ದಿಕ್ಕು ಸಹ. ಇದನ್ನು ಬಿಟ್ಟರೆ ಉಳಿದ ಬಹುತೇಕ ರಾಜ್ಯಗಳಲ್ಲಿ ಇಂತಹ ವ್ಯವಸ್ಥೆಯೇ ಇಲ್ಲ. **ಆಂಧ್ರ, ಕರ್ನಾಟಕದಂತಹ ರಾಜ್ಯಗಳಲ್ಲಿ ಇರುವ ಪಂಚಾಯತ್‌ರಾಜ್ ವ್ಯವಸ್ಥೆಯು ಹಲ್ಲು ಕಿತ್ತ ಹಾಗೂ ಸಂಪನ್ಮೂಲಗಳಿಲ್ಲದೇ ಶಕ್ತಿಹೀನವಾದ, ಜನತೆಯ ಪಾತ್ರ ಹಾಗೂ ಅಧಿಕಾರ ಗೌಣವಾಗಿರುವುದೇ ಎದ್ದು ಕಾಣುವ ಅಂಶ. ಇಂತಹವುಗಳನ್ನು ಕ್ರಾಂತಿಕಾರಿ ಪ್ರಯೋಗವೆಂದೇ ಕರೆದುಕೊಳ್ಳುತ್ತಿರುವುದು ಒಂದು ಪ್ರಹಸನವಾಗಿದೆ.** ಮೇಲುಹಂತದಲ್ಲಿ ಪ್ರಜಾಸತ್ತೆ, ಕೆಳ ಹಂತದಲ್ಲೆಲ್ಲಾ ಅಧಿಕಾರಶಾಹಿ ತಾಂಡವ ಎಂಬುದೇ ನಮ್ಮ ವ್ಯವಸ್ಥೆಯ ಲಕ್ಷಣವಾಗಿಬಿಟ್ಟಿದೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಇಂತಹ ಜನತೆಯ ಹಾಗೂ ಚುನಾಯಿತ ಪ್ರತಿನಿಧಿಗಳು ಮತ್ತು ಸಂಸ್ಥೆಗಲು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಿ ಜನತೆಯ ಅಧಿಕಾರವನ್ನು ಔಪಚಾರಿಕಗೊಳಿಸಲಾಗುತ್ತಾ ಬರಲಾಗಿದೆ. ಹಿಂದಿನ ಜನತಾದಳದ ಸರ್ಕಾರದ ಇಂತಹ ಪ್ರಯತ್ನಗಳನ್ನು ಮರೆಯುವಂತಿಲ್ಲ. ಈಗಿನ ವಿವಾದದ ಮುಖ್ಯ ಪ್ರಶ್ನೆಯನ್ನೇ ಗಮನಿಸೋಣ. ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಇರುವಾಗ ಇವುಗಳಿಗೆ ಕೆಲವರನ್ನು ನಾಮಕರಣ ಮಾಡುವ ಮತ್ತು ಇತರೆ ಶಾಸಕರಂಥಗಳನ್ನು ಸದಸ್ಯರನ್ನಾಗಿಸುವ ಮೂಲಕ ಜನರು ಆಯ್ಕೆಮಾಡಿದ ಪಕ್ಷ ಅಥವಾ ಆ ಮೂಲಕ ಜನರ ರಾಜಕೀಯ ತೀರ್ಪನ್ನೇ ಮಸಕುಗೊಳಿಸಲಾಗುತ್ತದೆ ಎಂಬುದು ಬೇರೆ ವಿಚಾರ. ಈಗ ತಂದಿರುವ ತಿದ್ದುಪಡಿಯಂತೆ ಬಹುಮತ ಇರುವ ಪಕ್ಷವು ಅಧ್ಯಕ್ಷ, ಉಪಾಧ್ಯಕ್ಷರನ್ನು ಆರಿಸಲಾಗುವುದಿಲ್ಲ. ಮೀಸಲಾತಿ ಇಡುವುದರಿಂದಾಗಿ ಏನೊಂದು ಬಹುಮತ ಇಲ್ಲದಿದ್ದರೂ ಅಂತಹವರು ಪದಾಧಿಕಾರಿಗಳಾಗುವರು. ಇದು ಚುನಾಯಿತ ಪ್ರತಿನಿಧಿಗಳ ಪಾತ್ರ ಮತ್ತು ಅವರ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕು ಚ್ಯುತಿ ತಂದು, ಅಧಿಕಾರವನ್ನು ಮೊಟಕುಗೊಳಿಸುತ್ತದೆ. ಸಮಿತಿಯೊಳಗೆ ದೃಢವಾದ ತೀರ್ಮಾನಕೈಗೊಳ್ಳಲಾಗದೇ, ಅಧ್ಯಕ್ಷರು-ಉಪಾಧ್ಯಕ್ಷರೂ ಸಹ ತಮ್ಮ ಅಧಿಕಾರ ಚಲಾಯಿಸಲೂ ಅಡ್ಡಿಯಾಗಿ ಅವರನ್ನು ದುರ್ಬಲಗೊಳಿಸುತ್ತದೆ. ಮಾತ್ರವಲ್ಲ ಜನತೆಗೆ ಆಯಾ ಪಕ್ಷದ ರಾಜಕೀಯ ಬದ್ಧತೆ, ಗುರಿ ಸಾಧನೆಗಳನ್ನು ಮೂಲೆಗುಂಪಾಗಿಸಿ, ರಾಜಕೀಯ ಪಾತ್ರವೂ ನಾಮಕಾವಸ್ತೆಯಾಗಲಿದೆ. **ಗ್ರಾಮಾಂತರದಲ್ಲಿ ಜನರ ಮೂಲಭೂತ ಹಕ್ಕು, ಮತ್ತು ಅಗತ್ಯಗಳನ್ನು ನೀಡಿ, ಅವರನ್ನು ರಕ್ಷಿಸಲು ಬಯಸಿದಾಗ ಅಡ್ಡಿಮಾಡುವ ಊಳಿಗಮಾನ್ಯ ಶಕ್ತಿಗಳ ವಿರುದ್ಧ ನಡೆಯಬೇಕಾದ ರಾಜಕೀಯ ಹೋರಾಟವನ್ನು ಬೇಕೆಂದೇ ದೂರ ಮಾಡುತ್ತದೆ.** ಇಂತಹ ಸನ್ನಿವೇಶದಲ್ಲಿ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಯಂತಹ ಅಧಿಕಾರಶಾಹಿಗಳೇ ಮೇಲುಗೈ ಸಾಧಿಸುತ್ತಾರೆ. ರಾಜ್ಯ ಸರ್ಕಾರವೇ ನಿರ್ಣಾಯಕವಾಗುತ್ತದೆ. ಇಷ್ಟು ಮಾತ್ರ ಅಲ್ಲ ಮೀಸಲಾತಿ ಹೆಸರಿನ ಮೂಲಕ ರಾಜ್ಯದಲ್ಲಿ ಆಳುತ್ತಿರುವ ಪಕ್ಷವು ವಿವಿಧ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಹಿಡಿಯಲು ವಿಪುಲವಾದ ಅವಕಾಶವನ್ನು ಕೊಡುತ್ತದೆ. ಹೀಗೆ ಜನತೆಯ ಕೈಗೆ ಅಧಿಕಾರವೆಂಬುದನ್ನು ಕಾಂಗ್ರೆಸ್ ಪೂರ್ಣವಾಗಿ ದುರ್ಬಲಗೊಳಿಸಿ ರಾಜಧಾನಿಯಿಂದಲೇ ನಿಯಂತ್ರಿಸುವ ಹುನ್ನಾರಕ್ಕೆ ಮುಂದಾಗಿದೆ. ಇದರಿಂದಾಗಿ ಸ್ಥಳೀಯ ಸಂಸ್ಥೆಗಳು ಹೆಚ್ಚೆಂದರೆ ರಸ್ತೆ, ಕಾಮಗಾರಿಗಳ ಕಂಟ್ರಾಕ್ಟ್‌ಗಳನ್ನು ಹಂಚಿಕೊಳ್ಳುವ ಒಂದು ವ್ಯವಸ್ಥೆಯಾಗಬಹುದಷ್ಟೆ.

ಸ್ಥಳೀಯ ಸಂಸ್ಥೆಗಳ ಸದಸ್ಯರ ಆಯ್ಕೆಗೆ ಮೀಸಲಾತಿ ಇರಬಾರದೆಂದೆಲ್ಲ, ಮೀಸಲಾತಿಯಿಂದ ದಲಿತರಿಗೆ, ಹಿಂದುಳಿದವರಿಗೆ ಅಧಿಕಾರ ನೀಡಲಾಗುತ್ತಿದೆ ಎಂದು ಬಿಂಬಿಸಿ, ಮುಖ ಉಳಿಸಿಕೊಳ್ಳಬಯಸುವುದು ಇನ್ನೊಂದು ತಂತ್ರ. ಆದರೆ ಬಹುಮತ ಪಡೆದ ಪಕ್ಷದವರು ಅಧ್ಯಕ್ಷ- ಉಪಾಧ್ಯಕ್ಷರಾಗಿ ಚುನಾಯಿತರಾಗುವುದು ಪ್ರಜಾಸತ್ತಾತ್ಮಕ ಕ್ರಮ ವಾಗಿದೆ. ಹಾಗೂ ಸಮರ್ಥ ಕಾರ್ಯನಿರ್ವಹಣೆಗೂ ಅಗತ್ಯವಿದೆ.

ಇಂತಹ ಬಹುಮುಖ್ಯವಾದ ಅಂಶದ ಬಗ್ಗೆ ಆಳುವ ಕಾಂಗ್ರೆಸ್ ಪಕ್ಷ ತಿದ್ದುಪಡಿಯನ್ನು ತಂದು, ಸದಸ್ಯರಲ್ಲಿ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ಅವರ ಪ್ರತಿಭಟನೆ ಇದ್ದಾಗ್ಯೂ ಆತುರವಾಗಿ, ಏಕಪಕ್ಷೀಯವಾಗಿ ಅಂಗೀಕರಿಸಿದ್ದು ನಿಜಕ್ಕೂ ಖಂಡನೀಯ. ಗ್ರಾಮೀಣ ಪಂಚಾಯತ್ ಸಚಿವ ಎಂ.ವೈ. ಘೋರ್ಪಡೆಯವರು ತಿದ್ದುಪಡಿಯನ್ನು ಕಳೆದವಾರ ಮಂಡಿಸಿದರು. ವಿರೋಧ ಪಕ್ಷಗಳು ಈ ಬಗ್ಗೆ ಪೂರ್ಣವಾಗಿ ಚರ್ಚಿಸಲೂ ಅವಕಾಶನೀಡದೇ ಅಂಗೀಕರಿಸಲು ಮುಂದಾದರು. ಚರ್ಚೆಗೆ ಅವಕಾಶ ನೀಡದ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ, ವಿರೋಧ ಪಕ್ಷಗಳ ಸದಸ್ಯರು ಕಲಾಪ ಬಹಿಷ್ಕರಿಸಿದಾಗ ತಿದ್ದುಪಡಿಯನ್ನು ಅಂಗೀಕರಿಸಿದರು. ಸದನದ ಒಳಗೇ ಪ್ರಜಾಪ್ರಭುತ್ವ ಕಾಯಲು ಸಿದ್ಧವಿಲ್ಲದ ಕಾಂಗ್ರೆಸ್ ಪ್ರಜಾ ಪ್ರಭುತ್ವದ ಕತ್ತು ಹಿಸಕಲು ಎಷ್ಟೊಂದು ಉತ್ಸುಕವಾಗಿದೆಯೆಂಬುದು ಎದ್ದು ಕಾಣುತ್ತದೆ. ಕೊನೆಗೆ ರಾಜ್ಯಪಾಲರವರೆಗೂ ವಿರೋಧ ಪಕ್ಷಗಳು ಹೋದಾಗಲೂ ಚರ್ಚಿಸುವ ಸೌಜನ್ಯವನ್ನು ಈ ಸರ್ಕಾರ ತೋರಲಿಲ್ಲ.

ಈ ವಿಷಯ ವಿಧಾನ ಪರಿಷತ್‌ಗೆ ಬಂದಾಗ, ಅಲ್ಲಿಯೂ ಇಂತಹುದೇ ಗೊಂದಲ ಸೃಷ್ಟಿಯಾಗಿದೆ. ಅಂತಿಮವಾಗಿ ಧ್ವನಿಮತದಿಂದ ಈ ತಿದ್ದುಪಡಿಗೆ ಸೋಲು ಉಂಟಾಗಿ ಬಿದ್ದುಹೋಗಿದೆ. ಮತ್ತೇ ಅದು ಅಂಗೀಕಾರವಾಗಲು ವಿಧಾನ ಸಭೆಗೆ ಮಂಡಿಸಬೇಕು. ಇಷ್ಟರ ಮಟ್ಟಿನಲ್ಲಿ ಕಾಂಗ್ರೆಸ್ ಹುನ್ನಾರ ತಡೆಹಿಡಿಯಲಾಗಿರುವುದು ವಿರೋಧ ಪಕ್ಷಗಳ ಹೋರಾಟಕ್ಕೆ ಒಂದು ಹಂತದ ಜಯ.


ಈ ಎಲ್ಲಾ ಬೆಳವಣಿಗೆಗಳಿಂದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ಸರ್ಕಾರ ತರಲು ಉದ್ದೇಶಿಸಿರುವ ತಿದ್ದುಪಡಿ ಕೈಬಿಡಬೇಕು ಮತ್ತು ಕನಿಷ್ಠ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಯವಿಷಯವನ್ನು ಪುನಃ ಚುನಾವಣಾ ಆಯೋಗಕ್ಕೆ ನೀಡಬೇಕು. ಸ್ಥಳೀಯ ಸಂಸ್ಥೆಗಳು ಸ್ವಲ್ಪವಾದರೂ ಪ್ರಜಾಸತ್ತಾತ್ಮಕ ಗಾಳಿಯನ್ನು ಉಸಿರಾಡಲು ಸರ್ಕಾರ ಬಿಡುವುದೇ ಎಂಬುದು ಮುಂದಿನ ದಿನಗಳೇ ತೋರಿಸಬೇಕು.

- ಎಸ್.ವೈ.ಗುರುಶಾಂತ್

ಕ್ಲಿಂಟನ್ ಕಾಲು ನೆಕ್ಕಲು 'ಸ್ವದೇಶಿ'ವಾದಿಗಳು ರೆಡಿ!

ದೇಶದ ಹರಾಜಿಗೆ ಎದ್ದುನಿಂತ ದುಡಿವ ಜನ

ಸಾಮ್ರಾಜ್ಯಶಾಹಿ -ದೇಶದ್ರೋಹಿಗಳ ಪಿತೂರಿಗೆ ದೇಶಾದ್ಯಾಂತ ಭಾರೀ ಪ್ರತಿಭಟನೆ



ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಭಾರತಕ್ಕೆ ಬಂದಿದ್ದಾಗಿದೆ. ಬಹುರಾಷ್ಟ್ರೀಯ ಕಂಪನಿಗಳ ಏಜೆಂಟನಾಗಿ ಬಂದಿರುವ ಕ್ಲಿಂಟನ್‌ನ ಆಶಯಗಳನ್ನು ಅರಿಯದ ಅಥವಾ ಅರಿತರೂ ದೇಶದ ಹಿತವನ್ನು ಕಡೆಗಣಿಸಿರುವ ನಮ್ಮನ್ನಾಳುವವರು ದೇಶವನ್ನು ಜನಸಾಮಾನ್ಯರನ್ನು ಮತ್ತೊಮ್ಮೆ ಗುಲಾಮಗಿರಿಗೆ ಒಡ್ಡಲು ಸಜ್ಜಾಗುತ್ತಿದ್ದಾರೆ. ಆದರೆ 'ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ' ಎಂಬುದನ್ನರಿತಿರುವ ಜನತೆ ಸಾಮ್ರಾಜ್ಯಶಾಹಿಗಳು ಭಾರತದ ಸಂಪತ್ತನ್ನು ಮೇಯಲು ಅವಕಾಶ ಕೊಡದೆ ಎಡಪಕ್ಷಗಳ ನೇತೃತ್ವದಲ್ಲಿ ಈ 'ಕತ್ತೆ'ಗಳನ್ನು ಒದ್ದೋಡಿಸುವ ಮನಸ್ಸನ್ನು ವ್ಯಕ್ತಪಡಿಸಿದ್ದಾರೆ. ಪಣ ತೊಟ್ಟು ಕಣಕ್ಕಿಳಿದಿರುವ ದುಡಿವ ವರ್ಗದ ಜನತೆ ದೇಶಾದ್ಯಂತ ನಾನಾ ರೂಪಗಳಲ್ಲಿ ಕ್ಲಿಂಟನ್ ಭೇಟಿಯನ್ನು ವಿರೋಧಿಸಿ ಪ್ರತಿಭಟನೆಗಿಳಿದಿದ್ದಾರೆ. ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರೆಡೆಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಪ್ರತಿಭಟನೆಗಳ ಕುರಿತು ವರದಿ.

ಬೆಂಗಳೂರಿನ ಹೃದಯ ಭಾಗವಾಗಿರುವ ಕೆಂಪೇಗೌಡ ರಸ್ತೆಯ ಬನ್ನಪ್ಪ ಪಾರ್ಕಿನಲ್ಲಿ ನೆರೆದಿದ್ದ ಸಾವಿರಾರು ಜನರು ಒಕ್ಕೊರಲಿನಿಂದ ಕೂಗುತ್ತಿದ್ದ ಘೋಷಣೆ 'ಕ್ಲಿಂಟನ್ ಗೋ ಬ್ಯಾಕ್' ಕಾರ್ಮಿಕರು, ಮಹಿಳೆಯರು, ವಿಧ್ಯಾರ್ಥಿ-ಯುವಜನರು, ಎಲ್ಲರಲ್ಲೂ ಆಕ್ರೋಶ ಮಡುಗಟ್ಟಿತ್ತು. ಈಗಾಗಲೇ ಜೀವನ ದುಸ್ತರವಾಗಿರುವಾಗ ಇನ್ನೂ ಇನ್ನೂ ಹಾಳುಕೂಪಕ್ಕೆ ನೂಕಿ ದೇಶವನ್ನು ಉದ್ಧಾರ ಮಾಡಿದವರಂತೆ ಪೋಜು ಕೊಡುತ್ತಿರುವ ವಾಜಪೇಯಿ ಸರ್ಕಾರದ ಗೋಸುಂಬೆತನದ ಅರಿವು ಅವರಲ್ಲಿ ಸ್ಪಷ್ಟವಾಗಿತ್ತು.

ಬಿಳಿ ಪೊಲೀಸರ ಕೈಗೆ ದೆಹಲಿ

ಬನ್ನಪ್ಪ ಪಾರ್ಕಿನಲ್ಲಿ ಸೇರಿದ್ದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಮುಖಂಡ, ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ "ಕ್ಲಿಂಟನ್ ಮಹಾಶಯ ತನ್ನ ರಕ್ಷಣೆಗಾಗಿ ಭಾರತೀಯ ರಕ್ಷಣಾ ಪಡೆಯ ಮೇಲೆ ನಂಬಿಕೆಯಿಲ್ಲದೆ ಅಮೇರಿಕಾದಿಂದಲೇ ಸಾವಿರಾರು ಜನ ರಕ್ಷಣಾ ಪಡೆಯುವರನ್ನು ಕರೆತಂದಿದ್ದಾರೆ. ಆತ್ಮಾಭಿಮಾನವಿಲ್ಲದ ವಾಜಪೇಯಿ ಸರ್ಕಾರ ಕ್ಲಿಂಟನ್ ಓಡಾಡುವ ಸ್ಥಳಗಳನ್ನು ಅಮೇರಿಕನ್ ಪೊಲೀಸರ ಕೈಗೆ ಒಪ್ಪಿಸಿರುವುದು ಅತ್ಯಂತ ನಾಚಿಕೆಗೇಡಿನ ಕೆಲಸ" ಎಂದರು.

WTO, IMF ಗಳ ಏಜೆಂಟನಾಗಿ ಬಂದಿರುವ ಕ್ಲಿಂಟನ್ ನಮ್ಮ ದೇಶದ ಸಮಸ್ಯೆಗಳನ್ನು ಬಗೆಹರಿಸುವುದಾಗಲೀ ಸುಂದರವಾದ ತಾಣಗಳನ್ನು ನೋಡಿ ಅವುಗಳ ಸೌಂದರ್ಯವನ್ನು ಆಸ್ವಾದಿಸುವ ರಸಿಕನಂತೆ ಛಾಯಾಗ್ರಾಹಕರಿಗೆ ಪೋಸು ಕೊಡುತ್ತಿರುವುದು ಅವನ ನಿಜ ಬಣ್ಣವಲ್ಲ. ಅವನ ನಿಜ ಉದ್ದೇಶವೇ ಬೇರೆ ಇದೆ. ಸಿಟಿಬಿಟಿ ಒಪ್ಪಂದಕ್ಕೆ ಸಹಿ ಹಾಕಿಸುವುದು, ಮುಕ್ತ ಮಾರುಕಟ್ಟೆ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಈ ದೇಶವನ್ನು ಕೊಳ್ಳೆ ಹೊಡೆಯಲು ಅವಕಾಶ ಕಲ್ಪಿಸುವುದು ಅವನ ನಿಜವಾದ ಉದ್ದೇಶ. ಕ್ಲಿಂಟನ್‌ನ ಈ ಉದ್ದೇಶಗಳನ್ನು ಸಾಕಾರಗೊಳಿಸಿ ದೇಶದ ಪ್ರಜಾಪ್ರಭುತ್ವ, ಸಾರ್ವಭೌಮತೆಯನ್ನು ಒತ್ತೆಯಿಡಲು ಹೊರಟಿರುವ ಬಿಜೆಪಿ ಸರ್ಕಾರವನ್ನು ಶ್ರೀರಾಮರೆಡ್ಡಿಯವರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ತೊಂಭತ್ತೈದು ಕೋಟಿ ಜನ ಗುಲಾಮರಲ್ಲ

ಆಳುವ ಮಂದಿ, ದೇಶಿಯ ಬಂಡವಾಳಗಾರರು, ಕ್ಲಿಂಟನ್‌ನ ಬೂಟು ನೆಕ್ಕಲು ತಯಾರಿರಬಹುದು

ಪುಟ 8 ಕ್ಕೆ

ಬಡವರನ್ನು ನೋಡಿದರೆ ಕ್ಲಿಂಟನ್ ಕಣ್ಣು ಹಿಂಗೋಗುತ್ತದೆಯೇ?

ಕ್ಲಿಂಟನ್‌ಗೆ ಇಲ್ಲಿನ ಜನಜೀವನ, ಅವರ ಸಮಸ್ಯೆಗಳು, ಹೀನಾಯ ಬದುಕುಗಳು ಕಣ್ಣಿಗೆ ಬೀಳಬಾರದೆಂದು ಹೈದರಾಬಾದ್, ಆಗ್ರಾ ಮತ್ತಿತರ ಕಡೆಗಳಲ್ಲಿ ಭಿಕ್ಷುಕರನ್ನು ಹಿಡಿದು ಜೈಲಿಗೆ ಹಾಕಲಾಗುತ್ತಿದೆ ಅಥವಾ ಗಡೀಪಾರು ಮಾಡಲಾಗುತ್ತಿದೆ, ಯಾಕೆ?. ಈ ಭಿಕ್ಷುಕರನ್ನು ಕ್ಲಿಂಟನ್ ನೋಡಿದಲ್ಲಿ ಅವನ ಕಣ್ಣುಗಳೇನಾದರೂ ಹಿಂಗಿ ಹೋಗುತ್ತಿದ್ದವೇ? ಅಥವಾ ಈ ಬಡ ಭಿಕ್ಷುಕರಿಂದಾಗಿ ನಮ್ಮನ್ನಾಳುವ ಮಹಾ ಭಿಕ್ಷುಕರಿಗೆ 'ದೊರೆ'ಯಿಂದ ಏನೂ ಭಿಕ್ಷೆ ಬಿಳುವುದಿಲ್ಲವೆಂಬ ಭಯವೇ? ಇದು ಇಲ್ಲಿದ್ದ ಮುಖಂಡರನ್ನೊಳಗೊಂಡು ಎಲ್ಲರಿಗೂ ಕಾಡುತ್ತಿದ್ದ ಪ್ರಶ್ನೆ.

ಕಳೆದ ಸಂಚಿಕೆಯಲ್ಲಿ ಗೋವಾ ವಿಮೋಚನೆಗಾಗಿ ಕೇಂದ್ರದ ನೆಹರೂ ಸರ್ಕಾರದ ಮೇಲೆ ತಂದ ಒತ್ತಡ ಹಾಗೂ ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದ ಗೊತ್ತುವಳಿ, ಕಾಂಗ್ರೆಸ್ ನಿಲುವುಗಳ ಬಗ್ಗೆ ಓದಿದ್ದೀರಿ. ಈ ವಾರ ಎರಡನೇ ಮಹಾಚುನಾವಣೆಗಳು, ಬಿಹಾರ-ಪ.ಬಂಗಾಳ ವಿಲೀನ ವಿರೋಧಿ ಆಂದೋಲನ ಮತ್ತು ಅದನ್ನು ಬೆಂಬಲಿಸಿ ವಿದ್ಯಾರ್ಥಿಗಳ ಯಶಸ್ವಿ ಮುಷ್ಕರಗಳ ಕುರಿತು ಓದಿ......

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವ ಕುಂದಾಪುರ

ಧಾರವಾಹಿ 31

ವಿಲೀನ ಯೋಜನೆ ಹಿಮ್ಮೆಟ್ಟಿಸಿದ ಹೋರಾಟ

ಈ ಅಧ್ಯಾಯದಲ್ಲಿ ನಾನು ಕೆಲವು ಹೊಸ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸುತ್ತೇನೆ. ಸಾಮೂಹಿಕ ಚಳುವಳಿಗಳು ಮತ್ತು ಸಾಮೂಹಿಕ ಹೋರಾಟಗಳನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಲು ಮಾರ್ಕ್ಸ್‌ವಾದ-ಲೆನಿನ್ ವಾದ ಸಿದ್ಧಾಂತವನ್ನು ನಂಬುವ ಒಂದು ಬಲಿಷ್ಠ ಹಾಗೂ ಪ್ರಭಾವಶಾಲಿ ಕಮ್ಯುನಿಸ್ಟ್ ಪಕ್ಷ ಬೇಕೆಂದು ನಾವು ನಂಬುತ್ತೇವೆ. 1953-56 ರ ನಡುವೆ ನಮ್ಮ ಪಕ್ಷದ ಬೆಳವಣಿಗೆ ಗಣನೀಯವಾಗಿತ್ತು.

ಕೇರಳದ ಪಾಲ್ಘಾಟ್‌ನಲ್ಲಿ ಪಕ್ಷದ ಮಹಾಧಿವೇಶನ ನಡೆಯಿತು. ಅಧಿವೇಶನದಲ್ಲಿ 1956 ಏಪ್ರಿಲ್ 19 ರಂದು ಮಂಡಿಸಲಾದ ವರದಿ ಪ್ರಕಾರ ಪಕ್ಷದ ಸದಸ್ಯತ್ವ 1.52 ಲಕ್ಷಕ್ಕಿಂತ ಹೆಚ್ಚಾಗಿತ್ತು. ಸೋಹನ್ ಸಿಂಗ್ ಜೋಷ್, ಎಸ್.ವಿ.ಘಾಟೆ, ಬಂಕಿಮ್ ಮುಖರ್ಜಿ, ಕೆ.ಸಿ.ಜಾರ್ಜ್, ರೇಣು ಚಕ್ರವರ್ತಿ ಮತ್ತು ಅಚ್ಯುತ ಮೆನನ್ ಆ ಮಹಾಧಿವೇಶನದಲ್ಲಿ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದರು. ನಾನು ಕೂಡ ಕಾರ್ಯದರ್ಶಿ ಮಂಡಳಿಯ ಸದಸ್ಯನಾಗಿದ್ದೆ, ಆದರೆ ಪಾಲ್ಘಾಟ್ ಕಾಂಗ್ರೆಸ್‌ನಲ್ಲಿ ಪಾಲ್ಗೊಳ್ಳಲು ಆಗಲಿಲ್ಲ. ವಾಯುವ್ಯ ಕಲ್ಕತ್ತ ಲೋಕಸಭೆ ಕ್ಷೇತ್ರದ ಉಪ ಚುನಾವಣೆ ಕೆಲಸದಲ್ಲಿ ನಿರತರಾಗಿದ್ದರಿಂದ ಕಾಮ್ರೇಡ್ ದಾಸ್‌ಗುಪ್ತಾ ಕೂಡಾ ಮಹಾಧಿವೇಶನದಲ್ಲಿ ಭಾಗವಹಿಸಲಿಲ್ಲ.

ಬಂಗಾಳ ಮತ್ತು ಬಿಹಾರ ರಾಜ್ಯಗಳನ್ನು ವಿಲೀನಗೊಳಿಸುವ ಕಾಂಗ್ರೆಸ್ ಸರಕಾರದ ಪ್ರಸ್ತಾಪ ಚುನಾವಣೆ ಪ್ರಚಾರ ವಿಷಯಗಳಲ್ಲಿ ಒಂದಾಗಿತ್ತು.

ಮೋಹಿತ್ ಕುಮಾರ್ ಮೈತ್ರ ನಮ್ಮ ಅಭ್ಯರ್ಥಿಯಾಗಿದ್ದರು. ಕಾಂಗ್ರೆಸ್‌ನಿಂದ ಅಶೋಕ್ ಸೇನ್ ಕಣದಲ್ಲಿದ್ದರು. ಮೈತ್ರ ಎಡ, ಪ್ರಜಾಸತ್ತಾತ್ಮಕ ಮತ್ತು ರಾಷ್ಟ್ರೀಯವಾದಿ ಪಕ್ಷಗಳ ಸಂಯುಕ್ತ ಅಭ್ಯರ್ಥಿಯಾಗಿದ್ದರು. ಮೈತ್ರ ವಿಜಯಿಯಾದರು. ಸೇನ್ ಸೋತರು. ಈ ಸೋಲಿನಿಂದ ಸ್ಪಷ್ಟ ಸಂದೇಶ ಪಡೆದ ಡಾ. ರಾಯ್ ಬಂಗಾಳ-ಬಿಹಾರ ವಿಲೀನ ಯೋಜನೆಯನ್ನು ಕೈಬಿಟ್ಟರು.

ಎರಡನೇ ಮಹಾ ಚುನಾವಣೆ

ಎರಡನೇ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿತ್ತು. 1957 ಜುಲೈ 11 ರಂದು ನಮ್ಮ ಪಕ್ಷ ಒಂದು ಹೇಳಿಕೆ ಹೊರಡಿಸಿತು. ಸಾಮಾನ್ಯರಂಗವೊಂದನ್ನು ರಚಿಸಿಕೊಳ್ಳುವಂತೆ ಅದು ಎಲ್ಲ ಸಮಾಜವಾದಿ, ಪ್ರಜಾಸತ್ತಾತ್ಮಕ, ರಾಷ್ಟ್ರೀಯವಾದಿ ಮತ್ತು ಪ್ರಗತಿಪರ ಶಕ್ತಿಗಳಿಗೆ ಮನವಿ ಮಾಡಿತು. 'ಕೆಲವು ರಾಜ್ಯಗಳಲ್ಲಿ ಸರಕಾರಗಳನ್ನು ರಚಿಸಲು ಮತ್ತು ಸಂಸತ್ತಿನಲ್ಲಿ ಎಡಶಕ್ತಿಗಳನ್ನು ಬಲಪಡಿಸಲು ಎಲ್ಲ ಎಡಶಕ್ತಿಗಳು ಒಂದಾಗುವುದು ಅಗತ್ಯ' ಎಂದು ಹೇಳಿಕೆ ಪ್ರತಿಪಾದಿಸಿತು.

ಪಶ್ಚಿಮ ಬಂಗಾಳ ಘಟಕ ಯಾವತ್ತೂ ಎಡ ಏಕತೆಗೆ ಒತ್ತು ನೀಡುತ್ತ ಬಂದಿದೆ. ಎಡ ಪಕ್ಷಗಳ ಒಗ್ಗಟ್ಟಿನಿಂದ ಮಾತ್ರವೇ ವಿಧಾನಸಭೆಗಳು ಮತ್ತು ಸಂಸತ್ತಿನ ಒಳಗೂ ಹೊರಗೂ ಜನರ ಚಳುವಳಿಯನ್ನು ಮುನ್ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಎಂಬ ಸಿದ್ಧಾಂತವನ್ನು ನಾವು ಪ್ರತಿಪಾದಿಸುತ್ತ ಬಂದಿದ್ದೇವೆ. ಈ ನಂಬಿಕೆಯಿಂದಾಗಿಯೇ ಪಶ್ಚಿಮ ಬಂಗಾಳದಲ್ಲಿ ಎಡ ಏಕತೆ ಇಷ್ಟೊಂದು ಬಲಿಷ್ಠವಾಗಿ ಬೆಳೆದು ಬಂದಿದೆ.

1956 ಜನವರಿಯಲ್ಲಿ ನಡೆದ ಪಕ್ಷದ ಏಳನೇ ಪ್ರಾಂತೀಯ ಸಮ್ಮೇಳನದ ರಾಜಕೀಯ ಮತ್ತು ಸಂಘಟನಾತ್ಮಕ ವರದಿಯಲ್ಲಿ ಎಡ ಒಗ್ಗಟ್ಟಿನ ಬಗ್ಗೆಯೇ ಒಂದು ಪ್ರತ್ಯೇಕ ಅಧ್ಯಾಯವಿತ್ತು. ನಾನು ಆಗ ಸಮಿತಿಯ ಕಾರ್ಯದರ್ಶಿ ಆಗಿದ್ದೆ.

'ಎಡಏಕತೆ ಜನರ ಹೋರಾಟಗಳನ್ನು ಬಲಪಡಿಸಲು ನೆರವಾಗುತ್ತದೆ. ಹಾಗೂ ಇಂಥ ಚಟುವಟಿಕೆಗಳತ್ತ ಸಾರ್ವಜನಿಕರನ್ನು ಆಕರ್ಷಿಸುತ್ತದೆ. ಈ ಕೆಲವು ಪಕ್ಷಗಳ ನಾಯಕತ್ವ ಎಡ ಏಕತೆಯ ಸಿದ್ಧಾಂತದಿಂದ ಭಾರಿ ಪ್ರಭಾವಿತರಾಗಿಲ್ಲದಿದ್ದರೂ ಅವುಗಳ ಸದಸ್ಯರು ಹಾಗೂ ಬೆಂಬಲಿಗ ಜನರು ಸೋವಿಯತ್ ಒಕ್ಕೂಟ ಮತ್ತು ಚೀನಾದೊಂದಿಗಿನ ಮೈತ್ರಿ ಹಾಗೂ ಎಡ ಏಕತೆಯಲ್ಲಿ ನಂಬಿಕೆಯಿಟ್ಟಿದ್ದಾರೆ' ಎಂದು ವರದಿ ಹೇಳಿತ್ತು.

ಪ್ರತಿಪಕ್ಷದ ಪೈಕಿ ಅಸೆಂಬ್ಲಿ ಸ್ಥಾನಗಳ ಲೆಕ್ಕಾಚಾರದಲ್ಲಿ ಸಿಪಿಐ ನಂತರದ ಸ್ಥಾನ ಪ್ರಜಾ ಸೋಷಲಿಸ್ಟ್ ಪಕ್ಷ(ಪಿ.ಎಸ್.ಪಿ)ದ್ದಾಗಿತ್ತು. ಪಿ.ಎಸ್.ಪಿ. ಮತ್ತು ಸಿಪಿಐ ನಡುವಿನ ಸಂಬಂಧಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಪಿಎಸ್‌ಪಿ ಮತ್ತು ಸಿಪಿಐ ನಡುವೆ ಒಗ್ಗಟ್ಟು ಇಲ್ಲದ್ದರಿಂದ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿರುವುದು ಅನೇಕ ಸಂದರ್ಭಗಳಲ್ಲಿ ಅನುಭವವಾಗಿದೆ. ಇದು ಚುನಾವಣೆಯ ಪ್ರಶ್ನೆಯಷ್ಟೆ ಅಲ್ಲ; ಜನತಾ ಹೋರಾಟಗಳನ್ನು ಮತ್ತು ಜನರ ಸಂಘಟನೆಗಳನ್ನು ಬಲಪಡಿಸಲು ಪಿಎಸ್‌ಪಿ ಹಾಗೂ ನಮ್ಮ ಪಕ್ಷ ಒಟ್ಟಾಗಿ ಕೆಲಸ ಮಾಡುವುದು ತುಂಬಾ ಅಗತ್ಯ ಎಂದೂ ವರದಿ ಹೇಳಿತ್ತು. ಕಮ್ಯುನಿಸ್ಟ್ ವಿರೋಧಿ ಮತ್ತು ಸೋವಿಯತ್ ವಿರೋಧಿ ಪ್ರಚಾರದ ವಿರುದ್ಧ ಒಂದು ಮಹತ್ವದ ಹೋರಾಟ ಅಗತ್ಯ. ಇದೊಂದು ಮಹತ್ವದ ರಾಜಕೀಯ ಆಂದೋಲನ ಎಂದು ವರದಿ ಪ್ರತಿಪಾದಿಸಿತು.

ಅದಾದ ಮೇಲೆ ತುಂಬಾ ವರ್ಷಗಳೇ ಕಳೆದಿವೆ. ಪಿ.ಎಸ್.ಪಿ. ಅನೇಕ ಗುಂಪು-ಉಪಗುಂಪುಗಳಾಗಿ ಚೂರಾಗಿ ಹೋಗಿದೆ. ಪಶ್ಚಿಮ ಬಂಗಾಳದಲ್ಲಿ ನಮ್ಮ ಪಕ್ಷದ ಉಪಕ್ರಮದ ಮೇರೆಗೆ ಅನೇಕ ವಿಷಯಾಧಾರಿತ ಸಂಯುಕ್ತ ರಾಜಕೀಯ ಚಳುವಳಿಗಳು ನಡೆದಿವೆ. ಉದಾಹರಣೆಗೆ, ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ವಿಭಜಿಸುವ ವಿಚಾರವಾಗಿ ಚರ್ಚಿಸಲು ಅನೇಕ ಪ್ರತಿಪಕ್ಷಗಳ ಒಂದು ಜಂಟಿ ಸಮಿತಿಯನ್ನು 1956 ರಲ್ಲಿ ರಚಿಸಲಾಯಿತು. ಬರಗಾಲ, ಪ.ಬಂಗಾಳ-ಬಿಹಾರ ವಿಲೀನ ಪ್ರಸ್ತಾವ ಸಂದರ್ಭದಲ್ಲಿ ಇಂಥ ಸಮಿತಿಗಳನ್ನು ರಚಿಸಲಾಯಿತು.

ಪಿಎಸ್‌ಪಿಯ ಸುರೇಶ ಚಂದ್ರ ಬ್ಯಾನರ್ಜಿ, ಫಾರ್ವರ್ಡ್ ಬ್ಲಾಕ್‌ನ ಹೇಮಂತ ಬೋಸ್, ಆರ್.ಎಸ್.ಪಿ.ಯ ಮಖನ್‌ಪಾಲ್ ಮತ್ತು ಫಾರ್ವರ್ಡ್ ಬ್ಲಾಕ್(ಮಾರ್ಕ್ಸಿಸ್ಟ್) ಪಕ್ಷದ ಅಮರ ಬೋಸ್ ಈ ನಾನಾ ಸಮಿತಿಗಳ ಸದಸ್ಯರಾಗಿದ್ದರು. ನಾನು ಸೇರಿದಂತೆ ನಮ್ಮಪಕ್ಷದ ಅನೇಕ ಮುಖಂಡರು ಕೂಡ ಸಮಿತಿಗಳ ಸದಸ್ಯರಾಗಿದ್ದೆವು.

ಸಾಮೂಹಿಕ ಹೋರಾಟಗಳ ಅಲೆ

ಪ್ರಥಮ ಸಾರ್ವತ್ರಿಕ ಚುನಾವಣೆಗಳ ನಂತರ ಪಶ್ಚಿಮ ಬಂಗಾಳದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಗಳ ಉಬ್ಬರವೇ ಕಂಡು ಬಂತು. 1956 ರ ನವೆಂಬರ್‌ನಲ್ಲಿ ಅಳವಡಿಸಿಕೊಳ್ಳಲಾದ ಪ್ರಜಾಸತ್ತಾತ್ಮಕ ಏಕತೆ ಕುರಿತಾದ ಕಮ್ಯುನಿಸ್ಟ್ ಪಕ್ಷದ ಪ್ರಸ್ತಾವಿಕ ಕಾರ್ಯಕ್ರಮ ಹೀಗೆಂದಿತು.

"ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಸಂಘಟಿಸುವ ಇಂಥ ಒಂದು ಅವಶ್ಯಕತೆ ಹಿಂದಿನ ಯಾವುದೇ ಚುನಾವಣೆಯಲ್ಲಿ ಕಂಡು ಬಂದಿರಲಿಲ್ಲ. ಆಳುವ ವರ್ಗದ ಮತ್ತು ಅದರ ಅಸಮರ್ಪಕ ನೀತಿಗಳ ವಿರುದ್ಧದ ಹೋರಾಟದಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ"

ಈ ಕಾರ್ಯಕ್ರಮವನ್ನು ಹೊಂದಿದ್ದ ಪುಸ್ತಿಕೆಯಲ್ಲಿ 1952-56 ರ ನಡುವೆ ಪಶ್ಚಿಮ ಬಂಗಾಳದಲ್ಲಿ ಪಕ್ಷ ನಡೆಸಿದ ಮಹತ್ವದ ಚಳುವಳಿಗಳ ವಿವರ ನೀಡಲಾಗಿತ್ತು. ವಿಚಾರಣೆಯಿಲ್ಲದೆ ಜೈಲುಗಳಲ್ಲಿದ್ದ ಕೈದಿಗಳ ಬಿಡುಗಡೆಗಾಗಿ ನಡೆದ ಹೋರಾಟ, 1953-54ರ ಆಹಾರ ಚಳುವಳಿ, ಟ್ರಾಮ್ ಪ್ರಯಾಣ ದರ ಏರಿಕೆ ವಿರುದ್ಧದ ಚಳವಳಿ ಮೊದಲಾದವು ಅವುಗಳಲ್ಲಿ ಸೇರಿದ್ದವು. ಗೋವಾ ವಿಮೋಚನೆ ಚಳವಳಿ ಸಂದರ್ಭ ನಡೆದ ಮುಷ್ಕರಗಳು ಮತ್ತು ಆ ವೇಳೆ ಸ್ವಯಂ ಸೇವಕರನ್ನು ಕಳಿಸಿದ ಪರಿ ಗಮನಿಸಿದರೆ ಈ ಎಲ್ಲ ಹೋರಾಟಗಳು ಎಷ್ಟೊಂದು ಪ್ರಭಾವಶಾಲಿಯಾಗಿದ್ದವು ಎನ್ನುವುದು ಗೊತ್ತಾಗುತ್ತದೆ. ರಾಜ್ಯಗಳ ವಿಲೀನ ಪ್ರಸ್ತಾವದ ವಿರುದ್ಧದ ಹೋರಾಟದಲ್ಲಿ ಅದು ವ್ಯಕ್ತವಾಯಿತು. ನಮ್ಮ ಪಕ್ಷ ನಿಧಾನವಾಗಿ ರಾಷ್ಟ್ರೀಯವಾಗಿ ಪ್ರಭಾವಬೀರಲು ಆರಂಭಿಸಿದ್ದು ಇವೆಲ್ಲದರಿಂದ ಗೋಚರವಾಗುತ್ತಿತ್ತು.

ವಿಲೀನ ವಿರೋಧಿ ಆಂದೋಲನ

ಪಶ್ಚಿಮ ಬಂಗಾಳದ ಅನನ್ಯತೆ(Identity) ಕಸಿದುಕೊಳ್ಳಲು ಪ.ಬಂಗಾಳ ಮತ್ತು ಬಿಹಾರದ ಅಂದಿನ ಮುಖ್ಯಮಂತ್ರಿಗಳಾದ ಡಾ. ಬಿ.ಸಿ.ರಾಯ್ ಮತ್ತು ಶ್ರೀ ಕೃಷ್ಣ ಸಿನ್ಹ ಹೂಡಿದ್ದ ಪಿತೂರಿ ಮತ್ತು ಪ.ಬಂಗಾಳ ಜನತೆ ಅದರ ವಿರುದ್ಧ ಸಿಡಿದೆದ್ದ ಪರಿಯನ್ನು ವಿವರವಾಗಿ ಹೇಳ ಬಯಸುವೆ. ವಿಜ್ಞಾನಿ ಡಾ. ಮೇಘನಾದ ಸಹಾ, ವಕೀಲ ಅತುಲ್ ಗುಪ್ತ ಮತ್ತು ಇತರ ಅನೇಕ ರಾಷ್ಟ್ರೀಯವಾದಿಗಳು ನಮ್ಮ ಜತೆಗಿದ್ದರು.

ಮೋಹಿತ್ ಮೈತ್ರ ಸಂಚಾಲಕರಾಗಿರುವ ವಿಲೀನ ವಿರೋಧಿ ಸಮಿತಿಯನ್ನು ರಚಿಸಲಾಯಿತು. ವಿಲೀನಗೊಂಡ ಪ್ರಸ್ತಾವಿತ ರಾಜ್ಯಕ್ಕೆ 'ಪೂರ್ವ ಪ್ರದೇಶ' ಎಂದು ಹೆಸರಿಸಲಾಗುವುದೆಂದು ಹೇಳಲಾಗಿತ್ತು. ಪ್ರಧಾನಿ ನೆಹರೂ ಕೂಡ ಇದನ್ನು ಬೆಂಬಲಿಸಿದರು. ಇಬ್ಬರೂ ಮುಖ್ಯಮಂತ್ರಿಗಳು ಇಡೀ ದೇಶಕ್ಕೆ ಮಾದರಿ ಆಗಿದ್ದಾರೆ ಎಂದು ನೆಹರೂ ಹೇಳಿದರು! 1956 ಜನವರಿ 23 ರಂದು ರಾಯ್-ಸಿನ್ಹಾ ಹೇಳಿಕೆ ಹೊರಬಿದ್ದಿತ್ತು. ಮರುದಿನ ಪಕ್ಷದ ಪೊಲಿಟ್‌ಬ್ಯೂರೋ ಹೇಳಿಕೆಯೊಂದನ್ನು ನೀಡಿ, ಬೇಕಾಬಿಟ್ಟಿಯಾದ ಇಂಥ ವಿಲೀನ ಪ್ರಸ್ತಾವಗಳು ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸುತ್ತದೆ ಹಾಗೂ ಒಡಕನ್ನು ಉಂಟುಮಾಡುತ್ತದೆ ಎಂದು ಅಭಿಪ್ರಾಯಪಟ್ಟಿತು. ಪಕ್ಷದ ಪ.ಬಂಗಾಳ ಘಟಕ ವಿವರವಾಗಿ ಸಮಾಲೋಚಿಸಿ ವಿಲೀನ ಪ್ರಸ್ತಾವದ ವಿರುದ್ಧ ಹೋರಾಡಲು ಒಮ್ಮತದಿಂದ ನಿರ್ಧರಿಸಿತು.

ಪಕ್ಷದ ಬಿಹಾರ ಘಟಕದ ಕಾರ್ಯದರ್ಶಿ ಜೋಗಿಂದ್ರ ಶರ್ಮ ಅವರ ಜತೆ ಜನವರಿ 26 ರಂದು ನಾನು ಒಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದೆ. ವಿಲೀನ ಪ್ರಸ್ತಾವ 'ತೀರಾ ಪ್ರತಿಗಾಮಿ, ಗೊಂದಲಕಾರಿ ಹಾಗೂ ಪ್ರಜಾಪ್ರಭುತ್ವವಿರೋಧಿ' ಎಂದು ಪತ್ರಿಕಾಗೋಷ್ಠಿಯಲ್ಲಿ ನಾವು ವರ್ಣಿಸಿದೆವು. ಅದೇ ದಿನ ವೆಲ್ಲಿಂಗ್ಟನ್ ಚೌಕದಲ್ಲಿ ನಡೆದ ವಿಲೀನ ವಿರೋಧಿ ರ್‍ಯಾಲಿಯ ಅಧ್ಯಕ್ಷತೆಯನ್ನು ನಾನು ವಹಿಸಿದ್ದೆ.

ವಿದ್ಯಾರ್ಥಿ ಮುಷ್ಕರ

ಜನವರಿ 31 ರಂದು ವಿಧಾನಸಭೆಯಲ್ಲಿ ಪ್ರತಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು. ವಿಲೀನ ಪ್ರಸ್ತಾವದ ವಿರುದ್ಧ ಫೆಬ್ರವರಿ 2 ರಂದು ಎರಡು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಯಶಸ್ವಿ ಮುಷ್ಕರ ನಡೆಸಿದರು.

ಬಿಹಾರ ಕಮ್ಯುನಿಸ್ಟ್ ಪಕ್ಷದ ಪ್ರಾಂತೀಯ ಸಮಿತಿ ಫೆಬ್ರವರಿ 5 ರಂದು ಹೇಳಿಕೆಯೊಂದನ್ನು ನೀಡಿ ರಾಷ್ಟ್ರೀಯ ಏಕತೆ ಅಪಾಯದಲ್ಲಿದೆ ಎಂದು ಆತಂಕ ವ್ಯಕ್ತಪಡಿಸಿತು. ಕಾಂಗ್ರೆಸ್ ಕಾರ್ಯಸಮಿತಿಯ ನಿಲುವು ಪೂರ್ಣವಾಗಿ ಸಮಯ ಸಾಧಕತನದ್ದು ಎಂದು ನಾನು ಮೊದಲೇ ಹೇಳಿದ್ದೆ.

ಪಶ್ಚಿಮ ಬಂಗಾಳದ ನ್ಯಾಯಬದ್ಧ ಬೇಡಿಕೆಗಳನ್ನು ಅಸಿಂಧುಗೊಳಿಸುವ ಸಲುವಾಗಿಯೇ ಭಾಷೆಯ ಆಧಾರದಲ್ಲಿ ವಿಭಜನೆ ಆಗಬೇಕೆಂಬ ಆಯೋಗದ ಶಿಫಾರಸನ್ನು ಕಡೆಗಣಿಸಲಾಯಿತು. ಪುರುಲಿಯಾದ ಬಂಗಾಳಿ ಮಾತನಾಡುವ ಬಹುತೇಕ ಪ್ರದೇಶಗಳನ್ನು ಬಂಗಾಳದಿಂದ ಹೊರಗಿಡುವ ಮೂಲಕ ಕಾಂಗ್ರೆಸ್ ಸರಕಾರ ತಮಗೆ ವಂಚನೆಯಾಗುತ್ತಿದೆ ಎಂದು ಬಂಗಾಳಿಗಳಲ್ಲಿದ್ದ ಭಾವನೆಯನ್ನು ಇನ್ನಷ್ಟು ಹೆಚ್ಚಿಸಿತು ಅಷ್ಟೇ. ಇಂಥ ನೀತಿಗಳ ವಿರುದ್ಧ ಸತತ ಹೋರಾಟ ನಡೆಸುವಂತೆ ನಾನು ಜನರಿಗೆ ಕರೆ ನೀಡಿದೆ.

(ಮುಂದುವರಿಯುವುದು)

ನೆನಪಿನ ದೋಣಿಯಲ್ಲಿ....


ಪುಟ 2 ರಿಂದ

ಕಷ್ಟ ಕಣೋ, ಅದು ಬ್ರಾಹ್ಮಣರಿಗೆ ಮಾತ್ರ" ಎಂದು ಬುದ್ಧಿವಾದ ಹೇಳಿದರು. ಬ್ರಾಹ್ಮಣ ಸಹಪಾಠಿಗಳು 'ನೀನ್ಯಾಕೆ ಬಂದೆಯೊ ನಮ್ಮ ಜೊತೆಗೆ? ಶೂದ್ರರಿಗೆ ಯಾಕೋ ಸಂಸ್ಕೃತ? ನೀನೇನು ಮಂತ್ರಗಿಂತ್ರ ಹೇಳಿ ಪೌರೋಹಿತ್ಯ ಮಾಡ್ತೀಯೇನೋ? ಸಂಸ್ಕೃತ ನಿನಗೆ ಉಚ್ಚಾರ ಮಾಡೋಕೆ ಆಗೋದಿಲ್ಲ. ನೀನು ಅದನ್ನು ಕಲ್ತು ಬರೆದು ಪಾಸು ಮಾಡುವುದು ಹೌದೇನೋ?" ಎಂದು ಅರೆಬೆಣಕದ ಎಚ್ಚರಿಕೆಯ ಮಾತನಾಡಿದರು. "ಓಹೋ ಅದೇನು ಮಹಾ! ಬ್ರಾಹ್ಮಣರಿಗೆ ಮಾತ್ರ ಮೀಸಲೇನೋ?" ಎಂದು ನಾನು ಉಡಾಫೆ ಮಾಡಿ, ಸಂಸ್ಕೃತದ ಕ್ಲಾಸಿನಲ್ಲಿಯೇ ಕುಳಿತೆ. ರಿಜಿಸ್ಟರಿನಲ್ಲಿ ಹುಡುಗರ ಹೆಸರನ್ನೆಲ್ಲ ಬರೆದುಕೊಳ್ಳುತ್ತಿದ್ದ ಮೂರುನಾಮದ ಪಂಡಿತರು ನನ್ನ ಸರದಿ ಬರಲು, ನಾನು ಹೇಳಿದ ನನ್ನ ಹೆಸರನ್ನು ಕೇಳಿ ಬೆರಗಾಗಿ, ಮೆಟ್ಟಬಾರದ್ದನ್ನು ಮೆಟ್ಟಿದವರಂತೆ, ಜಿಗುಪ್ಸೆ ವಿಸ್ಮಯ ಅಸಮಾಧಾನ ಗಳ ಭಂಗಿಯಿಂದ ತಲೆಯೆತ್ತಿ ನನ್ನ ಕಡೆ ದುರದುರನೆ ಸ್ವಲ್ಪಹೊತ್ತು ನೋಡಿ, ಏನನ್ನೋ ನಿಶ್ಚಯಿಸಿ, ಮೆತ್ತ ತಲೆತಗ್ಗಿಸಿ ಹುಡುಗರ ಹೆಸರು ಬರೆದುಕೊಳ್ಳುವ ತಮ್ಮಕರ್ತವ್ಯದಲ್ಲಿ ನಿರತರಾದರು.

ಸಂಸ್ಕೃತದ ವಿಷಯದಲ್ಲಿ ಗೌರವ ವಿಶ್ವಾಸಗಳು ಹುಟ್ಟುವಂತೆ ಅವರು ಮಾತಾಡಲಿಲ್ಲ. ಕಷ್ಟ ವಾದರೂ ಹೆದರಬೇಡಿ ಎಂದು ಧೈರ್ಯ ಹೇಳಲಿಲ್ಲ. ಕಡೆಗೆ ಸಂಸ್ಕೃತದ ಅಕ್ಷರಗಳನ್ನಾದರೂ ಬೋರ್ಡಿನ ಮೇಲೆ ಬರೆದು ತಿಳಿಯಹೇಳಲಿಲ್ಲ. "ನಾಳೆ ಬರು ವಾಗ ನೀವೆಲ್ಲ ಅಮರಕೋಶದ ನಾಂದಿ ಶ್ಲೋಕ ಗಳನ್ನೆಲ್ಲ ಬಾಯಿಪಾಠ ಮಾಡಿಕೊಂಡು ಬರಬೇಕು" ಎಂದರು, ಯಸ್ಯಜ್ಞಾನ ದಯಾಸಿಂಧೋ" ಇತ್ಯಾದಿ, ನೀರಿಳಿಯದ ಗಂಟಲಲ್ಲಿ ಕಡುಬು ತುರುಕುವಂತೆ!

ಅದನ್ನೆಲ್ಲ ನಾನು ಮನಸ್ಸಿಗೆ ಹಾಕಿಕೊಳ್ಳಲೆ ಇಲ್ಲ. ನನ್ನಂತೆ ಹಲವರೂ ಮರುದಿನ ಸಂಸ್ಕೃತದ ಕ್ಲಾಸಿಗೆ ಹೋದಾಗ ಪಂಡಿತರ ಉದ್ದೇಶ ನೆರವೇರಿತು. ಈ ಶ್ಲೋಕಗಳನ್ನು ಬಾಯಿಪಾಠ ಮಾಡುವುದಿರಲಿ, ಅರ್ಥವೆ ಆಗದ ಅವುಗಳನ್ನು ಉಚ್ಚಾರ ಮಾಡು ವುದೂ ಅಸಾಧ್ಯವಾಯಿತು ನಮ್ಮಲ್ಲಿ ಕೆಲವರಿಗೆ. 'ಶೂದ್ರ ಮಕ್ಕಳಿಗೆ ಬಾಯಿ ತಿರುಗುವುದೇ ಇಲ್ಲ! ಇವು ಸಂಸ್ಕೃತ ಕಲಿಯುತ್ತವಂತೆ! ನಿಲ್ಲೊ ಬೆಂಚಿನ ಮೇಲೆ!" ಹೀಗೆ ಎರಡು ಮೂರು ದಿನ ಏಟು ತಿಂದು ಬೆಂಚಿನ ಮೇಲೆ ಹತ್ತಿ ನಿಂತು ನೋವಿಗೂ ಅವಮಾನಕ್ಕೂ ಹೇಸಿ ರೋಸಿ, 'ಹಾಳು ಸಂಸ್ಕೃತ ಹಾಳಾಗ!' ಎಂದು ಬೈದು ಮತ್ತೆ ಕನ್ನಡದ ತರಗತಿಗೇ ಸೇರಿದೆವು, ತಾಯಿಯ ಮಡಿಲಿಗೆ ಓಡುವಂತೆ!

ಸಾಮ್ರಾಜ್ಯಶಾಹಿ ಗೂಳಿಯ ಆಗಮನದ ವಿರುದ್ಧ ಹೋರಾಟದ ಮಹಾಪೂರ



ಇಡೀ ಜಗತ್ತಿಗೆ ಅಧ್ಯಕ್ಷನೋ ಎಂಬಂತೆ ಬಿಂಬಿಸಲಾಗುತ್ತಿರುವ, ತಲೆಯ ಮೇಲೆ ಹೊತ್ತು ಮೆರಸಲಾಗುತ್ತಿರುವ ಅಮೆರಿಕಾದ ಅಧ್ಯಕ್ಷರ ದಕ್ಷಿಣ ಏಶ್ಯಾ ಭೇಟಿಯ ಸಂದರ್ಭದಲ್ಲಿ ಬಿಲ್ ಕ್ಲಿಂಟನ್ ಭೇಟಿ ನೀಡುತ್ತಿರುವ ಬಾಂಗ್ಲಾದೇಶ, ಭಾರತ ಮತ್ತು ಪಾಕಿಸ್ತಾನದಾದ್ಯಂತ ವ್ಯಾಪಕ ಪ್ರತಿರೋಧ ಪ್ರತಿಭಟನೆಗಳ ಕಿಡಿಯನ್ನು ಹಾರಿಸಿದೆ. ಭಾರತದಲ್ಲಿ ಕ್ಲಿಂಟನ್ ಭೇಟಿ ನೀಡುವ ಪ್ರದೇಶಗಳಲ್ಲಷ್ಟೇ ಅಲ್ಲ ದೇಶದಾದ್ಯಂತ ವ್ಯಾಪಕವಾದ ಪ್ರತಿಭಟನೆಗಳು ನಡೆಯುತ್ತಿವೆ. ದೇಶದ ಜನತೆಯ ಸ್ವಾಭಿಮಾನ, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಪಣಕ್ಕೊಡ್ಡಿರುವ ಆಳುವ ಸರ್ಕಾರಗಳು, ಸಾಮ್ರಾಜ್ಯಶಾಹಿ ಶಕ್ತಿಗಳ ಪಿತೂರಿಗಳಿಗೆ ತಕ್ಕಂತೆ ತುತ್ತೂರಿ ಊದುವ ಭಟ್ಟಂಗಿ ಜನರ ಹೋರಾಟಗಳ ಮೇಲೆ ವ್ಯಾಪಕ ಧಾಳಿ, ದಬ್ಬಾಳಿಕೆಯನ್ನು ಹರಿಯ ಬಿಟ್ಟಿದ್ದಾರೆ.

ದೆಹಲಿ

ಜಲ ಪಿರಂಗಿಗೂ ಜಗ್ಗದ ಪ್ರತಿಭಟನೆಯ ದೃಢತೆ

ಜಾಗತೀಕರಣದ ವಕ್ತಾರ ಅಮೆರಿಕಾಗೆ ನಮ್ಮ ಸರ್ಕಾರ ಶಿರಬಾಗಿ ಶರಣಾಗಿರಬಹುದು ಆದರೆ ದೇಶದ ಜನರಲ್ಲ. ಜಾಗತೀಕರಣದ ಪ್ರಕ್ರಿಯೆ ತೀವ್ರಗೊಳಿಸಲು ಭಾರತಕ್ಕೆ ಬಂದಿರುವ ಬಿಲ್ ಕ್ಲಿಂಟನ್‌ಗೆ ದೆಹಲಿಯಲ್ಲಿ ಸೂಕ್ತ ಸ್ವಾಗತವನ್ನೇ ನೀಡಲಾಗಿದೆ. ಮಾರ್ಚ್ 21, 2000 ರಂದು ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್‌ನ ನೂರಾರು ಕಾರ್ಯಕರ್ತರು ಪೋಲೀಸರ ಎಲ್ಲಾ ಅಡೆತಡೆ ಪ್ರಯತ್ನಗಳನ್ನು ಧಿಕ್ಕರಿಸಿ ಪ್ರತಿಭಟಿಸಿದ್ದಾರೆ. ಅಮೆರಿಕದ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟ ಸಮಿತಿ ನೇತೃತ್ವದಲ್ಲಿ ದೆಹಲಿಯ ಮಂಡಿಹೌಸ್‌ನಿಂದ ಮೆರವಣಿಗೆ. ಮಾರ್ಗ ಮಧ್ಯದಲ್ಲೇ ಪೋಲೀಸರು ಜನರ ವ್ಯಾನ್-ಟೆಂಪೋಗಳನ್ನು ತಡೆದರೂ ಪ್ರತಿಭಟನೆಯ ಸ್ಥಳಕ್ಕೆ ಜನ ಸೇರುವುದನ್ನು ತಡೆಯಲಾಗಲಿಲ್ಲ. ಕ್ಲಿಂಟನ್ ಗೋ ಬ್ಯಾಕ್ - ಭಾರತ ಮಾರಟಕ್ಕಿಲ್ಲ' ಮುಂತಾದ ಘೋಷಣೆಗಳೊಂದಿಗೆ ಕಾರ್ಯಕರ್ತರು ತೀವ್ರ ಪ್ರತಿಭಟನೆ ನಡೆಸಿದರು.

ಮೆರವಣಿಗೆಯು ಅಮೆರಿಕಾದ ಕೇಂದ್ರದ ಕಡೆಗೆ ಹೋಗುವಾಗ ಮುಖಂಡರು ಶಾಂತಿಯುತ ಪ್ರತಿಭಟನೆ ಎಂದು ಘೋಷಿಸಿದ್ದರೂ ಸಹ ಪೋಲೀಸರು ಏಕಾಏಕಿ ಪ್ರತಿಭಟನಾಕಾರರನ್ನು ತಡೆದು ತೀವ್ರ ಜನಪಿರಂಗಿ ಧಾಳಿ ನಡೆಸಿದರು. ಎಸ್‌ಎಫ್‌ಐ ದೆಹಲಿ ಅಧ್ಯಕ್ಷರಾದ ಕಾಂ. ಸಿದ್ದೇಶ್ವರ ಅವರ ಕಣ್ಣಿಗೆ ಹೊಡೆತ


ದೆಹಲಿಯಲ್ಲಿ....

ಬಿದ್ದಿದೆ. ಕುಸುಮ ದೇವಿಯವರಿಗೆ ಪೆಟ್ಟಾಗಿದೆ. ಸಾಲದೆಂದು ಪೋಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಆದರೆ ಜನ ಮತ್ತೆ ಸೇರಿದ್ದಾರೆ. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಪ್ರಕಾಶ್ ಕಾರಟ್, ಎಸ್.ಆರ್.ಪಿಳ್ಳೈ, ಎಂ.ಕೆ.ಪಂಧೆ, ಸಿಪಿಐ ನ ಅತುಲ್ ಅಂಜನ್, ಸಿಐಟಿಯು ನ ಪಿ.ಕೆ.ಗಂಗೂಲಿ, ಎಸ್.ಎಫ್.ಐ.ನ ಸಿದ್ದೇಶ್ವರ, ಸಿಪಿಐ(ಎಂ) ಪಕ್ಷದ ಲೋಕಸಭಾ ಸದಸ್ಯರುಗಳು ಪಾಲ್ಗೊಂಡ ಪ್ರತಿಭಟನಾ ಸಭೆ ಯಶಸ್ವಿಯಾಗಿ ನಡೆದಿದೆ.

ಕೇರಳದಲ್ಲಿ ಹೋರಾಟದ ಅಲೆ

ಮಾರ್ಚ್ 22 ರಂದು ಕ್ಲಿಂಟನ್ ಭಾರತ ಭೇಟಿಯ ವಿರುದ್ಧ ಕೇರಳದಾದ್ಯಂತ ಲಕ್ಷಾಂತರ ವಿದ್ಯಾರ್ಥಿ-ಯುವಜನ, ರೈತ ಕಾರ್ಮಿಕರು ಮಹಿಳೆಯರು, ಕೃಷಿಕೂಲಿಕಾರರು ಪಾಲ್ಗೊಂಡ ವ್ಯಾಪಕ ಪ್ರತಿಭಟನಾ ಕಾರ್ಯಕ್ರಮಗಳು ನಡೆದಿವೆ.

ಅಮೆರಿಕದ ಸಾಮ್ರಾಜ್ಯಶಾಹಿ ಪಿತೂರಿಯ ವಿರುದ್ಧ, ಭಾರತವನ್ನು ಅಮೆರಿಕಕ್ಕೆ ಒತ್ತೆ ಇಡುವ ವಾಜಪೇಯಿ ಸರ್ಕಾರದ ನೀತಿಗಳ ವಿರುದ್ಧ ಮಾರ್ಚ್ 22 ರಂದು ರಾಜ್ಯಾದ್ಯಂತ 'ಸಮ್ರಾಜ್ಯಶಾಹಿ ವಿರೋಧಿ ದಿನ' ವನ್ನು ಆಚರಿಸುವಂತೆ ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿತ್ತು. ಈ ಕರೆಯ ಭಾಗವಾಗಿ ತಿರುವನಂತಪುರದಲ್ಲಿ ಡಿವೈಎಫ್‌ಐ, ಎಸ್‌ಎಫ್‌ಐ, ಕೇರಳ ಎನ್.ಜಿ.ಓ. ಸಂಘ, ಸಿಪಿಐ(ಎಂ)ಗಳು ರ್‍ಯಾಲಿಗಳನ್ನು ಸಂಘಟಿಸಿದ್ದವು. ಕ್ಲಿಂಟನ್ ಪ್ರತಿಕೃತಿಗಳನ್ನು ಸುಡಲಾಯಿತು. 'ಕಿಲ್ಲರ್ ಕ್ಲಿಂಟನ್ ಗೋ ಬ್ಯಾಕ್' 'ಮೂರನೇ ಅಂಪೈರ್ ನಮಗೆ ಬೇಡ' ಇತ್ಯಾದಿ ಘೋಷಣೆಗಳೊಡನೆ ಸಿಪಿಐ(ಎಂ) ರ್‍ಯಾಲಿ ಪಾಲಯುವರ್ ಹುತಾತ್ಮಸ್ಮಾರಕದಿಂದ ಆರಂಭವಾಯಿತು. ಎರ್ನಾಕುಲಂ, ಕೊಟ್ಟಾಯಂ, ಪಾಲಕಾಡ್, ಕಣ್ಣೂರು, ಅಲಪುಟ್‌ಪುರ, ಕೊಲ್ಲಂ ಮುಂತಾದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಾವಿರಾರು ಜನ ಪಾಲ್ಗೊಂಡ ಪ್ರತಿಭಟನೆಗಳು ನಡೆದಿವೆ.

'ಕ್ಲಿಂಟನ್+ವಾಜಪೇಯಿ = ಸರ್ವನಾಶ' ಮುಂತಾದ ಬರಹಗಳ ಭಿತ್ತಿಪತ್ರಗಳು ವ್ಯಾಪಕವಾಗಿದ್ದವು. ಎಸ್‌ಎಫ್‌ಐನ ಕರೆಯ ಮೇರೆಗೆ 5 ಲಕ್ಷ ವಿದ್ಯಾರ್ಥಿಗಳು ಕರಾಳ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಲ್ಲಿ ಕಪ್ಪು ಬ್ಯಾಡ್ಜ್ ಧರಿಸಿ, ಕಪ್ಪು ಬಾವುಟ ಪ್ರದರ್ಶನ ನಡೆಸಿದ್ದಾರೆ. ಡಿವೈಎಫ್‌ಐ ಸಹ ಕರಾಳ ದಿನಾಚರಣೆ ಆಚರಿಸಿದೆ. ರಾಜ್ಯಾದ್ಯಂತ 1000 ಕ್ಕೂ ಹೆಚ್ಚು ಪ್ರತಿಭಟನಾ ಸಭೆಗಳನ್ನು ಡಿವೈಎಫ್‌ಐ ಸಂಘಟಿಸಿದೆ. ಕ್ಲಿಂಟನ್ ಭೂತ ದಹನ ನಡೆಸಿದೆ. ಎನ್‌ಜಿಓ ಸಂಘ ಹಾಗೂ ಕೇರಳ ಸೆಕ್ರೆಟಾರಿಯಾಟ್ ನೌಕರರು ಸಂಘ ಮತ್ತಿತರ ಹಲವಾರು ಸಾಮೂಹಿಕ ಹಾಗೂ ವರ್ಗ ಸಂಘಟನೆಗಳು ಪ್ರತಿಭಟನೆ ನಡೆಸಿವೆ.

ಆಂಧ್ರ

ಪ್ರತಿಭಟನೆಯ ಅಗ್ನಿಕಾಂಡ

ಯಾವುದೇ ರೀತಿಯ ವಿರೋಧ, ಪ್ರತಿಭಟನೆಗಳಿಗೂ ಅವಕಾಶ ಕೊಡುವುದಿಲ್ಲ ಎಂದು ಗುಟುರು ಹಾಕುತ್ತಿದ್ದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಐಎಂಎಫ್-ವಿಶ್ವ ಬ್ಯಾಂಕ್‌ಗಳ ಮುದ್ದಿನ ಬೊಂಬೆ ಚಂದ್ರಬಾಬು ನಾಯ್ಡುರವರು 9 ಎಡ ಪಕ್ಷಗಳು ಸೇರಿ ಜಂಟಿಯಾಗಿ ರಾಜ್ಯಾದ್ಯಂತ ನಡೆಸುತ್ತಿರುವ ತೀವ್ರ ಪ್ರತಿಭಟನೆಗೆ ಹೆದರಿ ಮಣಿಯಬೇಕಾಗಿ ಬಂದಿದೆ. ಈಗ ಅವರು ಶಾಂತಿಯುತ ಪ್ರತಿಭಟನೆಗೆ ಅವಕಾಶ ಕೊಡುವುದಾಗಿ ಸಂಧಾನಕ್ಕೆ ಬಂದಿದ್ದಾರೆ.

ಕ್ಲಿಂಟನ್ ಭಾರತಕ್ಕೆ ಬಂದಿಳಿದ ಅದೇ ಸಂದರ್ಭದಲ್ಲಿ ಹೈದರಾಬಾದಿನ ಗಲ್ಲಿಗಳಲ್ಲಿ ಬೀದಿ ಬೀದಿಗಳಲ್ಲಿ ಎಸ್‌ಎಫ್‌ಐ-ಡಿವೈಎಫ್‌ಐ, ಸಿಪಿಐ(ಎಂ)ಗಳ ನೇತೃತ್ವದಲ್ಲಿ ಕ್ಲಿಂಟನ್ ಭೂತ ದಹನಗಳು ನಡೆದಿವೆ. 'ಕ್ಲಿಂಟನ್ ಗೋ ಬ್ಯಾಕ್', 'ಇಂಡಿಯಾ ಈಸ್ ನಾಟ್ ಫಾರ್ ಸೇಲ್' ಮುಂತಾದ ಘೋಷಣೆಗಳನ್ನುಳ ಟೀಶರ್ಟ್‌ಗಳನ್ನು ಧರಿಸಿದ ಕಾರ್ಯಕರ್ತರು, ಸಾಮ್ರಾಜ್ಯಶಾಹಿ ಸಂಚನ್ನು ಬಯಲು ಮಾಡುವ ವರ್ಣರಂಜಿತ ಪೋಸ್ಟರ್‌ಗಳು. ಭಾರತಕ್ಕೆ ಕ್ಲಿಂಟನ್ ಭೇಟಿಯ ಘೋಷಣೆಯಾದ ಕೂಡಲೇ ಎಸ್‌ಎಫ್‌ಐ - ಡಿವೈಎಫ್‌ಐ ಸಂಘಟನೆಗಳು ಸಂಘಟಿಸಿದ್ದ ಸ್ತಬ್ಧ ಚಿತ್ರ(ವಾಜಪೇಯಿ - ಚಂದ್ರಬಾಬು ನಾಯ್ಡು ರವನ್ನು ಪ್ರಾಣಿಗಳಂತೆ ಕಡಿವಾಣ ಹಾಕಿ ಕ್ಲಿಂಟನ್ ಸವಾರಿ ಮಾಡುವ ಚಿತ್ರ) ಪ್ರದರ್ಶನ ಮುಂತಾದವು ಜನ ಸಾಮಾನ್ಯರಿಂದ ಉತ್ಸಾಹದ ಪ್ರತಿಕ್ರಿಯೆ ಪಡೆದು ರಾಜ್ಯದಾದ್ಯಂತ ಸಾಮ್ರಾಜ್ಯಶಾಹಿ ವಿರುದ್ಧದ ಒಂದು ರೀತಿಯ ಸಮರದ ವಾತಾವರಣವನ್ನು ಸೃಷ್ಟಿಸಿದೆ.

9 ಎಡ ಪಕ್ಷಗಳ ನೇತೃತ್ವದ ಬೃಹತ್ ರ್‍ಯಾಲಿಯು ಹೈದರಾಬಾದ್‌ನಲ್ಲಿ ಆಬಿಟ್ಸ್ ವೃತ್ತದಿಂದ ನಾಮಪಲ್ಲಿ ಮಾರ್ಗವಾಗಿ ಅಸೆಂಬ್ಲಿಗೆ ಹೊರಟಿದ್ದಾಗ ಮಾರ್ಗ ಮಧ್ಯದಲ್ಲಿಯೇ ಪೋಲೀಸರು ಜನರನ್ನು ತಡೆದು ಪ್ರತಿಭಟನಾಕಾರರನ್ನು ಬಂಧಿಸಿದರು. ಸರ್ಕಾರದ ಈ ದಮನಕಾರಿ ನೀತಿಯನ್ನು ಖಂಡಿಸಿ ಮಹಿಳೆಯರನ್ನು, ಬಂಧಿತರನ್ನು ಕೊಂಡೊಯ್ಯುವ ವಾಹನವನ್ನು ಅಡ್ಡಗಟ್ಟಿ ತೀವ್ರವಾಗಿ ಪ್ರತಿಭಟಿಸಿದ್ದಾರೆ. ಪೋಲೀಸರು ಮಹಿಳೆಯರನ್ನು ಸಹ ಬಂಧಿಸಿದ್ದಾರೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವಲು, ಸಿಪಿಐ ರಾಜ್ಯ ಕಾರ್ಯದರ್ಶಿ ಸುರವರನ್ ಸುಧಾಕರ ರೆಡ್ಡಿ ಮುಂತಾದ ಹಲವು ಮುಖಂಡರನ್ನು ಬಂಧಿಸಲಾಗಿದೆ.


ಆಂಧ್ರದ ತಿರುಪತಿಯಲ್ಲಿ ಕ್ಲಿಂಟನ್ ಭೇಟಿ ವಿರುದ್ಧ ಪ್ರತಿಭಟಿಸುತ್ತಿದ್ದ ಸಿಪಿಐ(ಎಂ) ಮತ್ತು ಸಿಪಿಐ ನ ನೂರಾರು ಕಾರ್ಯಕರ್ತರನ್ನು ಬಂಧಿಸಲಾಗಿದೆ. ಇದಲ್ಲದೇ ಆಂಧ್ರ ಪ್ರದೇಶದ ಕರೀಂನಗರ,

ಪುಟ 9 ಕ್ಕೆ

ಜನರ ಭಾವನೆಗಳಿಗೆ ದನಿ ಕೊಟ್ಟ ಜನ ಪ್ರತಿನಿಧಿಗಳು

ಕ್ಲಿಂಟನ್ ಭೇಟಿಯನ್ನು ಜನ ಪ್ರತಿಭಟಿಸುತ್ತಿದ್ದಾರೆ. ಜನ ಪ್ರತಿನಿಧಿಗಳು ಏನ ಮಾಡಿದಾರೆ? ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ. ಹಾಗೂರಾಷ್ಟ್ರೀಯ ಜನತಾದಳದ ಒಟ್ಟು 89 ಸಂಸತ್ ಸದಸ್ಯರು ಮಾರ್ಚ್ 22 ರಂದು ದೇಶದ ಲೋಕಸಭೆ ಹಾಗೂರಾಜ್ಯ ಸಭೆಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಪಾಲ್ಗೊಳ್ಳದೇ ಅಧಿವೇಶನವನ್ನು ಬಹಿಷ್ಕರಿಸಿದ್ದಾರೆ ಹಾಗೂ ಜನರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ರಾಷ್ಟ್ರಾಧ್ಯಕ್ಷರ ಚಾಟಿ ಏಟು



ಇಡೀ ಜಗತ್ತನ್ನು - ಭಾರತವನ್ನು ತನ್ನ ಆರ್ಥಿಕ ರಾಜಕೀಯ ಹಿತಾಸಕ್ತಿಗೆ ಅನುಗುಣವಾಗಿ ತಿರುಚಲು ಹೊರಟಿರುವ ಸಾಮ್ರಾಜ್ಯಶಾಹಿ ದೈತ್ಯನ ಆಕ್ರಮಣವನ್ನು ಹಾಗೂ ಭಾರತದ ಆಳುವ ಈ ಆಕ್ರಮಣಕೋರರ ಷಡ್ಯಂತ್ರಗಳಿಗೆ ಸೋತು ಶರಣಾದ ದುರಂತವನ್ನು ನೋಡುತ್ತಾ ರಾಷ್ಟ್ರಾಧ್ಯಕ್ಷರಾಗಲೀ ಸುಮ್ಮನಿರಬಹುದೇ? ದೇಶದ ಕೋಟ್ಯಾಂತರ ಜನರ ಭಾವನೆಗಳಿಗೆ ಅಧಿಕಾರಸ್ಥರ ಜಾಣ ಕುರುಡು-ಕಿವುಡು ಪ್ರದರ್ಶಿಸುತ್ತಿರುವ ಜನರಿಗೆ ಚುರುಕು ಮುಟ್ಟಿಸುವ ಚಾಟಿ ಏಟು ಮುಟ್ಟಿ ನೋಡಿಕೊಳ್ಳುವಂತೆ ಕೊಟ್ಟಿದ್ದಾರೆ ರಾಷ್ಟ್ರಾಧ್ಯಕ್ಷರು.

ಬಿಲ್ ಕ್ಲಿಂಟನ್‌ರ ಗೌರವಾರ್ಥ ರಾಷ್ಟ್ರಾಧ್ಯಕ್ಷರು ಮಾರ್ಚ್ 22 ರಂದು ಏರ್ಪಡಿಸಿದ್ದ ಔತಣಕೂಟದಲ್ಲಿ ಶ್ರೀ ಕೆ.ಆರ್.ನಾರಾಯಣನ್‌ರವರು ದೇಶದ ಜನರ ಭಾವನೆಗಳಿಗೆ ದನಿ ಕೊಟ್ಟಿದ್ದಾರೆ. 'ಭಾರತ ದೇಶ ಒಂದು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಪಾಲಿಸುತ್ತದೆ, ಅಲಿಪ್ತ ನೀತಿಯನ್ನು ಎತ್ತಿ ಹಿಡಿಯುತ್ತದೆ" ಎಂದಿದ್ದಾರೆ ಮಾತ್ರವಲ್ಲ 'ಕಾಶ್ಮೀರ ಕಣಿವೆ ಜಗತ್ತಿನ ಅತ್ಯಂತ ಅಪಾಯಕಾರಿಯಾದ ಅಣ್ವಸ್ತ್ರ ಸಂಘರ್ಷ ಸಂಭವನೀಯ ಕ್ಷೇತ್ರ' ಎಂಬ ಅಮೆರಿಕಾದ ಎಚ್ಚರಿಕೆಯ ಹೇಳಿಕೆ, ಕಾಶ್ಮೀರ ಕಣಿವೆಯಲ್ಲಿ ಶಾಂತಿಯನ್ನು ಹಾಳುಗೆಡವಿ, ಭಯೋತ್ಪಾದನೆ, ಹಿಂಸೆಯನ್ನು ಸೃಷ್ಟಿಸ ಬಯಸುವ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟಂತಾಗುತ್ತದೆ ಎಂದು ನೇರವಾಗಿಯೇ ನುಡಿದಿದ್ದಾರೆ.


ಕಲ್ಕತ್ತದಲ್ಲೀ....

ಐ.ಟಿ. ಶೇರು ಮಾರುಕಟ್ಟೆ ಸುಗ್ಗಿ ಎಂಬ ನೀರ ಮೇ

ಇನ್ಫೋಸಿಸ್ ಶೇರು ವೀರರು ನಮ್ಮ ಆರ್ಥಿಕ ಸು

ಇನ್ಫೋಸಿಸ್ ಕರ್ನಾಟಕದ 'ಹೆಮ್ಮೆ'ಯ ಐಟಿ ಕಂಪನಿ. ಅದರ ಶೇರು ಬೆಲೆ ಏರುತ್ತಾ ಏರುತ್ತಾ ಗಗನ ತಲುಪಿದೆ. ಹತ್ತು ರೂಪಾಯಿ ಇನ್ಫೋಸಿಸ್ ಶೇರಿನ ಬೆಲೆ ಮಾರುಕಟ್ಟೆಯಲ್ಲಿ ಈಗ ಎಂಟು ಸಾವಿರ ರೂಪಾಯಿ. ಇನ್ನು ಹಲವು ಐಟಿ ಕಂಪನಿಗಳು, ಟಿ.ವಿ. ಕಂಪನಿಗಳು ಶೇರು ಮಾರುಕಟ್ಟೆ ಸುಗ್ಗಿ ಅನುಭವಿಸುತ್ತಿವೆ. ಇನ್ಫೋಸಿಸ್ ಶೇರು ಸುಗ್ಗಿಯನ್ನು ನೋಡಿ ಕರ್ನಾಟಕದ ಆರ್ಥಿಕ ಸುಗ್ಗಿ ಎಂದುಕೊಳ್ಳ ಬೇಕೆಂದು ನಮ್ಮ ಮುಖ್ಯ.ಮಂತ್ರಿ ಹೇಳುತ್ತಾರೆ. ಇಲ್ಲೇ ಯಾಕೆ ದೇಶದಾದ್ಯಂತ, ಜಗತ್ತಿನಾದ್ಯಂತ ಕೆಲವು ಬೆರಳೆಣಿಕೆಯ ಕಂಪನಿಗಳ ಶೇರು ಬೆಲೆಗಳ ಏರಿಳಿತ, ಆರ್ಥಿಕದ ಹವಾಮಾನ ಮಾಪಕ ಆಗಿ ಬಿಟ್ಟಿದೆ.

ಇದು ನಿಜವೇ? ಶೇರು ಮಾರುಕಟ್ಟೆಯಲ್ಲಿ ಸುಗ್ಗಿ ಎಂದರೆ ಜನರಿಗೆ ಸಮೃದ್ಧಿ ತರುವ ಸುಗ್ಗಿಯೇ? ಶೇರು ಮಾರುಕಟ್ಟೆಯ ಸುಗ್ಗಿಯೂ ಆರ್ಥಿಕದ ಸ್ಥಿತಿಗೂ ಏನೂ ಸಂಬಂಧವಿಲ್ಲ. ಬದಲಾಗಿ ಶೇರು ಮಾರುಕಟ್ಟೆಯ ಸುಗ್ಗಿ, ಏರುಪೇರು ಉತ್ಪಾದಕ ಹಣ ಹೂಡಿಕೆಗೆ, ಆರ್ಥಿಕಕ್ಕೆ ಮಾರಕವಾಗಬಲ್ಲುದು ಎಂದು ವಿವರಿಸುವ ಲೇಖನ.

ಶರತ್‌ಚಂದ್ರ

ನಮ್ಮ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ಕೂಡಲೇ "ನಾನು ಇನ್ಫೋಸಿಸ್‌ನ ಮುಖ್ಯಸ್ಥರಾದ ನಾರಾಯಣ ಮೂರ್ತಿಯವರನ್ನು ಕಾಣಬೇಕು. ಅವರಿಂದ ನಾನು ಕಲಿಯುವುದು ಬಹಳ ಇದೆ" ಎಂದಿದ್ದರು. ಇದಕ್ಕೆ ಅವರು ಕೊಟ್ಟ ಕಾರಣ "ನಾರಾಯಣ ಮೂರ್ತಿಯವರ ನಾಯಕತ್ವದಲ್ಲಿ ಇನ್ಫೋಸಿಸ್ ಅದ್ಭುತ ಪ್ರಗತಿ ಸಾಧಿಸಿದೆ. ಅವರಿಂದ ರಾಜ್ಯದ ಆರ್ಥಿಕತೆ ನಡೆಸುವುದರಲ್ಲಿ ಬಹಳ ಕಲಿಯುವುದಿದೆ" ಎಂದು.

ಇನ್ಫೋಸಿಸ್ ಒಂದು ಐಟಿ (ಮಾಹಿತಿ ತಂತ್ರಜ್ಞಾನ) ಕಂಪನಿ. ಕಂಪ್ಯೂಟರ್ ಸಾಫ್ಟ್‌ವೇರ್ ರಫ್ತು ಮಾಡುವುದೇ ಪ್ರಮುಖ ವಹಿವಾಟು ಆಗಿರುವ ಕಂಪನಿ.

ಇನ್ಫೋಸಿಸ್ ಸಾಧನೆ'

ಇನ್ಫೋಸಿಸ್‌ನ ಸಾಧನೆಯಾದರೂ ಏನು? 1980 ರಲ್ಲಿ 7 ಜನ ಕಂಪ್ಯೂಟರ್ ಇಂಜನೀಯರುಗಳು ಸ್ಥಾಪಿಸಿದ ಈ ಕಂಪನಿ 1990 ರ ದಶಕದಲ್ಲಿ ದೊಡ್ಡದಾಗಿ ಬೆಳೆದಿದೆ. ಈಗ 5 ಸಾವಿರಕ್ಕೂ ಹೆಚ್ಚು ಇಂಜಿನೀಯರುಗಳನ್ನು ಹೊಂದಿದ್ದು, ಸುಮಾರು 500 ಕೋಟಿ ವಹಿವಾಟಿನ ಕಂಪನಿಯಾಗಿ ಬೆಳೆದಿದೆ. ಆದರೆ ಇನ್ಫೋಸಿಸ್ ಹೆಚ್ಚಿನ ಗಮನ ಸೆಳೆದಿರುವುದು ಅದರ ಶೇರುಗಳ ಬೆಲೆ ನಾಗಾಲೋಟದಿಂದ ಏರುತ್ತಿರುವುದರಿಂದ. ಕೆಲವು ತಿಂಗಳುಗಳ ಹಿಂದೆ ಅದರ 10 ರೂ. ಶೇರು ಬೆಲೆ ಮಾರುಕಟ್ಟೆಯಲ್ಲಿ 15-16 ಸಾವಿರಕ್ಕೆ ಮುಟ್ಟಿತ್ತು. ಒಂದು ಶೇರು ಬೆಲೆ 10 ಸಾವಿರ ದಾಟಿದ ಎರಡು ಮೂರು ಕಂಪನಿಗಳಲ್ಲಿ ಇದು ಒಂದಾಗಿತ್ತು. ಶೇರು ಬೆಲೆಯ ಆಧಾರದ ಮೇಲೆ ಇನ್ಫೋಸಿಸ್‌ನ ಮಾರುಕಟ್ಟೆ ಬಂಡವಾಳ ಸುಮಾರು 40 ಸಾವಿರ ಕೋಟಿ ರೂ. ಅರೆ! ಇದು ಹೇಗೆ ಎಂದಿರಾ? 500 ಕೋಟಿರೂ. ವಹಿವಾಟು ಮಾಡುವ ಕಂಪನಿಯ ಮಾರುಕಟ್ಟೆ ಬೆಲೆ 80 ಪಟ್ಟು ಹೆಚ್ಚು ಹೇಗೆ ಎಂದಿರಾ? ಅದೇ ಐಟಿ ಕಂಪನಿಗಳ ಶೇರು ಮಾರುಕಟ್ಟೆಯ ಸುಗ್ಗಿಯ ಸ್ವಾರಸ್ಯ. ಇದು ಇನ್ಫೋಸಿಸ್‌ನ ಕಥೆ ಮಾತ್ರವಲ್ಲ ವಿಪ್ರೋ ಮತ್ತು ಸತ್ಯಮ್ ಸಾಫ್ಟ್‌ವೇರ್ ಎಂಬ ಇನ್ನೆರಡು ಕಂಪನಿಗಳ ಬೆಲೆಗಳೂ ಹೀಗೆ ಇವೆ. ಅದು ಮಾತ್ರವಲ್ಲ ಇನ್ಫೋಸಿಸ್ ಶೇರು ಬೆಲೆ ಎಷ್ಟು ದುಬಾರಿಯಾಗಿದೆಯೆಂದರೆ, ಶೇರು ಬೆಲೆ ಹಲವು ಜನರಿಗೆ 'ಎಟುಕಬೇಕೆಂದು' ಶೇರನ್ನು ಇಬ್ಭಾಗ ಮಾಡಬೇಕಾಯಿತು. ಅಂದರೆ ಒಂದು ಶೇರು ಇದ್ದವರಿಗೆ ಎರಡು ಶೇರುಗಳನ್ನು ಕೊಟ್ಟು ಮಾರುಕಟ್ಟೆ ಬೆಲೆಯನ್ನು ಅರ್ಧಕ್ಕಿಳಿಸಬೇಕಾಯಿತು (ಎಂಟು ಸಾವಿರಕ್ಕೆ). ಶೇರು ಕೊಳ್ಳುವುದು ಶೇರಿನ ಮೇಲೆ ಬರುವ ಆದಾಯಕ್ಕಾಗಿ. ಆದರೆ ಪ್ರತಿ ಶೇರಿನ ಮೇಲೆ ಆದಾಯ (ಅಥವಾ ಡಿವಿಡೆಂಡ್)ದ 500 ಪಟ್ಟು ಮಾರುಕಟ್ಟೆ ಬೆಲೆ ಇದೆ! ಅಂದರೆ ಇವತ್ತು ಈ ಶೇರನ್ನು ಕೊಂಡರೆ ಆತನಿಗೆ 500 ರೂ.ಗೆ ಕೇವಲ 1 ರೂ. ಆದಾಯ ಬರುತ್ತದೆ. ಹಾಗಾದರೆ ಈ ಶೇರುಗಳನ್ನು ಜನ ಮುಗಿಬಿದ್ದು ಯಾಕೆ ಕೊಳ್ಳುತ್ತಾರೆ? ಜನ ಯಾಕೆ ಲಾಟರಿ ಟಿಕೇಟುಗಳನ್ನು ಕೊಳ್ಳುತ್ತಾರೆ! ಜನ ಯಾಕೆ ಜೂಜು ಆಡುತ್ತಾರೆ-ಈ ಪ್ರಶ್ನೆಗಳಿಗೆಲ್ಲಾ ಒಂದೇ ಉತ್ತರ. ಆದರೆ ನಾವು ನೋಡಬೇಕಾಗಿರುವುದು ಬೇರೆನೆ.



ಇನ್ಫೋಸಿಸ್ ಮಾಲಿಕ ನಾರಾಯಣ ಮೂರ್ತಿ

ಶೇರು ಸುಗ್ಗಿ-ನೀರ ಮೇಲಣ ಗುಳ್ಳೆ


ಕಂಪನಿಯ ವಹಿವಾಟಿನ(ಒಟ್ಟು ಆಸ್ತಿಯು ಅಷ್ಟೂ ಇಲ್ಲ) 80 ಪಟ್ಟು ಮಾರುಕಟ್ಟೆ ಬೆಲೆಗೆ ಏನಾದರೂ ಅರ್ಥ ಇದೆಯೇ? 500 ರೂ.ಗೆ ಕೇವಲ 1 ರೂ. ಡಿವಿಡೆಂಟ್ ಕೊಡುವ ಶೇರು ಬೆಲೆ ಹಾಗೆ ಇರುತ್ತದೆಯೇ? ಇದು ಆರ್ಥಿಕ ಉತ್ಕರ್ಷದ ಸೂಚನೆಯೇ? ಇವೆಲ್ಲದ್ದಕ್ಕೂ ಉತ್ತರ ಅಲ್ಲ ಎಂಬುದು. ಇವೆಲ್ಲ ನೀರ ಮೇಲಣ ಗುಳ್ಳೆ ಎಂಬುದು ಯಾಕೆ?

ಮೊದಲನೆಯದಾಗಿ ಶೇರಿನ ಮಾರುಕಟ್ಟೆ ಬೆಲೆಗೂ, ಕಂಪನಿಯ ಉತ್ಪಾದನಾ ಸಾಮರ್ಥ್ಯ/ಚಟುವಟಿಕೆಗೂ, ಅದರಿಂದ ದೇಶದ ಆರ್ಥಿಕಕ್ಕೆ ಬರುವ ಕೊಡುಗೆಗೂ ಏನೂ ಸಂಬಂಧ ಇಲ್ಲ. ಈಗ ಯಾವುದೇ ಐಟಿ ಕಂಪನಿಯ ಶೇರಿನ ಬೆಲೆ ತೇಜಿಯಲ್ಲೇ ಇದೆ. ಏನೂ ಸಂಪನ್ಮೂಲ(ಮಾನವ ಅಥವಾ ಇತರ) ಇಲ್ಲದ ಐಟಿ ಕಂಪನಿಗಳು ಶೇರು ಮಾರುಕಟ್ಟೆ ಬಂದಾಗ ಅದಕ್ಕೆ ಭಾರೀ ಬೆಲೆ ಕಟ್ಟುತ್ತದೆ. 10 ಜನ ಇಂಜಿನಿಯರುಗಳು, ಆರು ಕಂಪ್ಯೂಟರ್ ಇರುವ ಮದ್ರಾಸಿನ ಕಂಪನಿಯೊಂದು ಇತ್ತೀಚಿಗೆ ಶೇರು ಮಾರುಕಟ್ಟೆಗೆ ಬಂದು ಒಂದೇ ವಾರದಲ್ಲಿ ಒಂದು ಕೋಟಿ ಸಂಪಾದಿಸಿತಂತೆ. ಐಟಿ ಕಂಪನಿಗಳ ಶೇರಿಗೆ ಇತರ ಕಂಪನಿಗಳ ಶೇರಿಗಿಂತ ಹೆಚ್ಚಿನ ಬೆಲೆ ಬರಲು, ಸ್ವಲ್ಪ ಮಟ್ಟಿಗೆ ನೈಜ ಆಧಾರಗಳಿವೆ. ಅಮೆರಿಕ ಮುಂತಾದ ಅಭಿವೃದ್ಧಿ ದೇಶಗಳಲ್ಲಿ ಸಾಫ್ಟ್‌ವೇರ್ ಆಮದಿಗೆ ದೊಡ್ಡ ಬೇಡಿಕೆ ಇರುವುದು, ನಮ್ಮಲ್ಲಿ ದೊಡ್ಡ ಪ್ರಮಾಣದ ಸಾಫ್ಟ್‌ವೇರ್ ರಫ್ತು ಸಾಮರ್ಥ್ಯ ಇರುವುದು, ವಿನಿಮಯ ದರದಿಂದಾಗಿ ನಮ್ಮ ರಫ್ತು ಅಗ್ಗವಾಗಿರುವುದು - ಇವೆಲ್ಲ ಕಾರಣಗಳಿಂದ ಐಟಿ ಕಂಪನಿಗಳಿಗೆ ಹೆಚ್ಚಿನ ಲಾಭ ಗಳಿಸುವ ಸಾಧ್ಯತೆ ಇದೆ. ಆದರೆ ಕಂಪನಿಯ ವಹಿವಾಟಿನ 80 ಪಟ್ಟು ಶೇರು ಬೆಲೆಗೆ, ಏನೇನೂ ಅರ್ಥ ಇಲ್ಲ. ಇದು ಯಾವುದೇ ರೀತಿಯಲ್ಲಿ ಆ ಕಂಪನಿಯ ಅಥವಾ ಆ ಕ್ಷೇತ್ರದ ಕೈಗಾರಿಕೆಯ ಸಾಮರ್ಥ್ಯ ಹೆಚ್ಚಿಸಲು ಸಹಾಯವಾಗುವುದಿಲ್ಲ. ಈ ಕಂಪನಿಯ ಶೇರುದಾರರು ಅತ್ಯಂತ ಹೆಚ್ಚು ಲಾಭ ಮಾಡುತ್ತಾರೆ ಅಂತ ಬಿಟ್ಟರೆ, ಬೇರೆ ಯಾವುದೇ ಇದಕ್ಕೆ ಅರ್ಥ ಇಲ್ಲ. ಆದರೆ ಅದೂ ಪೂರ್ತಿ ನಿಜವಲ್ಲ. ಉದಾಹರಣೆಗೆ ಆ ಸಂಸ್ಥೆಯ ಅಧ್ಯಕ್ಷ ನಾರಾಯಣ ಮೂರ್ತಿಗಳು ಕಂಪನಿಯ ಶೇಕಡಾ 20 ಶೇರು ಹೊಂದಿದ್ದಾರೆ. ಅವರು ತಮ್ಮ ಶೇಕಡಾ 10 ಶೇರನ್ನು ಮಾರಿ, ಅದರ 'ಬೆಲೆ' ಗಳಿಸಲು ಪ್ರಯತ್ನಿಸುತ್ತಾರೆ ಎಂದಿಟ್ಟುಕೊಳ್ಳಿ. ಈ ಸುದ್ದಿಯೇ ಎಲ್ಲರನ್ನು ಗಾಬರಿಗೊಳಿಸಿ ಅದರ ಶೇರು ಬೆಲೆ ಬಿದ್ದು ಹೋಗಿ ಶೇರಿನ 'ಬೆಲೆ' ಅರ್ಥಹೀನವಾಗಬಹುದು. ಇದು ಯಾವುದೇ ಶೇರುದಾರರ ಸಾಕಷ್ಟು ದೊಡ್ಡ ಗುಂಪು ಮಾರಲೂ ಪ್ರಯತ್ನಿಸಿದರೂ ಆಗಬಹುದು. ಉದಾಹರಣೆಗೆ ಅದರ ಬೆಲೆ ಜಾಸ್ತಿಯಾಗಿರುವುದೇ, ವಿದೇಶಿ ಹಣಕಾಸು ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಇನ್ಫೋಸಿಸ್ ಶೇರು ಖರೀದಿಸಿದ್ದರಿಂದ. ಈ ಸಂಸ್ಥೆಗಳು (ಕಂಪನಿ ವಹಿವಾಟು ಚೆನ್ನಾಗಿ ನಡೆಯುತ್ತಿದ್ದರೂ) ಜಗತ್ತಿನ ಬೇರೆ ಎಲ್ಲೋ ಶೇರು ಖರೀದಿ ಹೆಚ್ಚಿನ ಲಾಭ ತರುತ್ತದೆಯೆಂದು ಆ ಶೇರುಗಳನ್ನು ಮಾರಲು ಆರಂಭಿಸಿದರೂ ... ಇದು ಕುಸಿಯಬಹುದು. ಈ ರೀತಿ ಆ ಶೇರುದಾರರಿಗೂ ಅದರ 'ಬೆಲೆ' ನಿಜವಲ್ಲ. ಒಂದು ಕೃತಕ ಜೂಜಿನಂತೆ. ಈ ರೀತಿ ಏನಾದರೂ ಆದರೆ ಎಲ್ಲಾ ಐಟಿ ಶೇರುಗಳು, ಮತ್ತು ಎಲ್ಲಾ ಶೇರುಗಳ ಬೆಲೆ ಕುಸಿದು 'ಮಹಾ ಕುಸಿತ' ಸಂಭವಿಸಬಹುದು. ಆದರೆ ನಿಜವಾಗಿ ಈ ಕಂಪನಿಗಳ ವಹಿವಾಟಿನಲ್ಲಾಗಲೀ, ಆದಾಯದಲ್ಲಾಗಲೀ, ಅಂದರೆ ನಿಜವಾದ ಆರ್ಥಿಕ ಚಟುವಟಿಕೆಯಲ್ಲಾಗಲೀ .. ಯಾವುದೇ ಬದಲಾವಣೆಯಿಲ್ಲದೆ ಇದು ಸಂಭವಿಸಬಹುದು.

ಶೇರು ಮಾರುಕಟ್ಟೆ ಮತ್ತು ಆರ್ಥಿಕ

ಹಿಂದೆ ರೇಡಿಯೋ, ಟಿ.ವಿ. ಸುದ್ದಿಗಳಲ್ಲಿ ಆರ್ಥಿಕ ಸುದ್ದಿ ಎಂದರೆ ಪ್ರಾಥಮಿಕ ಸರಕುಗಳ ಅಕ್ಕಿ, ಗೋಧಿ, ಎಣ್ಣೆ, ರೇಷ್ಮೆ, ಸಕ್ಕರೆ ಇತ್ಯಾದಿಗಳ ಪೇಟೆಧಾರಣೆ ಹೇಳಲಾಗುತ್ತಿತ್ತು. ಈಗ ಸೆನ್ಸೆಕ್ಸ್ ಅಂದರೆ ಒಟ್ಟು ಶೇರು ಮಾರುಕಟ್ಟೆ ಬೆಲೆಯ ಸೂಚಕವನ್ನು ಆರ್ಥಿಕ ಸುದ್ದಿ ಎಂದು ಹೇಳಲಾಗುತ್ತಿದೆ. ಇದಕ್ಕೂ ಯಾವುದೇ ಅರ್ಥ, ಸೆನ್ಸೆಕ್ಸ್ ಸೂಚಕಕ್ಕೂ ಆರ್ಥಿಕ ಬೆಳವಣಿಗೆಗೂ ಕುಸಿತ, ಹಿಂಜರಿಕೆಗೂ ಏನೂ ಸಂಬಂಧ ಇಲ್ಲ, ಹೇಗೆ?

ಹಲವು ಬಂಡವಾಳಶಾಹಿ ಆರ್ಥಿಕತಜ್ಞರೂ ವಾದಿಸುವಂತೆ ಶೇರು ಮಾರುಕಟ್ಟೆ ಸೂಚ್ಯಂಕ ಏರುತ್ತಿದ್ದರೆ, ಉತ್ಪಾದನೆಯಲ್ಲಿ ಹೂಡಲು ಹೆಚ್ಚಿನ ಬಂಡವಾಳ ಹರಿದು ಬರಲು ಉತ್ತೇಜಕವಾಗುತ್ತದೆ. ಉತ್ಪಾದನೆಯಲ್ಲಿ ಹೆಚ್ಚಿನ ಬಂಡವಾಳ ಹೂಡಿದಾಗ ಉತ್ಪಾದನೆ ಜಾಸ್ತಿ ಆಗುತ್ತದೆ. ಆರ್ಥಿಕ ಬೆಳವಣಿಗೆಯಾಗುತ್ತದೆ. ಆದರೆ ಬಂಡವಾಳ ಹೂಡಿಕೆ ಇಂತಹ ಸರಳ ನಿಯಮವನ್ನು ಅನುಸರಿಸುವುದಿಲ್ಲ. ಯಾಕೆಂದರೆ ಭಾರತದಲ್ಲಿ ಶೇರು ಮಾರುಕಟ್ಟೆಯಲ್ಲಿ ಶೇರು ಮಾರುವ ಕಂಪನಿಗಳು ಹೆಚ್ಚಿನವು ದೊಡ್ಡ ಪ್ರಸಿದ್ಧ, ಹೆಚ್ಚು ಬಂಡವಾಳ ಇರುವ ಕಂಪನಿಗಳೇ, ಅವುಗಳಿಗೆ ಬಂಡವಾಳಕ್ಕೆ ಶೇರು ಮಾರುಕಟ್ಟೆಗೆ ಬರುವ ಅಗತ್ಯವಿಲ್ಲ. ನಿಜವಾಗಿಯೂ ಬಂಡವಾಳದ ಅಗತ್ಯ ಇರುವುದು ಸಣ್ಣ ಕಂಪನಿಗಳಿಗೆ. ಉತ್ಪಾದನಾ ಕ್ಷೇತ್ರದ ಬಹುಭಾಗ ಉತ್ಪನ್ನಕ್ಕೆ ಕಾರಣರಾದವರು ಇವರೆ. ಇಂದು ಐಟಿ ಕ್ಷೇತ್ರದಲ್ಲಿ ಭಾರಿ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವೂ ಈ ಸಣ್ಣ ಕೈಗಾರಿಕೋದ್ಯಮಿಗಳದ್ದೇ ಎಂದು ಮರೆತು ಬಿಡಬಹುದು. ಆದರೆ ಇವರು ಹೆಚ್ಚಾಗಿ ಶೇರು ಮಾರುಕಟ್ಟೆಯಲ್ಲಿ ಇಲ್ಲ. ಬಂದರೂ ಆಗಲೇ ಯಾವುದೇ ಉತ್ಪನಕ್ಕೆ, ಲಾಭದ ಪ್ರಮಾಣಕ್ಕೆ ಪ್ರಸಿದ್ಧವಾಗಿರದಿದ್ದರೆ ಭಾರಿ ಪ್ರಯೋಜನವಾಗು



ಎಂದೂ ಲಾಭ ಮಾಡದ ಕಂಪನಿಗಳ ಶೇರುಗಳಿಂದ ತೇಜಿ

ನಮ್ಮ ದೇಶದಲ್ಲಿ ಐಟಿ ಶೇರುಗಳ ತೇಜಿ ಸಹ ಅಮೆರಿಕದಲ್ಲಿ ಇಂತಹುದೇ ತೇಜಿಯ ಪರಿಣಾಮ ಇನ್ಫೋಸಿಸ್ ಶೇರು 'ಬೆಲೆ' ಗಗನಕ್ಕೇರಲು ಒಂದು ಕಾರಣ. ಅವರ ಶೇರು ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ರಿಜಿಸ್ಟರ್ಡ್ ಆಗಿರುವುದು(ಈ ರೀತಿ ಮಾಡಿರುವ ಮೊದಲ ಕಂಪನಿ ಇನ್ಫೋಸಿಸ್ ಆಗಿತ್ತು). ಅಮೆರಿಕದಲ್ಲಿ ಐಟಿ ಕಂಪನಿಗಳ ಶೇರುಗಳಲ್ಲಿ ತೇಜಿ ಅದೇ ಅಲ್ಲದೆ ಶೇರು ಮಾರುಕಟ್ಟೆಯಲ್ಲಿ ತೇಜಿ ಇನ್ನೂ ಹೆಚ್ಚು ಕೃತಕ. ಸಾಬೂನಿನ ಗುಳ್ಳೆ.

ಉದಾಹರಣೆಗೆ ಹಲವು ಡಾಟ್ ಕಾಮ್ ಕಂಪನಿಗಳು(ಇಂಟರ್ ನೆಟ್‌ನಲ್ಲಿ ಬರಿಯ ಜನಪ್ರಿಯ ವೆಬ್‌ಸೈಟ್ ಹೊಂದಿರುವ ಕಂಪನಿಗಳು) ಈವರೆಗೆ ಯಾವುದೇ ಲಾಭ ಮಾಡಿರದಿದ್ದರೂ ಅದರ ಶೇರುಗಳ ಮಾರುಕಟ್ಟೆ ಬೆಲೆ ಆ ಕಂಪನಿಗಳ ವಹಿವಾಟಿನ ಹಲವು ಪಟ್ಟು ಇದೆ. ಅಮೆಝಾನ್-ಡಾಟ್ ಕಾಮ್ ಮತ್ತು ಯಾಹೋ ಡಾಟ್ ಕಾಮ್ ಇಂತಹ ಕಂಪನಿಗಳು. ಆ ಎರಡೂ ಕಂಪನಿಗಳು ಕಳೆದ 3-4 ವರ್ಷಗಳಿಂದ ಯಾವುದೇ ಲಾಭ ಮಾಡಿಲ್ಲ.

ಅಮೆರಿಕದ ಒಟ್ಟು ಶೇರು ಮಾರುಕಟ್ಟೆ 'ಬೆಲೆ' ಆ ದೇಶದ ಒಟ್ಟು ವಾರ್ಷಿಕ ಉತ್ಪಾದನೆಯ ಒಂದುವರೆ ಪಟ್ಟು! ಇದರಿಂದ ಈ ಶೇರು ಮಾರುಕಟ್ಟೆ ತೇಜಿ ಎಷ್ಟು ಎಂದು ಗೊತ್ತಾಗುತ್ತದೆ. ಇಡೀ ಜಗತ್ತಿನ ಒಟ್ಟು ಉತ್ಪಾದನೆಯ ಸುಮಾರು ಶೇಕಡಾ 40 ರಷ್ಟು!

70 ವರ್ಷದ ಹಿಂದಿನ ಮಹಾ ಕುಸಿತದ ನೆನಪು ಈಗ ಹಲವರನ್ನು ಕಾಡಿಸುತ್ತಿದೆ. ಮಹಾ ಆರ್ಥಿಕ ಕುಸಿತ'ದ ಸ್ವಲ್ಪ ಮೊದಲು ಇದೇ ರೀತಿ ಶೇರು ಬೆಲೆಗಳು ವಿಪರೀತ ಏರಿದ್ದವಂತೆ. ಆಗಲೂ ಶೇರು ಮಾರುಕಟ್ಟೆ ಬೆಲೆ ವಾರ್ಷಿಕ ಉತ್ಪಾದನೆಯ ದೊಡ್ಡ ಭಾಗವಾಗಿತ್ತಂತೆ. ಶೇರು ಮಾರುಕಟ್ಟೆಯ ಈ ಹುಸಿ 'ಆರ್ಥಿಕ' ನಿಜವಾದ ಆರ್ಥಿಕವನ್ನು ನುಂಗೀತೆ? ಕಾದು ನೋಡಬೇಕು.

ಆದರೆ ಈ ಆರ್ಥಿಕ ನಿಯಂತ್ರಣವನ್ನು ನಾರಾಯಣಮೂರ್ತಿ, ಕೃಷ್ಣರ ಕೈಯಿಂದ ಕಿತ್ತುಕೊಂಡು ನಾವು ತೆಗೆದುಕೊಳ್ಳೋಣ!

...ಗುಳ್ಳೆ

...ರಿಸಲಾರರು!

ವುದಿಲ್ಲ. ಆದ್ದರಿಂದ ಸಣ್ಣ ಕಂಪನಿಗಳಾಗಲೀ, ದೊಡ್ಡ ಕಂಪನಿಗಳಾಗಲೀ ಹೊಸ ಉತ್ಪಾದನೆಗೆ ಬಂಡವಾಳ ತೊಡಗಿಸುವಲ್ಲಿ ಶೇರು ಮಾರುಕಟ್ಟೆ ತೇಜಿ ಯಾವುದೇ ರೀತಿಯಲ್ಲಿ ಸಹಾಯಕವಾಗುವುದಿಲ್ಲ. ಆ ಕ್ಷೇತ್ರಗಳಲ್ಲಿ ಬೇಡಿಕೆ, ಲಾಭದ ಪ್ರಮಾಣ ಬಂಡವಾಳ ತೊಡಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.


ಶೇರು ಮಾರುಕಟ್ಟೆ ಸುಗ್ಗಿ - ಉತ್ಪಾದನೆಗೆ ಕಂಟಕ


ಆದರೆ ನಿಜವಾಗಿಯೂ ಶೇರು ಮಾರುಕಟ್ಟೆ ತೇಜಿ ಉತ್ಪಾದನಾ ಹೂಡಿಕೆಗೆ ಕಂಟಕವಾಗಬಹುದು. ಇದು ಎರಡು ರೀತಿಯಲ್ಲಿ ಆಗಬಹುದು. ಒಂದನೆಯದಾಗಿ ಕೈಗಾರಿಕೆಯಲ್ಲಿ ಬಂಡವಾಳ ಹೂಡಿಕೆ ಲಾಭಕ್ಕೆ ತಾನೆ? ಶೇರು ಮಾರುಕಟ್ಟೆ ತೇಜಿ ಕಾಲದಲ್ಲಿ, ಸಾಕಷ್ಟು ಹಣ ಇರುವ ಒಬ್ಬ ಶೇರುಗಳನ್ನು ಕೊಳ್ಳುವುದು-ಮಾರುವುದರ ಮೂಲಕ ಅದೇ ಲಾಭವನ್ನು ಸುಲಭವಾಗಿ ಸಂಪಾದಿಸುವ ಸ್ಥಿತಿ ಇದ್ದರೆ, ಕೈಗಾರಿಕೆ ಹೂಡುವ ಬದಲು ಆ ಹಣವನ್ನು ಶೇರುಗಳನ್ನು ಕೊಳ್ಳುವುದಕ್ಕೆ ಬಳಸಬಹುದು. ಅದೇ ರೀತಿ ಕೈಗಾರಿಕೆ ಸ್ಥಾಪನೆಗೆ ಸಾಲಕೊಡುವ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳು ಇದೇ ರೀತಿ ಮಾಡಬಹುದು - ತಮ್ಮ ಬಂಡವಾಳವನ್ನು ಶೇರು ಮಾರುಕಟ್ಟೆಯಲ್ಲೇ ತೊಡಗಿಸಬಹುದು ಹೆಚ್ಚಿನ ಲಾಭಕ್ಕಾಗಿ. ಇದರಿಂದಾಗಿ ಉತ್ಪಾದನೆ ಬಂಡವಾಳ ದೊರಕದೇ ಹೋಗಬಹುದು.

ಹಿಂದೆ (90 ರ ದಶಕದ ಆರಂಭದಲ್ಲಿ) ಹರ್ಷದ್ ಮೆಹ್ತಾನ ಚಟುವಟಿಕೆಯಿಂದ ಬಂದ ಶೇರು ಮಾರುಕಟ್ಟೆ ಸುಗ್ಗಿಯ ಅವಧಿ ಕೈಗಾರಿಕಾ ಕ್ಷೇತ್ರದ ಉತ್ಕರ್ಷದ ಅವಧಿ ಆಗಿರಲ್ಲ. ಅದರ ಬದಲಾಗಿ ಕೈಗಾರಿಕಾ ಸ್ಥಗಿತತೆಯ ಅವಧಿಯಾಗಿತ್ತು. ಆಗ ನರಸಿಂಹರಾಯರ ಸರ್ಕಾರ ಶೇರು ಮಾರುಕಟ್ಟೆ ಸುಗ್ಗಿ ತೋರಿಸಿ, ಇದು ಜಾಗತೀಕರಣ/ಉದಾರೀಕರಣ/ಖಾಸಗೀಕರಣದ ನೀತಿಗಳ ವಿಜಯದ ಪ್ರತೀಕ ಎನ್ನುತ್ತಿತ್ತು. ಆದರೆ ಈ ಶೇರು ಮಾರುಕಟ್ಟೆ ಸುಗ್ಗಿ, ಹರ್ಷದ್ ಮೆಹ್ತಾ ಮತ್ತು ಕೆಲವು ಭ್ರಷ್ಟ ಹಣಕಾಸು ಸಂಸ್ಥೆಗಳ ಅಧಿಕಾರಿಗಳು ಸೇರಿ ಹೂಡಿದ ನಾಟಕ ಎಂದು ಈಗ ಜಗಜ್ಜಾಹೀರಾಗಿದೆ.

ಶೇರು ಮಾರುಕಟ್ಟೆ ಸುಗ್ಗಿ, ಉತ್ಪಾದನೆಗೆ ಬಂಡವಾಳ ಹೂಡಿಕೆಗೆ ಕಂಟಕವಾಗಬಹುದು. ಆದರೆ ಇದರ ವಿರುದ್ಧ ನಿಜವಲ್ಲ, ಅಂದರೆ ಶೇರು ಮಾರುಕಟ್ಟೆ ಕುಸಿತ, ಉತ್ಪಾದನೆಯಲ್ಲಿ ಬಂಡವಾಳ ಹೂಡಿಕೆಗೆ ಸುಗ್ಗಿಯಲ್ಲ, ಭಾರಿ ಶೇರು ಮಾರುಕಟ್ಟೆ ಕುಸಿತವಾದಾಗ ಆರ್ಥಿಕಕ್ಕೆ ಪರೋಕ್ಷವಾಗಿ ಭಾರಿ ಹಾನಿ ಆಗಬಹುದು. ಕುಸಿತವೂ ಬರಬಹುದು. ಹೇಗೆ? ಶೇರು ಮಾರುಕಟ್ಟೆಯಲ್ಲಿ ಹೆಚ್ಚುವರಿ ಹಣ ಇರುವ ಮಧ್ಯಮವರ್ಗದವರು, ಶ್ರೀಮಂತರು, ದೇಶಿ-ವಿದೇಶಿ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಹಣ ತೊಡಗಿಸುತ್ತವೆ. ಶೇರು

ಪುಟ 8 ಕ್ಕೆ





ಕೆಜಿಎಫ್ ಕಾರ್ಮಿಕರ ವೀರ ಹೋರಾಟ

ಕೆ.ಜಿ.ಎಫ್ ಚಿನ್ನದ ಗಣಿ ಕಾರ್ಖಾನೆ ಪ್ರಾರಂಭಿಸಿದ ಯುರೋಪಿಯನ್ನರ ಕಾಲಡಿಯಲ್ಲಿ 1880 ರಿಂದ 1932ರ ವರೆಗೆ ಗುಲಾಮಗಿರಿಯಲ್ಲಿ ದುಡಿಯುತ್ತಾ ಬಂದ ಕಾರ್ಮಿಕರು, ಸಾವಿರಾರು ಕಾರ್ಮಿಕರ ಸಾವು ನೋವುಗಳು ಕೆಟ್ಟ ಜೀವನ ಸ್ಥಿತಿಯ ವಿರುದ್ಧ (ಪ್ರತ್ಯೇಕ ಬಾಕ್ಸ್ ನೋಡಿ) ಬ್ರಿಟಿಷರ ದಬ್ಬಾಳಿಕೆ ಅಟ್ಟಹಾಸವನ್ನು ವಿರೋಧಿಸಿ ಪ್ರತಿಭಟಿಸತೊಡಗಿದರು. ಆಗ ಕಾರ್ಮಿಕರ ಎದೆಯಲ್ಲಿ ಚಿಗುರೊಡೆಯಿತು ಸಂಘಟನೆಯ ಬೀಜ. ಸುಮಾರು 50 ವರ್ಷಗಳ ಕಾಲ ಮೂಕ ಪ್ರಾಣಿಗಳಂತೆ ದುಡಿಯುತ್ತಾ ಬಂದ ಕಾರ್ಮಿಕರು ಸ್ವಾಭಿಮಾನ, ದುಡಿಮೆಯ ಶಕ್ತಿಯನ್ನು ಅರಿಯ ತೊಡಗಿದರು.

ಬಿ.ರಾಜಶೇಖರ ಮೂರ್ತಿ

1932ರ ನಂತರದಲ್ಲಿ ಮುಖ್ಯವಾಗಿ ಕಾರ್ಮಿಕರಿಗೆ ಕನಿಷ್ಟಕೂಲಿ, ಆಸ್ಪತ್ರೆ, ಆಹಾರ ದಾನ್ಯ, ಕಾರ್ಮಿಕರ ಮಕ್ಕಳಿಗೆ ಶಾಲೆ ಮುಂತಾದ ಬೇಡಿಕೆಗಳ ಆಧಾರದಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರತಿಭಟಿಸಿದರು. 1939ರಲ್ಲಿ ಎನ್.ಆರ್. ಸಣ್ಮುಗಂ ಫಿಲಿಪ್ಸ್ ಪ್ರತಿಭಟನೆಯ ಮುಂದಾಳಾಗಿದ್ದರು. ಪ್ರತಿಭಟಿಸಿದ ಕಾರ್ಮಿಕರನ್ನು ವಜಾ ಮಾಡುತ್ತಿದ್ದರು. ದೇಶಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಪ್ರಜ್ಞಾವಂತರಾದ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಲು ಒತ್ತಾಯಿಸ ತೊಡಗಿದರು. ಕಾರ್ಮಿಕರ ನಿರಂತರ ಪ್ರತಿಭಟನೆಗೆ ಕಾರ್ಖಾನೆಯ ಮಾಲೀಕರು ಮಣಿಯಲೇ ಬೇಕಾಯಿತು. 1941 ರಲ್ಲಿ ಚಿನ್ನದ ಗಣಿ ಕಾರ್ಮಿಕರ ಸಂಘ ಉದಯವಾಯಿತು. ಆಗ ಪ್ರಮುಖವಾಗಿ ನಡೆಯುತ್ತಿದ್ದ ಮೈಸೂರು ಮೈನ್ಸ್, ಚಾಂಪಿಯನ್, ಊರಿಗಾಂ, ನಂದಿದುರ್ಗ ಗಣಿ ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಘಗಳು ಹಾಗೂ ವಿದ್ಯುಚ್ಛಕ್ತಿ ವಿಭಾಗ, ಇಟ್ಟಿಗೆ ತಯಾರಿಸುವ ಕಾರ್ಮಿಕರ ಸಂಘ ಹೀಗೆ ಬೇರೆ ಬೇರೆ ಕಾರ್ಮಿಕ ಸಂಘಗಳು ನೊಂದಾಯಿಸಲ್ಪಟ್ಟವು.

ಕಾರ್ಮಿಕ ಸಂಘಗಳನ್ನು ಬೇರ್ಪಡಿಸದೆ ಎಲ್ಲಾ ಸಂಘಗಳಿಗೆ ಒಬ್ಬರೇ ನಾಯಕರು ಬೇಕೆಂದೂ ಕಾರ್ಮಿಕರು ಒತ್ತಾಯಿಸ ತೊಡಗಿದರು. ಕಂಪನಿಯವರು ಒಪ್ಪಲಿಲ್ಲ. ಆ ನಂತರದಲ್ಲಿ ಕಾಂಗ್ರೆಸ್ ನಾಯಕರೇ ಕಾರ್ಮಿಕ ನಾಯಕರಾಗಿ ಬಂದರು ಆದರೆ ಕಾಂಗ್ರೆಸ್ ನಾಯಕರು ಸ್ವತಂತ್ರ್ಯ ಚಳುವಳಿಯಲ್ಲಿ ಜೈಲಿಗೆ ಹೊದ ನಂತರ ಕಾರ್ಮಿಕ ನಾಯಕರಾಗಿದ್ದ ಪಿ. ರಾಮಮೂರ್ತಿ ಮತ್ತು ವಿ.ಎಂ. ಗೋವಿಂದನ್ ರವರ ನೇತೃತ್ವದಲ್ಲಿ ಪ್ರತಿಭಟನೆಗಳು ಹೆಚ್ಚತೊಡಗಿದವು. ಕಾರ್ಮಿಕರ ಸಂಘಟನೆಗೆ ನಾಯಕರು ಮಾರ್ಗದರ್ಶನ ನೀಡತೊಡಗಿದರು. 1943 ರಲ್ಲಿ ಕಾಂಗ್ರೆಸ್‌ನಲ್ಲಿದ್ದ ಪಿ.ಎಸ್.ಕೆ. ಶರ್ಮಾರನ್ನು ಕಾರ್ಮಿಕ ನಾಯಕರನ್ನಾಗಿ ಆರಿಸಿತು. ಈ ನಾಯಕರು ಕಾರ್ಖಾನೆಯ ಆಡಳಿತವರ್ಗದ ಜೊತೆಸೇರಿದರು. ಕಾರ್ಮಿಕರು ಮಾತ್ರ ಬೇಡಿಕೆಗಳಿಗಾಗಿ ಕಾರ್ಖಾನೆಯ ಆಡಳಿತವರ್ಗದ ವಿರುದ್ಧ ಸಿಡಿದೇಳುತ್ತಿದ್ದರು. 1944 ರಲ್ಲಿ ಪ್ರಮುಖ ಗಣಿಯಾಗಿದ್ದ ಛಾಂಪಿಯನ್ ಶಾಂಫ್ಟ್ (ಗಣಿ) ಕಾರ್ಖಾನೆಯ ಕಾರ್ಮಿಕರು ಕೆ.ಎಸ್. ವಾಸನ್‌ರವರನ್ನು ಕಾರ್ಮಿಕ ನಾಯಕರನ್ನಾಗಿ ಆಯ್ಕೆ ಮಾಡಿದರು.

ಕೆ.ಎಸ್.ವಾಸನ್ ಗಣಿ ಕಾರ್ಮಿಕರೆಲ್ಲಾರನ್ನು ಸಂಘಟಿಸಿ ಐಕ್ಯತೆ ಮೂಡಿಸತೊಡಗಿದರು. ಮೊದಲ ಬಾರಿಗೆ ಕಾರ್ಮಿಕರ ಬಲದ ಮೇಲೆ ಎಂ.ಎಲ್.ಎ. ಆಗಿ ಆಯ್ಕೆಯಾಗಿದ್ದ ಕೆ.ಎನ್.ವಾಸನ್‌ರವರ ಭಾಷಣಕ್ಕೆ ಸಾವಿರಾರು ಕಾರ್ಮಿಕರು ಸೇರುತ್ತಿದ್ದರು. ಕಾರ್ಮಿಕರ ಹೋರಾಟವು ಉತ್ತುಂಗಕ್ಕೆ ಏರತೊಡಗಿತ್ತು. ಕಾರ್ಖಾನೆಯ ಮಾಲೀಕರಿಗೆ ದಿಗ್ಭ್ರಮೆ ಉಂಟಾಯಿತು. ಕಾರ್ಮಿಕರಿಂದ ಆಯ್ಕೆಯಾದ ಕೆ.ಎನ್.ವಾಸನ್, ವಿ.ಎಂ. ಗೋವಿಂದನ್ ಎ.ಪರಿ.ವಜ್ರ ಮೇಲು ಶೆಟ್ಟಿ ಹೋರಾಟದ ಮುಂತಾಳತ್ವ ವಹಿಸುತ್ತಿದ್ದರು. ಅಂದು ಕಾರ್ಮಿಕರ ಪ್ರಮುಖ ಬೇಡಿಕೆಗಳು

1. 8 ಗಂಟೆಗಳು ಮಾತ್ರ ದುಡಿಮೆ.
2. ನಿಗದಿತ ಕೂಲಿ ನೀಡುವುದು.
3. ಕಾರ್ಮಿಕರು ಕೆಲಸ ಮಾಡಲು ನಿಗದಿತ ಕಾರ್ಖಾನೆ.
4. ಕೆಲಸದಲ್ಲಿ ನಿರತರಾಗಿರುವ ಕಾರ್ಮಿಕರಿಗೆ ಅಸ್ಪತ್ರೆಯ ವ್ಯವಸ್ಥೆ
5. ರಜೆ ನೀಡುವುದು (Privilage leave)
6. ಕಾರ್ಮಿಕರ ಮಕ್ಕಳಿಗೆ ಶಾಲೆಗಳನ್ನು ತೆರೆಯುವುದು.
7. ಕಾರ್ಮಿಕರಿಗೆ ಸರ್ಕಾರಿ ರಜೆ ದಿನಗಳನ್ನು ನೀಡುವುದು.
8. ಕಾರ್ಮಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ
9. ಕಾರ್ಮಿಕರಿಗೆ ಆಹಾರ ದಾನ್ಯಗಳನ್ನು ಒದಗಿಸುವುದು.
10 ಭವಿಷ್ಯ ನಿಧಿ ಹಣದ ವ್ಯವಸ್ಥೆ (ಪಿ.ಎಫ್) ಮಾಡುವುದು
11. ಬೋನಸ್ ನೀಡುವುದು.
12. ಹೆಚ್ಚುವರಿ ಕೆಲಸಕ್ಕೆ (Over time) ಕೂಲಿ ನೀಡುವುದು.
13. ಭಾನುವಾರ ರಜೆ ನೀಡುವುದು.

ಈ ಬೇಡಿಕೆಗಳನ್ನು ಒತ್ತಾಯಿಸಿ, ಬ್ರಿಟಿಷರ ಹಿಡಿತದಲ್ಲಿ ನಲುಗಿದ್ದ ಕಾರ್ಮಿಕರು ಕಿಡಿಕಾರಿದರು.

ಕಾರ್ಮಿಕ ಸಂಘಟನೆಗಳು ಮಾಲೀಕರ ಅಟ್ಟಹಾಸಕ್ಕೆ ಕುಗ್ಗದೆ ಪ್ರಥಮ ಬಾರಿಗೆ ಸ್ಟ್ರೈಕ್ ಬ್ಯಾಲೆಟ್ (Strike Balet) ನ್ನು ನಡೆಸಿದರು. (ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರ ಹೂಡಲು ಕಾರ್ಮಿಕರ ಅಭಿಪ್ರಾಯವನ್ನು ಮತಗಣನೆ ಮೂಲಕ ಪಡೆಯುವುದಕ್ಕೆ ಸ್ಟ್ರೈಕ್ ಬ್ಯಾಲೆಟ್ ಎಂದು ಕರೆಯುತ್ತಾರೆ) ಶೇ.90 ಮತ ಹಾಕಿ ಕಾರ್ಮಿಕರು ಹೋರಾಡಲು ಸಜ್ಜಾದರು

1946 ಜನವರಿಯಲ್ಲಿ ಪ್ರಾರಂಭವಾದ ಮುಷ್ಕರ ಸುಮಾರು ಎರಡುವರೆ ತಿಂಗಳು ಅಂದರೆ 78 ದಿನಗಳ ಕಾಲ ನಡೆಯಿತು. ಕಾರ್ಖಾನೆ ಸಂಪೂರ್ಣವಾಗಿ ಸ್ಥಗಿತ ಗೊಂಡಿತ್ತು ಕಾರ್ಖಾನೆಯಲ್ಲಿ ಅಧಿಕಾರಿಗಳ ಕಚೇರಿ ಹಾಗೂ ಮನೆಗಳಲ್ಲಿ ಸಾನಿಟರಿ (ಕಕ್ಕಸು ಸ್ವಚ್ಛಗೊಳಿಸುವುದು) ಕೆಲಸ, ಮಾಡುವ ಕಾರ್ಮಿಕರು ಕೂಡಾ ಮುಷ್ಕರದಲ್ಲಿ ತೊಡಗಿದ್ದರು. ಚಿನ್ನದ ಗಣಿ ಕಾರ್ಖಾನೆಯ 26 ಸಾವಿರ ಕಾರ್ಮಿಕರೂ ಈ ಐತಿಹಾಸಿಕ, ಬೃಹತ್ ಮುಷ್ಕರದಲ್ಲಿ ಪಾಲ್ಗೊಂಡು ಯುರೋಪಿಯನ್ ಕಂಪನಿಯವರಿಗೆ ನಡುಕ ಹುಟ್ಟಿಸಿದ್ದರು. ಈ ಮಹತ್ತರ ಹೋರಾಟದಿಂದ ಕೆಲವು ಸವಲತ್ತುಗಳು ಕಾರ್ಮಿಕರಿಗೆ ಲಭ್ಯವಾದುವು.

ಪುಟ 12 ಕ್ಕೆ

ಸ್ವಾತಂತ್ರ್ಯಾಪೂರ್ವದಲ್ಲಿ ಕೆ.ಜಿ.ಎಫ್. ಕಾರ್ಮಿಕರ ಪರಿಸ್ಥಿತಿ

ಗಣಿ ಕಾರ್ಮಿಕರು ತಮಿಳುನಾಡಿನ ಮದ್ರಾಸು ಪ್ರಾಂತ್ಯದ ಉತ್ತರ ಆರ್ಕಾಟ್, ಸೇಲಂ, ಧರ್ಮಪುರಿ ಮತ್ತು ಮಲಬಾರ್ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದವರು. ಅಲ್ಲದೇ ಕೋಲಾರ ಜಿಲ್ಲೆಯ ಅಕ್ಕಪಕ್ಕದ ಹಳ್ಳಿಗಳ ಕಾರ್ಮಿಕರು ಕೂಡಾ ಸೇರಿದ್ದರು. ಅಲ್ಲದೆ, ಸ್ವಂತ ಆಸ್ತಿ ಇಲ್ಲದೆ ಜೀವನ ಸಾಗಿಸಲು ಸಾಧ್ಯವಾಗದ ಬಡ, ನಿರ್ಗತಿಕ ಕಾರ್ಮಿಕರು ಚಿನ್ನದ ಗಣಿ ಕಾರ್ಖಾನೆಯಲ್ಲಿ ಸೇರಿದ್ದರು. ಈ ಕಾರ್ಮಿಕರನ್ನು ದಿನಕ್ಕೆ 12,14,15 ಗಂಟೆಗಳ ಕಾಲ ವಿರಾಮವಿಲ್ಲದೆ ನಿರಂತರವಾಗಿ ದುಡಿಯುವಂತೆ ಮಾಲೀಕರು ಹಿಂಸಿಸುತ್ತಿದ್ದರು. ಅತಿ ಕಷ್ಟಕರವಾದ ಕೆಲಸಗಳನ್ನು ಕಾರ್ಮಿಕರು ಮಾಡಲಾಗದೆ ತಮ್ಮ ತಮ್ಮ ಊರುಗಳಿಗೆ ಓಡಿ ಹೋಗುತ್ತಿದ್ದರು. ಆಡಳಿತ ವರ್ಗ ಗಣಿ ಕಾರ್ಮಿಕರನ್ನು ಪತ್ತೆ ಮಾಡಲು ಕೈಗಳಿಗೆ ಗುರುತಿನ ಬಳೆಗಳನ್ನು ಹಾಕುತ್ತಿದ್ದರು. ಈ ಕಾರ್ಮಿಕರಿಗೆ ಹಾಕಿದ್ದ ಬಳೆಗಳನ್ನು ಕಾರ್ಮಿಕರೇ ಬಿಚ್ಚುಕೊಳ್ಳಲು ಆಗುತ್ತಿರಲಿಲ್ಲ. ಓಡಿ ಹೋಗುತ್ತಿದ್ದ ಕಾರ್ಮಿಕರನ್ನು ಹಿಡಿದು ತಂದು ಒತ್ತಾಯದಿಂದ ದುಡಿಸಿಕೊಳ್ಳುತ್ತಿದ್ದರು. ಗಣಿ ಕೆಲಸ ಅತಿ ಕಷ್ಟಕರ ಎಂಬುದರಿಂದಲೇ ಸ್ಥಳೀಯ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿರಲಿಲ್ಲ.

1880 ರಲ್ಲಿ ಯುರೋಪಿಯನ್ನರಾದ ಜಾನ್ ಟ್ರೇಲರ್ ಅಂಡ್ ಕಂಪನಿ ಚಿನ್ನದ ಗಣಿ ಪ್ರಾರಂಭಿಸಿದ ಸಮಯದಲ್ಲಿ ಯಾವುದೇ ರೀತಿಯ ವೈಜ್ಞಾನಿಕ ಸಲಕರಣೆಗಳನ್ನು ಅಳವಡಿಸಿಕೊಂಡಿರಲಿಲ್ಲ. ಕಾರ್ಮಿಕರಿಗೆ ಸಮವಸ್ತ್ರಗಳನ್ನೂ ನೀಡುತ್ತಿರಲಿಲ್ಲ. ಕಾರ್ಮಿಕರ ಸ್ವಂತ ಆಸ್ತಿಯಾದ ಬರೀ ಕಚ್ಚೆ ಪಂಚೆಗಳಲ್ಲೇ ಇರುತ್ತಿದ್ದರು, ಕಾರ್ಖಾನೆಯ ಪ್ರಾರಂಭದಲ್ಲಿ 28 ಸಾವಿರ ಕಾರ್ಮಿಕರು ಇದ್ದರು. ಕಾರ್ಮಿಕರನ್ನು ಕಾಂಟ್ರಾಕ್ಟ್ ಪದ್ಧತಿಯ ಮೂಲಕ ಸೇರಿಸಿಕೊಳ್ಳುತ್ತಿದ್ದರು. ತಾತ್ಕಾಲಿಕ ಟೆಂಟ್‌ಗಳನ್ನು ಹಾಕಿ ಕಾರ್ಮಿಕನರನ್ನು ಒಂದೇ ಕಡೆ ಕೂಡಿಡುತ್ತಿದ್ದರು. ಚಿನ್ನ ಸಿಗುವ ಕಡೆಗಳಿಗೆಲ್ಲಾ ಸ್ಥಳಾಂತರಿಸುತ್ತಿದ್ದರು. ಸಾವಿರಾರು ಅಡಿ ಭೂಮಿಯೊಳಗೆ ಇಳಿದು ಕೆಲಸ ಮಾಡುತ್ತಿರುವಾಗ ಗಾಳಿ ಭೂಮಿಯೊಳಗೆ ನುಗ್ಗಿ Rock Brust ಆಗುತ್ತಿತ್ತು. ಭೂಮಿಯೊಳಗೆ ಪ್ರಾಣ ಬಿಟ್ಟವರೆಷ್ಟೋ?) ಕಾರ್ಖಾನೆಯ ಪ್ರಾರಂಭದ ಹಂತದಲ್ಲಿಯೇ 4000 ಕಾರ್ಮಿಕರು ಕೆಲಸದಲ್ಲಿ ತೊಡಗಿದ್ದಾಗ ಅಪಘಾತಗಳಿಂದ ಅಸುನೀಗಿದ್ದಾರೆ. ಇದಲ್ಲದೆ ಕೆಲಸ ನಿರತ ಕಾರ್ಮಿಕರಲ್ಲಿ ಕೈಕಾಲು, ಕಣ್ಣು, ಮುಂತಾದ ಭಾಗಗಳನ್ನೇ ಕಳೆದುಕೊಂಡ ನತದೃಷ್ಟರೆಷ್ಟೋ?. ಚಿನ್ನ ಮಿಶ್ರಿತ ಮಣ್ಣಿನಿಂದ ಹೊರಹೊಮ್ಮುತ್ತಿದ್ದ ಸಿಲಿಕಾನ್ ಗಾಳಿ ಕಾರ್ಮಿಕರ ಶ್ವಾಸಕೋಶದಲ್ಲಿ ಹೋಗಿ ತೂತಾಗುತ್ತಿದ್ದವು. ಇದರಿಂದ ಸಾವಿರಾರು ಕಾರ್ಮಿಕರ ಗಂಟಲುಗಳೇ ಹೋಗಿವೆ. ಈ ಎಲ್ಲಾ ಕಾರಣದಿಂದಲೇ 'ಕೆಳಗೆ ಹೋದರೆ ಹೆಣ ಮೇಲೆ ಬಂದರೆ ಹಣ' ಎಂಬ ಗಾದೆ ಜನಜನಿತವಾಗಿದೆ. ಇಂಥ ನರಕ ಯಾತನೆಯ ಕೆಲಸವನ್ನು ಮಾಡದೆ ಕಾರ್ಮಿಕರು ಹಲವಾರು ಬಾರಿ ಪ್ರತಿಭಟಿಸುತ್ತಿದ್ದರು. ಪ್ರತಿಭಟಿಸಿದವರನ್ನು ವಜಾ ಮಾಡುತ್ತಿದ್ದರು. ಕಾರ್ಮಿಕರನ್ನು ಇಷ್ಟೆಲ್ಲಾ ಅಮಾನವೀಯವಾಗಿ ನಡೆಸಿಕೊಂಡರೂ ಆಡಳಿತ ವರ್ಗ ಮಾತ್ರ ಐಭೋಗದ ಜೀವನವನ್ನು ನಡೆಸುತ್ತಿದ್ದರು.

ಕಾರ್ಮಿಕರ ಪ್ರತಿಭಟನೆಯ ಒತ್ತಡ ಹೆಚ್ಚಾದಾಗ ಹಂದಿ ಗೂಡುಗಳಂತಿದ್ದ ಕ್ವಾಟ್ರಸ್‌ಗಳನ್ನು ಕಾರ್ಮಿಕರು ವಾಸಿಸಲು ನೀಡಿದ್ದರು. ಅವು ಎಂಟು ಅಡಿ ಚಚೌಕಾಕಾರದ ಬಿದಿರಿನ ತಟ್ಟೆಗಳ ಗೋಡೆಗಳಿರುವ ಗುಡಿಸಲುಗಳಾಗಿದ್ದವು. ಆ ಗುಡಿಸಲುಗಳಲ್ಲಿ ಹೆಂಡತಿ, ಮಕ್ಕಳು, ವಯಸ್ಸಾದ ತಂದೆತಾಯಿ ಎಲ್ಲರೂ ವಾಸಿಸಬೇಕಿತ್ತು. ಅಡಿಗೆ ಕೋಣೆ, ಸ್ನಾನದ ಮನೆ, ಮಲಗುವ ಕೋಣೆ ಎಲ್ಲವೂ ಈ ಎಂಟು ಅಡಿ ಚಚ್ಚೌಕದ ಕೋಣೆಯಲ್ಲಿಯೇ ನಡೆಯಬೇಕಿತ್ತು. ಕಾರ್ಮಿಕರಿಗೆ ನಿಗದಿತ ಕೂಲಿ ಇರಲಿಲ್ಲ., ಅವರಿಗೆ ರಜೆ ಎಂಬುದೇ ಗೊತ್ತಿರಲಿಲ್ಲ. ಕಾರ್ಮಿಕರ ಮಕ್ಕಳಿಗೆ ಶಾಲೆಗಳಿರಲಿಲ್ಲ, ಆಸ್ಪತ್ರೆಗಳಿರಲಿಲ್ಲ. ಕಾರ್ಮಿಕರು ಪ್ರತಿಭಟಿಸುವಂತಿರಲಿಲ್ಲ. ಕಾರ್ಮಿಕರು ಕಾರ್ಖಾನೆಗೆ ಸಾವಿರಾರು ಟನ್ನುಗಳಷ್ಟು ಚಿನ್ನ ತೆಗೆದು ಕೊಟ್ಟರೂ ಕುಡಿಯುವ ನೀರಿಗಾಗಿ, ತಿನ್ನುವ ಅನ್ನಕ್ಕಾಗಿ, ತೊಡುವ ಬಟ್ಟೆಗಳಿಗಾಗಿ ಪರದಾಡುತ್ತಿದ್ದರು. ದರಿದ್ರ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು.

ದೇಶದ ಹರಾಜಿಗೆ ಅಡ್ಡನಿಂತ ದುಡಿವ ಜನ

ಪುಟ 3 ರಿಂದ

ಆದರೆ ದುಡಿವ ಜನ ಇದಕ್ಕೆ ತಯಾರಿಲ್ಲವೆಂದು ಕಾರ್ಮಿಕ ಮುಖಂಡ, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣರಾವ್ ಹೇಳಿದರು.

ಕೊರಿಯ, ಕ್ಯೂಬಾ, ಯುಗೋಸ್ಲಾವಿಯಾ, ವಿಯೋಟ್ನಾಂ ಮತ್ತಿತರ ದೇಶಗಳನ್ನು ದಮನ ಮಾಡಲು ಯತ್ನಿಸುತ್ತಿರುವ, ತಾನೇ ಹಿರಿಯಣ್ಣನಂತೆ ವರ್ತಿಸಿ ಲಕ್ಷಾಂತರ ಜನರ ಸಾವಿಗೆ, ಸಾವಿರಾರು ಜನರು ನಿರ್ಗತಿಕರಾಗುವಂತೆ ಮಾಡಿದ ವ್ಯಕ್ತಿಗೆ ಸ್ವಾಗತ ಮಾಡುವುದಲ್ಲ 'ಮಗನೇ ಇಲ್ಲಿಂದ ತೊಲಗು' ಎಂದು ಹೇಳಬೇಕಿದೆ ಎಂದು ಸೂರಿಯವರು ಕೆಂಡ ಕಾರಿದರು.

'ಪ್ರಪಂಚದ ಪ್ರಜೆ' ಎನ್ನಲು ನಾಚಿಕೆಯಾಗಬೇಕು

ಎಲ್ಐಸಿ, ಬ್ಯಾಂಕ್ ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಿ, ವಿದೇಶಿಯರಿಗೆ ಮಾರಲು ಹೊರಟಿರುವ ಸ್ವದೇಶಿ 'ಚಡ್ಡಿವೀರರು'ಗಳು ಈಗ ಕ್ಲಿಂಟನ್‌ನ್ನು 'ಪ್ರಪಂಚದ ಪ್ರಜೆ' ಎಂದು ಗೌರವಿಸಲು ಹೊರಟಿರುವುದನ್ನು ಸಿಪಿಐ(ಎಂ)ನ ಇನ್ನೊಬ್ಬ ಮುಖಂಡ ಎಸ್.ವೈ. ಗುರುಶಾಂತ್ ತೀವ್ರವಾಗಿ ಖಂಡಿಸಿದರು. ಪ್ರಜಾಪ್ರಭುತ್ವ ರೀತಿಯ ಪ್ರತಿಭಟನೆಯ ಹಕ್ಕನ್ನು ಹತ್ತಿಕ್ಕುವ ದಮನಕಾರಿ ಕ್ರಮಗಳನ್ನು ಕೈಗೊಂಡಿರುವ ಬಿಜೆಪಿ ಸರ್ಕಾರದ ಹೊಣೆಗೇಡಿ ವರ್ತನೆಯನ್ನು ವಿರೋಧಿಸಿ, ಈ ದಮನಕಾರಿ ಕ್ರಮಗಳನ್ನು ಮೆಟ್ಟಿ ನಿಂತು ಪ್ರಜಾಪ್ರಭುತ್ವದ ದಾರಿಯಲ್ಲೇ ಪ್ರತಿಭಟನೆಗಳನ್ನು ನಡೆಸಿ ನಿಮ್ಮ ಪ್ರತಿಬಂಧಕಾಜ್ಞೆಗಳನ್ನು ಮುರಿಯುವುದಾಗಿ ಸರ್ಕಾರಕ್ಕೆ ಎಚ್ಚರಿಸಿದರು.

ಯಶಸ್ವಿ ರಸ್ತೆ ತಡೆ

ಕಾಂ. ಸೂರಿ ಮತ್ತಿತರ ಮುಖಂಡರ ನೇತೃತ್ವದಲ್ಲಿ ಬನಪ್ಪ ಪಾರ್ಕಿನಿಂದ ಹಡ್ಸನ್ ವೃತ್ತದ ಕಡೆಗೆ ಹೊರಟ ಮೆರವಣಿಗೆಯಲ್ಲಿ ಕಾರ್ಮಿಕರು, ಮಹಿಳೆಯರು ಮತ್ತು ಚಿಕ್ಕಲಾಲ್‌ಬಾಗಿನಿಂದ ಮೆರವಣಿಗೆಯಲ್ಲಿ ಬಂದು ಇವರನ್ನು ಕೂಡಿಕೊಂಡ ಎಸ್ಎಫ್ಐ-ಡಿವೈಎಫ್ಐ ನೇತೃತ್ವದ ನೂರಾರು ವಿದ್ಯಾರ್ಥಿ ಯುವಜನರು ಕ್ಲಿಂಟನ್ನಿನ ವಾಪಸಾತಿಗೆ ಆಗ್ರಹಿಸಿ ಹಡ್ಸನ್ ವೃತ್ತದಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ರಸ್ತೆತಡೆ ನಡೆಸಿದರು.

ವಿದ್ಯಾರ್ಥಿ-ಯುವಜನರ ಬೆಂಬಲ

"ಬಹುರಾಷ್ಟ್ರೀಯ ಕಂಪನಿಗಳ ಏಜೆಂಟ್ ವಾಪಸ್ ಹೋಗು"

"ಸುಲಿಗೆಕೋರ ಅಮೆರಿಕಾದ ಪಿತೂರಿಗಳಿಗೆ ಧಿಕ್ಕಾರ"

"ಯುದ್ಧ ಪಿಪಾಸು, ಯುದ್ಧಕೋರ ಅಮೆರಿಕಾದ ರಣಹದ್ದು ಬಿಲ್ ಕ್ಲಿಂಟನ್ ಗೋ ಬ್ಯಾಕ್"

"ಅಸಮಾನ ಸಿಟಿಬಿಟಿ ಒಪ್ಪಂದಕ್ಕೆ ದಿಕ್ಕಾರ"

"ಡಿಯೋಗಾರ್ಸಿಯ ಸೇನಾ ನೆಲೆ ತೆರವು ಮಾಡಿ"

"ಕಾಶ್ಮೀರದ ವಿಷಯದಲ್ಲಿ ಮಧ್ಯ ಪ್ರವೇಶ ಸಲ್ಲದು" ಇತ್ಯಾದಿ ಘೋಷಣೆಗಳನ್ನು ಕೂಗುತ್ತಿದ್ದ ನೂರಾರು ವಿದ್ಯಾರ್ಥಿ-ಯುವಜನರು ಎಸ್ಎಫ್ಐ-ಡಿವೈಎಫ್ಐ ಸಂಘಟನೆಗಳ ನೇತೃತ್ವದಲ್ಲಿ ಮಾರ್ಚ್ 21, 2000 ರಂದು ಬೆಂಗಳೂರು ನಗರದ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಹೊರಟು ಗಾಂಧಿನಗರ, ಮೈಸೂರು ಬ್ಯಾಂಕ್ ವೃತ್ತ, ಬನಪ್ಪ ಪಾರ್ಕಿನವರೆಗೆ ಮೆರವಣಿಗೆ ನಡೆಸಿದರು. ನಂತರ ಜನವಾದಿ ಮಹಿಳಾ ಸಂಘಟನೆ, ಸಿಐಟಿಯು ಮತ್ತು ಸಿಪಿಐ(ಎಂ) ಗಳು ಬನಪ್ಪ ಪಾರ್ಕಿನಲ್ಲಿ ನಡೆಸಿದ ಬಹಿರಂಗ ಸಭೆ, ಕಿತ್ತೂರು ರಾಣಿ ಚೆನ್ನಮ್ಮನ ವೃತ್ತದಲ್ಲಿ ನಡೆಸಿದ ರಸ್ತೆ ತಡೆಯಲ್ಲಿ ಪಾಲ್ಗೊಂಡರು.

ಗಾಂಧಿ ಪ್ರತಿಮೆಯ ಮುಂದೆ ಸಿಪಿಐ ಧರಣಿ

ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಭಾರತ-ಜಗತ್ತಿನ ಆರ್ಥಿಕತೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಅಮೇರಿಕಾದ ನೇತೃತ್ವದ ಸಾಮ್ರಾಜ್ಯಶಾಹಿ ಪ್ರಯತ್ನಗಳನ್ನು ಖಂಡಿಸಿ, ಬೆಂಗಳೂರಿನ ಮಹಾತ್ಮಗಾಂಧಿ ಪ್ರತಿಮೆಯ ಬಳಿ ಧರಣಿ ಪ್ರತಿಭಟನೆ ನಡೆಸಿದರು. ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್(ಎಐಎಸ್ಎಫ್), ಭಾರತ ಯುವಜನ ಒಕ್ಕೂಟ(ಎಐವೈಎಫ್) ಮುಂತಾದ ಸಂಘಟನೆ ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಿಲ್ ಕ್ಲಿಂಟನ್ ಪ್ರತಿಕೃತಿ ದಹನ

ಸಾಮ್ರಾಜ್ಯಶಾಹಿ ನೇತಾರ, ಸುಲಿಗೆಕೋರರ ದೊರೆ ಬಿಲ್ ಕ್ಲಿಂಟನ್ ಭಾರತ ಭೇಟಿ ಪ್ರತಿಭಟಿಸಿ ಸೋಶಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ) ನೇತೃತ್ವದಲ್ಲಿ ನೂರಾರು ಜನರು ಚಿಕ್ಕಲಾಲ್‌ಭಾಗ್‌ನಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ಬನಪ್ಪ ಪಾರ್ಕಿನ ಮೈದಾನದಲ್ಲಿ ಬಿಲ್ ಕ್ಲಿಂಟನ್ ಪ್ರತಿಕೃತಿಯನ್ನು ಸುಟ್ಟುಹಾಕಿದರು.

ಸಾಮ್ರಾಜ್ಯಶಾಹಿ ವಿರೋಧಿ ಸಭೆ

ಸಾಮ್ರಾಜ್ಯಶಾಹಿ ವಿರೋಧಿ ವೇದಿಕೆಯ ಆಶ್ರಯದಲ್ಲಿ ಬೆಂಗಳೂರು ನಗರದಲ್ಲಿ ಪ್ರತಿಭಟನಾ ಸಭೆ ನಡೆಸಿದೆ. ಡಾ|| ಜಿ.ರಾಮಕೃಷ್ಣ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮುಂತಾದವರು ಪಾಲ್ಗೊಂಡಿದ್ದರು.

'ಕಾಡು ಹಂದಿ ಹೊಲ ಮೇದರೆ ಊರ ಹಂದಿ ಕಿವಿ ಕೊಯ್ದರು' ಎಂಬಂತೆ ಕ್ಲಿಂಟನ್ ಬಂದು-ಹೋಗುವಾಗ ಆಗಿರುವ ಅಪಾರ ವೆಚ್ಚವನ್ನು ಜನಸಾಮಾನ್ಯರ ತಲೆಗೆ ದಾಟಿಸುವ ಯತ್ನ ಮತ್ತು ಕ್ಲಿಂಟನ್ನಿನ 'ಪರಿವಾರ'ವನ್ನು ಮೆಚ್ಚಿಸುವ ಪ್ರಯತ್ನಗಳ ಫಲವಾಗಿ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬೆಲೆಗಳನ್ನು ಏರಿಸುತ್ತಿರುವುದನ್ನು ಕಂಡು ಕಂಗಾಲಾಗಿರುವ ಜನತೆ ಈಗ ಬೀದಿಗಿಳಿಯಲೇ ಬೇಕಾಗಿದೆ. ಇಲ್ಲವಾದಲ್ಲಿ ಆಳುವ ಮಂದಿ ನಮ್ಮನ್ನು ಸಾಮ್ರಾಜ್ಯಶಾಹಿಗಳ ಕಾಲಡಿಗೆ ನೂಕಿ ಗುಲಾಮರನ್ನಾಗಿಸುವ ದಿನಗಳು ದೂರವಿಲ್ಲ. ಇದನ್ನು ಮನಗಂಡು ಈ ಮಂದಿಗೆ ಸರಿಯಾದ ಪಾಠ ಕಲಿಸಲು ದೇಶದ ಜನತೆ ಸಜ್ಜಾಗಬೇಕಿದೆ.

ರಾಜ್ಯಾದ್ಯಂತ ಪ್ರತಿಭಟನೆ

ಮೈಸೂರಿನಲ್ಲಿ ಪ್ರತಿಭಟನಾ ಪ್ರದರ್ಶನ

'ದೇಶವನ್ನು ಒತ್ತೆ ಇಡಲು ಬಿಡುವುದಿಲ್ಲ" "ಕ್ಲಿಂಟನ್ ಗೋ ಬ್ಯಾಕ್", "ಸಾರ್ವಜನಿಕ ಕ್ಷೇತ್ರಗಳನ್ನು ಉಳಿಸಿ" ಇತ್ಯಾದಿ ಘೋಷಣೆಗಳೊಂದಿಗೆ ಮೈಸೂರಿನ ಕೃಷ್ಣರಾಜೇಂದ್ರ ವೃತ್ತದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನೆ ಮಾರ್ಚ್ 21 ರಂದು ನಡೆಯಿತು.

ಇದೇ ಹಿನ್ನಲೆಯಲ್ಲಿ 'ಸಾಮ್ರಾಜ್ಯಶಾಹಿ ಮತ್ತು ಬಾರತೀಯ ಜನತೆ' ಈ ವಿಷಯದ ಕುರಿತು ವಿಚಾರಸಂಕಿರಣವನ್ನು ಮಾರ್ಚ 16ರಂದು ಸಂಘಟಿಸಲಾಗಿತ್ತು. ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಸೀತಾರಾಂ ಯೆಚೂರಿ ಈ ಕುರಿತು ಮಾತನಾಡಿದರು. (ಇದೇ ವಿಚಾರದ ಕುರಿತು ಬೆಂಗಳೂರಿನ ನಡೆದ ಕಾರ್ಯಕ್ರಮದ ವರದಿಯಲ್ಲಿ ಈಗಾಗಲೇ ನೀವು ಯೆಚೂರಿಯವರ ವಿಚಾರಗಳನ್ನು ಓದಿದ್ದೀರಿ)

ಮಂಗಳೂರಿನಲ್ಲಿ ಕ್ಲಿಂಟನ್ ಭೂತದಹನ

ಕಾಂಗ್ರೆಸ್ ಮತ್ತು ಬಿಜೆಪಿಯವರು ಹೇಳುವಂತೆ ಕ್ಲಿಂಟನ್ ಬರೇ ಭಾರತದ ನೆಂಟನಾಗಿ ಬರುವುದಿಲ್ಲ. ಕಾಂಗ್ರೆಸ್... ಮನೆಗೆ ನೆಂಟರು ಬಂದಾಗ ಮನೆಯ ಬೀಗದ ಕೈಯನ್ನು ಯಾರೂ ನೆಂಟರಿಗೆ ಕೊಡುವುದಿಲ್ಲ. ಆದರೆ ಅಮೆರಿಕಾದ ಅಧ್ಯಕ್ಷಬಿಲ್ ಕ್ಲಿಂಟನ್ ಭಾರತಕ್ಕೆ ಬಂದಾಗ ಇಲ್ಲಿನ ಭದ್ರತಾ ಸಿಬ್ಬಂದಿಯನ್ನು ಇಡೀ ಪೋಲೀಸ್ ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಿ, ಕ್ಲಿಂಟನ್ ಹೋದಲೆಲ್ಲಾ ಬರೇ ಅಮೆರಿಕನ್ ಭದ್ರತಾ ಸಿಬ್ಬಂದಿಗಳ ಮೂಲಕ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಕ್ಲಿಂಟನ್ ತಿರುಗಾಡುವ ಕಾರು ಕೂಡಾ ಅಮೆರಿಕದಿಂದ ಬಂದಿದ್ದು, ದೇಶದ ರಾಜಧಾನಿ ಕ್ಲಿಂಟನ್ ಬಂದು ಹೋಗುವವರೆಗಿನ ದಿನಗಳಲ್ಲಿ ಬಹುತೇಕ ಅಮೆರಿಕದಲ್ಲಿ ವಶದಲ್ಲಿರುತ್ತದೆ. ಇದು ಸಿಪಿಐ(ಎಂ) ಇದು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ.ಮಾಧವರ ಸ್ಪಷ್ಟ ನುಡಿ. ಮಂಗಳೂರಿನ ನೆಹರೂ ಮೈದಾನ ಮಾರ್ಚ್ 22 ರಂದು ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅವರು ಪಾಲ್ಗೊಂಡು ಮಾತನಾಡುತ್ತಿದ್ದರು.

ಮಂಗಳೂರು ನಗರದ ಬಾವುಟ ಗುಂಡೆಯಿಂದ ಹೊರಟ ಪ್ರತಿಭಟನಾ ಮೆರವಣಿಗೆ ನಗರದ ಮುಖ್ಯ ಬೀದಿಗಳ ಮೂಲಕ ಸಾಗಿ ನೆಹರೂ ಮೈದಾನದಲ್ಲಿ ಸಭೆಯಾಗಿ ಮಾರ್ಪಟ್ಟಿತು. ಸಭೆಯ ನಂತರ ಕ್ಲಿಂಟನ್ ಪ್ರತಿಕೃತಿಯ ದಹನ ನಡೆಯಿತು.

ಸಿಪಿಐ(ಎಂ) ಉಡುಪಿ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಉಡುಪಿಯಲ್ಲಿ ಪ್ರತಿಭಟನೆ ನಡೆದಿದೆ. ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಸ್ ನಿಲ್ದಾಣದ ಬಳಿ ಸಭೆ ನಡೆಸಲಾಯಿತು. ಪಕ್ಷದ ಮುಖಂಡ ಪಿ.ವಿಶ್ವನಾಥ ರೈ, ಅಬ್ರಹಾಂ ಕರ್ಕಡ, ಕೆ.ಶಂಕರ್ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಗುಲ್ಬರ್ಗದಲ್ಲಿ ಕ್ಲಿಂಟನ್‌ಗೆ ಗಲ್ಲು: ವಿಶ್ವದ ಸ್ವಘೋಷಿತ ಪೋಲಿಸಿನಂತೆ ವರ್ತಿಸುವ ಅಮೆರಿಕಾದ ಉದ್ದಟತನಗಳನ್ನು ಪ್ರತಿಭಟಿಸಿ ಸಿಪಿಐ(ಎಂ) ಗುಲ್ಬರ್ಗ ಸಮಿತಿ ಪ್ರತಿಭಟನೆ ನಡೆಸಿದೆ. ಗುಲ್ಬರ್ಗದ ಜನನಿಬಿಡ ಪ್ರದೇಶದಲ್ಲಿ ಸಾರ್ವಜನಿಕವಾಗಿ ಕ್ಲಿಂಟನ್ ಪ್ರತಿಕೃತಿಯಲ್ಲಿ ನೇಣು ಗಂಬಕ್ಕೇರಿಸಲಾಯಿತು. ಈ ವಿಶಿಷ್ಟ ಪ್ರತಿಭಟನೆಗೆ ಸ್ಥಳೀಯ ಪತ್ರಿಕೆಯಲ್ಲಿ ವ್ಯಾಪಕಪ್ರಚಾರ ದೊರತಿದೆ. ಹಾಗೆಯೇ ಬೀದರ್‌ನ ಪತ್ರಿಕೆಗಳಲ್ಲಿ 'ಕ್ಲಿಂಟನ್ ಗೋ ಬ್ಯಾಕ್' ಕರೆ ನೀಡುವ ಎಸ್ಎಫ್ಐ ಕರಪತ್ರದ ವಿಚಾರ-ವಿಷಯಗಳೇ ಪತ್ರಿಕೆಗಳಲ್ಲಿ ಮರು ಮುದ್ರಣಗೊಂಡು ವ್ಯಾಪಕ ಪ್ರಚಾರ ಗಳಿಸಿವೆ.

ದ್ವಿತೀಯ ಸ್ವಾತಂತ್ರ್ಯ ಸಮರಕ್ಕೆ ಸಜ್ಜಾಗಿ!

ಸಾಮ್ರಾಜ್ಯಶಾಹಿ ಶಕ್ತಿಗಳು ಇಂದು ಬಡ ರಾಷ್ಟಗಳು ಮತ್ತು ತಮ್ಮ ಅಂಕೆಗೆ ಒಳಪಡಲು ಇಚ್ಛಿಸದ ದೇಶಗಳ ಮೇಲೆ ದಿಗ್ಬಂದನಗಳನ್ನು ಹೇರಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಯತ್ನಿಸುತ್ತಿವೆ. ದೇಶ-ದೇಶಗಳ ಮಧ್ಯೆ ಜನಾಂಗೀಯ ಕಲಹಗಳನ್ನು ಎಬ್ಬಿಸಿ, ಅವರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿ ಅಶಾಂತಿಯನ್ನುಂಟು ಮಾಡಿ, ಆ ದೇಶಗಳ ಸ್ವಾತಂತ್ರ್ಯವನ್ನು ಕಸಿಯುತ್ತಿವೆ. ಭಾರತಕ್ಕೂ ಆ ದುರ್ಗತಿ ಬರುವ ದಿನಗಳು ದೂರವಿಲ್ಲ. ಆದ್ದರಿಂದ ದೇಶದ ಜನತೆ ಕೂಡಲೇ ಎಚ್ಚೆತ್ತುಕೊಳ್ಳಬೇಕಿದೆ. ಹಿಂದೆ ಹೀಗೆ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ಕೊನೆಗೆ ದೇಶವನ್ನೇ ಆಕ್ರಮಿಸಿಕೊಂಡರು. ಆಗ 'ಸೈಮನ್ ಗೋಬ್ಯಾಕ್' ಎಂದು ಹೋರಾಟಕ್ಕಿಳಿದು ಬ್ರಿಟಿಷರನ್ನು ಓಡಿಸಿದ್ದಾಯಿತು. ಈಗ ಮತ್ತೆ ಅಂತದ್ದೇ ಸ್ಥಿತಿ ಬಂದಿದೆ. "ಹೆಗ್ಗಣ ಯಾವ ದೇಶಕ್ಕೆ ಹೋದರೂ ನೆಲಕೊರೆಯೋದು ಬಿಡಲ್ಲ" ಈ ಸಾಮ್ರಾಜ್ಯಶಾಹಿ ಹೆಗ್ಗಣಗಳು ನಮ್ಮ ನೆಲವನ್ನು ಕೊರೆದು ಬರಡು ಮಾಡುವ ಮುನ್ನ ದೇಶದ ಜನತೆ ಈ 'ಹೆಗ್ಗಣ'ಗಳನ್ನು ಓಡಿಸಲು ದ್ವಿತೀಯ ಸ್ವಾತಂತ್ರ್ಯ ಸಮರಕ್ಕೆ ಸಜ್ಜಾಗಬೇಕೆಂದು ಸಿಪಿಐ(ಎಂ) ಮುಖಂಡರು ಕರೆ ನೀಡಿದರು.

ಇನ್‌ಫೋಸಿಸ್ ಶೇರು ವೀರರು..........

ಪುಟ 7 ರಿಂದ

ಮಾರ್ಕೆಟ್ ಕುಸಿತವಾದಾಗ ಇವರೆಲ್ಲ ಭಾರಿ ಹಾನಿ ಅನುಭವಿಸಬಹುದು. ಕೈಗಾರಿಕೆಯಲ್ಲಿ ಬಂಡವಾಳ ಹೂಡುವವರೂ ಇವರೇ ಎಂದು ನೆನಪಿನಲ್ಲಿಟ್ಟುಕೊಂಡರೆ ಆದಕ್ಕೂ ಆಗ ಅವರಲ್ಲಿ ಹಣವಿರುವುದಿಲ್ಲ ಎಂದು ಗೊತ್ತಾಗುತ್ತದೆ. ಹೀಗೆ ಶೇರು ಮಾರುಕಟ್ಟೆ ಸುಗ್ಗಿ-ಕುಸಿತ ಎರಡೂ, ಅಂದರೆ ಯಾವುದೇ ಭಾರಿ ಏರುಪೇರು ಆರ್ಥಿಕಕ್ಕೆ ಹಾನಿಕರವಾಗಬಹುದು.

ಶೇರು ಮಾರುಕಟ್ಟೆ - ಉತ್ಪಾದನೆ ವಿಸ್ತರಣೆ ಸೂಚಕವಲ್ಲ

ಇದಲ್ಲದೆ ಶೇರು ಮಾರುಕಟ್ಟೆಯ ದೊಡ್ಡ ಭಾಗ ಈಗಾಗಲೇ ವಹಿವಾಟು ನಡೆಸುತ್ತಿರುವ ಕಂಪನಿಗಳ ಶೇರುಗಳ ಮಾರಾಟ-ಕೊಳ್ಳುವಿಕೆಯಲ್ಲಿ ತೊಡಗಿರುತ್ತದೆ. ಹೊಸ ಶೇರುಗಳ (ಅಂದರೆ ಹೊಸ ಕೈಗಾರಿಕೆಗಳ ಸ್ಥಾಪನೆ) ಮಾರಾಟ ಬರಿಯ ಸಣ್ಣ ಭಾಗ. ಆ ಕಾರಣಕ್ಕೂ ಶೇರು ಮಾರುಕಟ್ಟೆ ಸೂಚಕ ಆರ್ಥಿಕದ ಸೂಚಕವಾಗುವುದಿಲ್ಲ. ನಿಜವಾದ ಆರ್ಥಿಕ ಬೆಳವಣಿಗೆ-ಹಿಂಜರಿತ ಆಗುವುದು ಜನರ ಕೊಳ್ಳುವ ಶಕ್ತಿ, ಆದಾಯ ಉತ್ಪನ್ನಗಳಿಗೆ ಇರುವ ನಿಜವಾದ ಬೇಡಿಕೆ, ಉತ್ಪಾದಕ ಬಂಡವಾಳ, ಕೈಗಾರಿಕೆಗಳ ಸಾಮರ್ಥ್ಯ, ಗುಣಮಟ್ಟ ಇತ್ಯಾದಿ ನಿಜವಾದ ಚಟುವಟಿಕೆಗಳಿಂದ ಐಟಿ ಕ್ಷೇತ್ರದಲ್ಲಿ ಸಾಕಷ್ಟು ಹೊಸ ಕಂಪನಿಗಳು ಶೇರು ಬಂಡವಾಳ ಸಂಗ್ರಹಿಸುತ್ತಿದ್ದು, ಇದು ಆ ಕ್ಷೇತ್ರದ ಬೆಳವಣಿಗೆ ಸೂಚಕವಾದರೂ, ಒಟ್ಟು ಆರ್ಥಿಕದಲ್ಲಿ ಇದು ಗಣನೀಯ ಪಾತ್ರವೇನೂ ವಹಿಸುವುದಿಲ್ಲ. ಐಟಿ ಕೈಗಾರಿಕೆ ಸಾಮಾನ್ಯವಾಗಿ ಇತರ ಕೈಗಾರಿಕೆಗಳ ದಕ್ಷತೆ, ಸಾಮರ್ಥ್ಯ ಹೆಚ್ಚಿಸಬಲ್ಲದ್ದು. ಆದರೆ ಭಾರತದ ಐಟಿ ಕ್ಷೇತ್ರದ ಸಿಂಹಪಾಲು ರಫ್ತು ಆಧಾರಿತ. ನಮ್ಮದೇ ದೇಶದ ಇತರ ಕ್ಷೇತ್ರಗಳಿಗೆ, ನಮ್ಮ ಐಟಿ ಕ್ಷೇತ್ರದ ಉತ್ಪನ್ನಗಳು ಹೋಗುವುದಿಲ್ಲ. ಆದ್ದರಿಂದ ನಮ್ಮ ಐಟಿ ಕ್ಷೇತ್ರದ ನಿಜವಾದ ಬೆಳವಣಿಗೆಯ ಏರಿಳಿತಗಳು, ಅಭಿವೃದ್ಧ ದೇಶಗಳ ಅದರಲ್ಲೂ ಅಮೆರಿಕದ ಆರ್ಥಿಕದ ಏರಿಳಿತಗಳೊಂದಿಗೆ ಸಂಬಂಧ ಹೊಂದಿದೆ. ನಮ್ಮ ದೇಶದ ಆರ್ಥಿಕದೊಂದಿಗೆ ಹೆಚ್ಚಿನ ಸಂಬಂಧ ಹೊಂದಿಲ್ಲ. ಹೀಗಿರುವುದು ಐಟಿ ಕ್ಷೇತ್ರವನ್ನು ನಡೆಸುವುದು ನಮ್ಮ ದೇಶದ ಆರ್ಥಿಕ ನಡೆಸುವಲ್ಲಿ ಯಾವ ರೀತಿಯಲ್ಲಿ ಸಹಾಯ ಮಾಡಬಲ್ಲದು.

'ಶೇರು ವೀರ'ರು ಆರ್ಥಿಕಕ್ಕೆ ಏನೂ ಸಹಾಯ ಮಾಡರು

ಆದರೂ ಈಗ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಆರ್ಥಿಕ ನಿರ್ಧಾರವೆಲ್ಲವೂ ಶೇರು ಮಾರುಕಟ್ಟೆಯ 'ನಂಬಿಕೆ' ಗಳಿಸುವ ಪ್ರಯತ್ನ ಮಾಡುತ್ತವೆ. ಶೇರು ಮಾರುಕಟ್ಟೆಯನ್ನು 'ಗಾಬರಿ' ಮಾಡದಂತೆ ಎಚ್ಚರವಹಿಸುತ್ತವೆ. ಆದಾಯ ತೆರಿಗೆ ಕಳ್ಳರಾದ ಭಾರಿ ಕೈಗಾರಿಕೋದ್ಯಮಿಗಳು, ಅವರ ಕಂಪನಿಗಳ ಹಿರಿಯ ಅಧಿಕಾರಿಗಳ ಮೇಲೆ ರೆವಿನ್ಯೂ ಬೇಹುಗಾರಿಕೆ ದಳ ದಾಳಿ ಮಾಡಿದರೆ, ಮಾರುಕಟ್ಟೆ ಬೆಚ್ಚಬಹುದು ಅಂತ ಅದಕ್ಕೆ ಕಡಿವಾಣ ಹಾಕಲಾಗುತ್ತದೆ.

ಶೇರು ಮಾರುಕಟ್ಟೆಯ ಏರುಪೇರಿನಲ್ಲಿ ಸಿಂಹಪಾಲು ಈಗ ವಿದೇಶಿ ಹಣಕಾಸು ಸಂಸ್ಥೆಗಳದ್ದು. ನಮ್ಮ ಆರ್ಥಿಕದಲ್ಲಿ ಯಾವುದೇ ಭಾರೀ ಬದಲಾವಣೆ ಇಲ್ಲದೆ ಈ ಸಂಸ್ಥೆಗಳು ಶೇರು ಮಾರುಕಟ್ಟೆ ಚಟುವಟಿಕೆ ಶೇರು ಮಾರುಕಟ್ಟೆ ಕುಸಿತ, ಆ ಮೂಲಕ ಆರ್ಥಿಕ ಕುಸಿತ ತರಬಲ್ಲ ಅಪಾಯ ಮಾತ್ರ ಈಗ ಇದೆ. ಜಾಗತೀಕರಣದ ದುಷ್ಪರಿಣಾಮವಾದ ಇದನ್ನು ತಡೆಯಬೇಕಾದರೆ ಶೇರು ಮಾರುಕಟ್ಟೆಯ ತೇಜಿ ಹಲವು ಬಂಡವಾಳಶಾಹಿ ಆರ್ಥಿಕ ತಜ್ಞರನ್ನು ಚಿಂತೆಗೀಡು ಮಾಡಿದೆ. ಐಟಿ ಶೇರುಗಳಲ್ಲಿ ಮತ್ತು ಒಟ್ಟು ಶೇರು ಮಾರುಕಟ್ಟೆಯಲ್ಲಿ ತೇಜಿ ಕೃತಕ-ನೀರ ಮೇಲಣ ಗುಳ್ಳೆ ಇದ್ದಂತೆ ಇದು ಯಾವಾಗ ಬೇಕಾದರೂ ಒಡೆಯಬಹುದು. ಹೀಗೆ ಒಡೆದಾಗ ವಿಶ್ವದ ಆರ್ಥಿಕ ತಲ್ಲಣಗೊಳ್ಳಬಹುದು ಎನ್ನುತ್ತಾರೆ ಅವರು. ಇಂತಹ ತೇಜಿಯ ಅಲೆಯ ಮೇಲೆ ವಿಜಯದ ಸವಾರಿ' ಮಾಡುತ್ತಿರುವ ನಾರಾಯಣಮೂರ್ತಿಗಳು ನಮ್ಮ ಆರ್ಥಿಕಕ್ಕೆ ಏನು ಸಲಹೆ ಮಾಡಬಲ್ಲರು?

ಈ ವರ್ಷದ ಮಾರ್ಚ್ 8, ಅಂತರ್ರಾಷ್ಟ್ರೀಯ ಮಹಿಳಾ ದಿನ ವಿಶೇಷ ದಿನವಾಗಿತ್ತು. ಇದು ಈ ಶತಮಾನದ ಸಹಸ್ರಮಾನದ ಮೊದಲ ಮಹಿಳಾ ದಿನವಾಗಿತ್ತು ಎಂಬುದು ಮಾತ್ರ ವಿಶೇಷವಲ್ಲ. ಈ ವರ್ಷ ಜಗತ್ತಿನಾದ್ಯಂತ 146 ದೇಶಗಳಲ್ಲಿ 3500 ರಷ್ಟು ಮಹಿಳಾ ಸಂಘಟನೆಗಳು ಜಂಟಿಯಾಗಿ ಹಮ್ಮಿಕೊಂಡಿರುವ ಆರು ತಿಂಗಳ ಕಾರ್ಯಕ್ರಮ ಕೊನೆಯಲ್ಲಿ ಅಕ್ಟೋಬರ್ 17 ರಂದು ಜಗತ್ತಿನಾದ್ಯಂತ ಮಹಿಳೆಯರ ಕೋಟಿಗಿಂತಲೂ ಹೆಚ್ಚು ಸಹಿ ಇರುವ ಬಡತನ ಮತ್ತು ಹಿಂಸಾಚಾರ ಹೋಗಲಾಡಿಸುವುದಕ್ಕಾಗಿ ಮಹಿಳೆಯರ ಮನವಿ ಪತ್ರವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ, ಐ.ಎಂ.ಎಫ್.-ವಿಶ್ವಬ್ಯಾಂಕ್ ಮುಖ್ಯಸ್ಥರಿಗೆ ಅರ್ಪಿಸಲಿದೆ. ಈ ಕಾರ್ಯಕ್ರಮದ ಆರಂಭ ಮಾರ್ಚ್ 8 ರಂದು ವಿವಿಧ ದೇಶಗಳಲ್ಲಿ ವಿವಿಧ ರೀತಿಯಲ್ಲಿ ಆರಂಭವಾಯಿತು. ಆ ಬಗ್ಗೆ ಒಂದು ವರದಿ.



ಹಿಂಸಾಚಾರ ಮತ್ತು ಬಡತನದ ವಿರುದ್ಧ

ಇಗೋ ನೋಡಿ! ಆರಂಭವಾಗಿದೆ ಮಹಿಳೆಯರ ಜಾಥಾ




ಶರತ್‌ಚಂದ್ರ

ಮೆಕ್ಸಿಕೊದಲ್ಲಿ ಜಾಗತಿಕ ಮಹಿಳೆಯರ ಜಾಥಾ ವಿಶಿಷ್ಟ ರೀತಿಯಲ್ಲಿ ಆರಂಭವಾಯಿತು. ಜಾಗತೀಕರಣದ ವಿರುದ್ಧ ಮೂಲ ನಿವಾಸಿಗಳ ಸಶಸ್ತ್ರ ದಂಗೆಗೆ ಹೆಸರಾದ ಮೆಕ್ಸಿಕೋದ ದಕ್ಷಿಣ ಪ್ರಾಂತ್ಯದ ಚಿಯೊಪಾಸ್‌ನಲ್ಲಿ ಸಾವಿರಾರು ಮಹಿಳೆಯರು 40 ನಿಮಿಷಗಳ ಕಾಲ ಸರ್ಕಾರಿ ಸ್ವಾಮ್ಯದ ರೆಡಿಯೋ ಸ್ಟೇಶನನ್ನು ವಶಪಡಿಸಿಕೊಂಡಿದ್ದರು. ಮಾರ್ಚ್ 8 ರಂದು. 1994 ರಿಂದ ಅಮೆರಿಕನ್ ಸಾಮ್ರಾಜ್ಯಶಾಹಿ ಹಾಗೂ ಮೆಕ್ಸಿಕೋದ ಆಳುವ ವರ್ಗದ ವಿರುದ್ಧ ಸಶಸ್ತ್ರ ಹೋರಾಟ ನಡೆಸುತ್ತಿರುವ ಝಪಾಟಿಸ್ಟಾ ಗೆರಿಲ್ಲಾಗಳ ಬೆಂಬಲಿಗ ಮಹಿಳೆಯರು ಈ ಕಾರ್ಯಾಚರಣೆ ನಡೆಸಿದರು. 40 ನಿಮಿಷಗಳ ಕಾಲ ರೇಡಿಯೋ ತನ್ನ ಪ್ರಸಾರ ನಿಲ್ಲಿಸಿ ಮೂಲನಿವಾಸಿಗಳ ಹಕ್ಕುಗಳು ಹಾಗೂ ಮಹಿಳೆಯರ ಸಮಾನತೆ ಬಗ್ಗೆ ಕರೆ ಪ್ರಸಾರ ಮಾಡಬೇಕಾಯಿತು.

ಕುವೈತ್‌ನಲ್ಲಿ ಮಹಿಳೆಯರು ರಾಜಕೀಯ ಹಕ್ಕುಗಳನ್ನು ಕೊಡದ್ದರ ಬಗ್ಗೆ ಪ್ರತಿಭಟಿಸಿ ಪಾರ್ಲಿಮೆಂಟಿನ ಎದುರು ಪ್ರದರ್ಶನ ನಡೆಸಿದರು. ಅದೇ ದಿನ ಪಾರ್ಲಿಮೆಂಟಿನ ಸ್ಪೀಕರ್ ಮತ್ತು ಆಂತರಿಕ ವ್ಯವಹಾರಗಳ ಮಂತ್ರಿ ವಿರುದ್ಧ ಮಹಿಳೆಯರಿಗೆ ರಾಜಕೀಯ ಹಕ್ಕುಗಳನ್ನು ಕೊಡಲು ಒತ್ತಾಯಿಸಿ ಕೋರ್ಟು ಕೇಸುಗಳನ್ನು ಹಾಕಿದರು.

ಕುವೈತ್ ಕೊಲ್ಲಿ ದೇಶಗಳಲ್ಲಿ ಚುನಾಯಿತ ಪಾರ್ಲಿಮೆಂಟ್ ಇರುವ ಏಕಮಾತ್ರ ದೇಶ. ಆದರೆ ಅಲ್ಲಿ ಮಹಿಳೆಯರಿಗೆ ರಾಜಕೀಯ ಹಕ್ಕುಗಳಿಲ್ಲ. ಕಳೆದ



ಮಾಸ್ಕೋದಲ್ಲಿ ....

ನವೆಂಬರ್‌ನಲ್ಲಿ ಮಹಿಳೆಯರಿಗೆ ಪೂರ್ಣ ರಾಜಕೀಯ ಹಕ್ಕು ಕೊಡುವ ಕರಡು ಮಸೂದೆಯೊಂದನ್ನು ಅಲ್ಪಮತಗಳಿಂದ ತಿರಸ್ಕರಿಸಿತ್ತು. ಪ್ರತಿಭಟನೆ ಸಂಘಟಿಸಿದ ಮಹಿಳಾ ಸಂಘಟನೆಗಳು ಕುವೈತ್‌ನ ಚುನಾವಣಾ ಕಾನೂನು ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ವಾದಿಸುತ್ತಿದ್ದಾರೆ.

ಸ್ವಿಟ್ಜರ್‌ಲ್ಯಾಂಡ್‌ನ ಜಿನಿವಾ ದಲ್ಲಿ ಮಹಿಳಾ ಸಂಘಟನೆಗಳು ವಿಶ್ವಸಂಸ್ಥೆಯ ಯುರೋಪಿಯನ್ ಕಚೇರಿ ಮುಂದೆ ಪ್ರದರ್ಶನ ನಡೆಸಿದ್ದರು. ಈ ಪ್ರತಿಭಟನೆ 'ಬಡತನ ಮತ್ತು ಹಿಂಸಾಚಾರ'ದ ವಿರುದ್ಧ ಜಾಗತಿಕ ಜಾಥಾದ ಮನವಿಗೆ ಸಹಿ ಸಂಗ್ರಹಣಾ ಚಳುವಳಿಯ ಆರಂಭವೂ ಆಗಿತ್ತು.

ಅಫಘಾನಿಸ್ತಾನದ ಮಹಿಳಾ ವಿರೋಧಿ ತಾಲಿಬಾನ್ ಸರ್ಕಾರ ಈ ವರ್ಷದ ಮಹಿಳಾ ದಿನಾಚರಣೆಯ ದಿನ ಸುದ್ದಿಯಲ್ಲಿತ್ತು. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಕೊನೆಗೆ ವೈದ್ಯಕೀಯ ಸೇವೆ ಸಹ ನಿಷೇಧಿಸುವ ತಾಲಿಬಾನ್ ಸರ್ಕಾರ ಜಗತ್ತಿನಾದ್ಯಂತ ಹಲವಾರು ವಿಚಾರ ಸಂಕಿರಣ, ಸಭೆ, ಸಮ್ಮೇಳನಗಳಲ್ಲಿ ತೀವ್ರ ಟೀಕೆಗೆ ಗುರಿಯಾಯಿತು.

ಈ ಸಂದರ್ಭದಲ್ಲಿ ಅತ್ಯಂತ ಮಹಿಳಾ- ವಿರೋಧಿ ತಾಲಿಬಾನ್ ಸರ್ಕಾರ ಸಹ ನೆಪಕ್ಕಾದರೂ ಕೆಲವು ನಿಷೇಧಗಳನ್ನು ಸಡಿಲಿಸಬೇಕಾಯಿತು. ಹುಡುಗಿಯರಿಗೆ ಮನೆಯಲ್ಲಿ ಮಹಿಳೆಯರು ಮಾತ್ರ ಶಿಕ್ಷಣ ನೀಡಬಹುದು. ಮಹಿಳೆಯರಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಗಳಲ್ಲಿ ಮಾನ್ಯ ಮಹಿಳೆಯರು ಕೆಲಸ ಮಾಡಬಹುದು. ಇವು ನಿಷೇಧದಲ್ಲಿ ಬಂದ ಸಡಿಲಿಕೆಗಳು. ಇದನ್ನೇ ಎತ್ತಿ ಹಿಡಿದ ಕೆಲವು ಅಮೆರಿಕನ್ ಮತ್ತು ವಿಶ್ವಸಂಸ್ಥೆ ಅಧಿಕಾರಿಗಳು ತಾಲಿಬಾನ್ ಸರ್ಕಾರವನ್ನು ವಿಶ್ವಾದ್ಯಂತ ಟೀಕೆಯಿಂದ ತಪ್ಪಿಸಲು ಪ್ರಯತ್ನಿಸಿದರು. ಆದರೆ ಈ ನಾಟಕ ಜಾಗತಿಕ ಮಹಿಳಾ ಚಳುವಳಿಯ ಪ್ರತಿಭಟನೆ ಎದುರು ನಡೆದಿಲ್ಲ. ಇದಲ್ಲದೆ ತಾಲಿಬಾನ್ ತನ್ನದೇ ಆದ 'ಮಹಿಳಾ ದಿನಾಚರಣೆ' ನಡೆಸಿತು. ಮಹಿಳೆಯರ ಆಸ್ಪತ್ರೆಯೊಂದರಲ್ಲಿ ಕೇವಲ ಕೆಲವು ಮಹಿಳೆಯರು ಭಾಗವಹಿಸಿದ ಮಹಿಳಾ ದಿನಾಚರಣೆ ನಡೆಸಿತು. ಅಲ್ಲಿಗೆ ಹೋಗುವ ದ್ವಾರವನ್ನು ಪುರುಷ ಸೈನಿಕರು ಕಾಯುತ್ತಿದ್ದರು ಮತ್ತು ಯಾವ ಪುರುಷರನ್ನೂ ಆ ಸಭೆಗೆ ಹೋಗಲು ಬಿಡುತ್ತಿರಲಿಲ್ಲ.

ಪಾಕಿಸ್ತಾನದ ಪ್ರಾಂತೀಯ ರಾಜಧಾನಿ ಕ್ವೆಟ್ಟಾದಲ್ಲಿ 300 ಅಫಘಾನ್ ಮಹಿಳೆಯರು, ಮೂಲಭೂತವಾದಿಗಳ ದಾಳಿ ಲೆಕ್ಕಿಸದಂತೆ ತಾಲಿಬಾನ್ ಹಾಗೂ ಇತರ ಅಫಘಾನ್ ಮೂಲ ಭೂತವಾದಿ ಗುಂಪುಗಳ ಮಹಿಳಾ-ವಿರೋಧಿ ಧೋರಣೆ ವಿರುದ್ಧ ಪ್ರತಿಭಟನೆ ನಡೆಸಿದರು.

ಫ್ರಾನ್ಸಿನ ಪ್ಯಾರಿಸಿನಲ್ಲಿ ಪ್ರಸಿದ್ಧ ಪ್ಯಾಂಥಿಯನ್ ಚೌಕದ ಬಳಿ ಫ್ರಾನ್ಸ್‌ನ ಮಹಿಳಾ ಸಂಘಟನೆಗಳು ಬೃಹತ್ ಪ್ರದರ್ಶನ ನಡೆಸಿದವು. ಪ್ಯಾಂಥಿಯನ್ ಫ್ರಾನ್ಸಿನ ಚರಿತ್ರೆಯ ಪ್ರಸಿದ್ಧ ಪುರುಷರ ಸ್ಮಾರಕ ಇರುವ ಪ್ರದೇಶ. ಈ ಸ್ಮಾರಕಗಳಲ್ಲಿ ಫ್ರೆಂಚ್ ಚರಿತ್ರೆಯಲ್ಲಿ ಪ್ರಸಿದ್ಧರಾದ ಇಬ್ಬರು ಮಹಿಳೆಯರ ಸ್ಮಾರಕಗಳನ್ನು ಸೇರಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸುತ್ತಿದ್ದರು.

ಎರಡನೇ ಮಹಾ ಯುದ್ಧದಲ್ಲಿ ನಾಜಿ ಸರ್ಕಾರದ ವಿರುದ್ಧ ಭೂಗತ ಪ್ರತಿರೋಧ ಸಂಘಟಕರಲ್ಲಿ ಪ್ರಮುಖರಾದ ಬೆಥಿ ಅಲ್ ಬ್ರೆಕ್ಟ್ ಮತ್ತು ಮಹಿಳಾ ಹಕ್ಕುಗಳ ಘೋಷಣೆಯ ಸಹ-ಲೇಖಕಿಯಾದ ಒಲಿಂಪ್ ಡಿ ಗೋಜಸ್. ಬೆಥಿ ಅಲ್‌ಬ್ರೆಕ್ಟ್‌ನನ್ನು 1943 ರಲ್ಲಿ ಕೊಡಲಿಯಲ್ಲಿ ಹೊಡೆದು ಕೊಲೆ ಮಾಡಲಾಯಿತು. ಒಲಿಂಪ್ ಡಿ ಗೋಜಸ್‌ನ್ನು 1794 ರಲ್ಲಿ 'ಗಿಲೋಟಿನ್'(ತಲೆ ಕಡಿಯುವ ಯಂತ್ರ)ಗೆ ಒಡ್ಡಲಾಯಿತು. ಈ ರೀತಿ ಈ ಇರ್ವರೂ ಮಹಿಳೆಯರು ಸಮಾನತೆ, ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ವೀರ ವನಿತೆಯರು. ಅವರ ಸ್ಮಾರಕ ನಿರ್ಮಿಸಬೇಕೆಂದು ಒತ್ತಾಯಿಸಿದರು.



ಪಾಕಿಸ್ತಾನದಲ್ಲಿ ....

ಅದೇ ದಿನ ಫ್ರಾನ್ಸಿನ ಪಾರ್ಲಿಮೆಂಟ್‌ನಲ್ಲಿ ಮಹಿಳಾ ಸದಸ್ಯರ ಒತ್ತಾಯದ ಮೇರೆಗೆ ಮಹಿಳೆಯರು ಮತ್ತು ಪುರಷರಿಗೆ ಸಮಾನ ವೇತನ ದೊರಕಿಸಿ ಕೊಡುವ ಮಸೂದೆಯ ಮೇಲೆ ಚರ್ಚೆ ನಡೆಸಿತು. ಅಂಕಿ ಸಂಖ್ಯೆಗಳ ಪ್ರಕಾರ ಮಹಿಳೆಯರ ವೇತನ ಪುರುಷರ ವೇತನದ ಕಾಲು ಭಾಗದಷ್ಟು ಕಡಿಮೆ ಇದೆಯಂತೆ. ಈ ಅಸಮಾನತೆಯನ್ನು ಹೋಗಲಾಡಿಸುವುದೇ ಮಸೂದೆಯ ಉದ್ದೇಶ.



ಮನಿಲಾದಲ್ಲಿ....

ವಿಶ್ವಸಂಸ್ಥೆ ಆರಿಸಿದಂದು ಜಾಗತಿಕ ವಿಡಿಯೋ ಸಮ್ಮೇಳನ ಏರ್ಪಡಿಸಿತ್ತು. ಆ ವಿಡಿಯೋ ಸಮ್ಮೇಳನದಲ್ಲಿ ಈ ಹಿಂದೆ ಇದರ ವಿರುದ್ಧ ಈಗಾಗಲೇ ಹೋರಾಡಿ ಪ್ರತಿರೋಧ ಬೆಳೆಸಲು ಕಾರಣವಾಗಿರುವ ಹಲವು ಮಹಿಳೆಯರು ಭಾಗವಹಿಸಿದರು. ಸ್ಟ್ರಾಟ್ಸ್‌ಬರ್ಗ್(ಜರ್ಮನಿ), ಮೆಕ್ಸಿಕೋ ಸಿಟಿ, ನೈರೋಬಿ(ಕೆನ್ಯಾ-ಆಫ್ರಿಕಾ), ದೆಹಲಿ ಮತ್ತು ನ್ಯೂಯಾರ್ಕ್‌ನ ಮಹಿಳೆಯರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಮಹಿಳೆಯರು ತಾವು ಅನುಭವಿಸಬೇಕಾದ ಬಲಾತ್ಕಾರ, ಮನೆಯಲ್ಲಿ ಹಿಂಸಾಚಾರ, ಸೂಳೆಗಾರಿಕೆಗೆ ಬಲವಂತವಾಗಿ ಇಳಿಸಿದ್ದು ಮತ್ತು ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ಮಾತನಾಡಿದರು. ಮಾನವ ಹಕ್ಕು, ಮಹಿಳಾ ಸಂಘಟನೆ, ಕಾರ್ಯಕರ್ತರು, ಸರ್ಕಾರಿ ಪ್ರತಿನಿಧಿಗಳು ಪರಿಣತರು ಈ ವಿಡಿಯೋ ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವಿಶ್ವಸಂಸ್ಥೆಯ ಉನ್ನತ ಅಧಿಕಾರಿಗಳಿಗೆ ನೇರವಾಗಿ ತಿಳಿಸುವ ಅವಕಾಶ ಒದಗಿಸಿತು. ಈ ಸಮ್ಮೇಳನವನ್ನು ಇಂಟರ್‌ನೆಟ್ ಮೇಲೂ ಬಿತ್ತರಿಸಲಾಗಿತ್ತು.

ಮಾಧ್ಯಮಗಳನ್ನು ನಡೆಸಿದ ಮಹಿಳೆಯರು

ಮಾರ್ಚ್8 ರಂದು ಎಲ್ಲಾ ಮಾಧ್ಯಮಗಳನ್ನು ಮಹಿಳೆಯರೇ ನಡೆಸಬೇಕೆಂದು ಯುನೆಸ್ಕೋ ನೀಡಿದ ಕರೆಯ ಮೇಲೆ ಹಲವು ದೇಶಗಳಲ್ಲಿ ಅಂದು ರೇಡಿಯೋ, ಪೇಪರ್, ಟಿ.ವಿ.ಗಳನ್ನು ಮಹಿಳೆಯರೇ ನಡೆಸಿದರು. ಇಂತಹ ವರದಿಗಳು ಯುರೋಪಿನ ಅಲ್ಬೇನಿಯಾ, ದಕ್ಷಿಣ ಅಮೆರಿಕದ ಬೊಲಿವಿಯಾದಿಂದ ವಿಶೇಷವಾಗಿ ಬ[illegible]. ಈ ದೇಶಗಳ ರೇಡಿಯೋ, ಟಿ.ವಿ., ಪತ್ರಿ[illegible] ಆ ದಿನ ಮಹಿಳೆಯರೇ ನಡೆಸಿದರ[illegible] [illegible]ದು ಸಾಂಕೇತಿಕವಾದರೂ, ಮಹಿಳೆಯ[illegible] ಸುದ್ದಿ ಮಾಧ್ಯಮಗಳನ್ನು ಚಲಾಯಿಸಿದಾಗ ಹೇಗಿರುತ್ತದೆ ಎಂಬುದರ ಚಿತ್ರ ಜನಕ್ಕೆ ತಿಳಿಯಿತು.

ಮೊರೊಕ್ಕೊದಲ್ಲಿ ಘರ್ಷಣೆ

ಮೊರೊಕ್ಕೊದಲ್ಲಿ ಪ್ರಗತಿಪರ ಮಹಿಳಾ ಸಂಘಟನೆಗಳು ಹಮ್ಮಿಕೊಂಡಿದ್ದ ಭಾರೀ ಸಾಂಸ್ಕೃತಿಕ ಹಬ್ಬವನ್ನು ಚದುರಿಸಲು ಮೂಲಭೂತವಾದಿ ಮಹಿಳಾ ಸಂಘಟನೆಗಳು ಪ್ರಯತ್ನಿಸಿದಾಗ ಘರ್ಷಣೆಗಳಾದವು. ಹಲವು ದೇಶಗಳಲ್ಲಿ ಈ ರೀತಿಯ ಘರ್ಷಣೆಗಳು ನಡೆದಿವೆ. ಎಲ್ಲೆಡೆ ಪ್ರಗತಿಪರ ಮಹಿಳಾ ಸಂಘಟನೆಗಳು ತಲೆ ಎತ್ತುವುದನ್ನು ಮೂಲಭೂತವಾದಿಗಳು ವಿರೋಧಿಸುತ್ತಿದ್ದಾರೆ - ಹಿಂಸಾತ್ಮಕವಾಗಿ.

ಹೋರಾಟದ ಮಹಾಪೂರ..........

ಪುಟ 5 ರಿಂದ

ನಲಗೊಂಡ, ವಿಶಾಖಪಟ್ಟಣ, ಶ್ರೀಕಾಕುಲಂ ಮುಂತಾದ ಕಡೆ ಸಹ ವ್ಯಾಪಕ ಪ್ರತಿಭಟನಾ ಕಾರ್ಯಕ್ರಮಗಳು ನಡೆದ ವರದಿಗಳು ಬಂದಿವೆ.

ಆಗ್ರಾದಲ್ಲಿಯೂ 'ಕ್ಲಿಂಟನ್ ತೊಲಗು' ಎಂಬ ಆಗ್ರಹ

ಉತ್ತರ ಪ್ರದೇಶದ ಆಗ್ರಾದಲ್ಲಿರುವ ತಾಜ್ ಮಹಲ್‌ಗೆ ಕ್ಲಿಂಟನ್ ಭೇಟಿಯ ಸಂದರ್ಭದಲ್ಲಿ ತೀವ್ರವಾದ ಪ್ರತಿಭಟನೆ ನಡೆದಿದೆ. ಬಹುಶಃ ವಿಶ್ವ ವಿಖ್ಯಾತ ತಾಜ ಮಹಲನ್ನು ನೋಡುವುದಷ್ಟೇ ಕ್ಲಿಂಟನ್ ಭೇಟಿಯ ಉದ್ದೇಶವಾಗಿದ್ದಲ್ಲಿ ಪ್ರತಿಭಟನೆ ಅಗತ್ಯವಿರಲಿಲ್ಲ. ಭಾರತ ಭೇಟಿಯ ಉದ್ದೇಶ, ಅದನ್ನು ಮೀರಿದ್ದಾದ್ದರಿಂದ ಆಗ್ರಾದಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಕ್ಲಿಂಟನ್ ತೊಲಗು ಎಂದು ಆಗ್ರಹಿಸಿ ಕಪ್ಪು ಬಾವುಟ ಪ್ರದರ್ಶನ ನಡೆಸಿದ್ದಾರೆ. ಪೋಲೀಸ್ ರ ಬಂಧನ, ದಬ್ಬಾಳಿಕೆ ನಡುವೆಯೂ ತಾಜ್ ಮಹಲ್‌ನ ಬಳಿ ಕಪ್ಪು ಬಲೂನ್ ಹಾರಿಸುವ ಮೂಲಕ ತಮ್ಮ ಪ್ರತಿಭಟ[illegible] ವ್ಯಕ್ತಪಡಿಸಿದ್ದಾರೆ. ವಾರಣಾಸಿಯಲ್ಲಿ 100 ಕ್ಕೂ ಹೆಚ್ಚು ಫಾರ್ವರ್ಡ್ ಬ್ಲಾಕ್ ಕಾರ್ಯಕರ್ತರು ಕ್ಲಿಂಟನ್ ಭೇಟಿಯ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ.

ಮುಂಬೈ: ಬದಲಾದ ಕ್ಲಿಂಟನ್ ದಾರಿ

ಬಿಲ್ ಕ್ಲಿಂಟನ್ ಭೇಟಿ ನೀಡುವ ಮತ್ತೊಂದು ಪ್ರದೇಶದ ಮುಂಬೈ. ಎಡ ಪಕ್ಷಗಳು ಪ್ರತಿಭಟನೆಯ ಸಿದ್ಧತೆ, ಟ್ಯಾಕ್ಸಿ, ವಾಹನ ಚಾಲಕರು ಮತ್ತಿತರ ಹಲವು ಸಂಘಟನೆ-ಜನಗಳ ಪ್ರತಿಭಟನೆಯ ನಿರ್ಧಾರದಿಂದಾಗಿ ಮುಂಬೈನ ಸಹರಾ ವಿಮಾನ ನಿಲ್ದಾಣದಿಂದ ಒಬೆರಾಯ್ ಹೋಟೆಲ್‌ಗೆ ತೆರಳಬೇಕಾದ ಕ್ಲಿಂಟನ್ ಮಾರ್ಗ ಬದಲಿಸಿ ಕೋಲಾಟದಲ್ಲಿ ಇರುವ ನೌಕಾಪಡೆಯ ವಾಯುನೆಲೆ ಐ.ಎನ.ಎಸ.ಕುಂಜಲಿಗೆ ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ಅಲ್ಲಿಂದ ತಮ್ಮ ಹೋಟೆಲ್‌ಗೆ ಹೋಗುತ್ತಾರೆಂದು ವರದಿಯಾಗಿದೆ.

ಡಾಕಾದಲ್ಲಿ ವಿದ್ಯಾರ್ಥಿಗಳ ಧಿಕ್ಕಾರ

ಕ್ಲಿಂಟನ್ ದಕ್ಷಿಣ ಏಶ್ಯಾದ ಭೇಟಿಯಲ್ಲಿ ಮೊದಲು ಭೇಟಿ ಕೊಟ್ಟ ಬಾಂಗ್ಲಾದೇಶದ ರಾಜಧಾನಿ ಡಾಕಾದಲ್ಲಿಯೇ ಪ್ರತಿಭಟನೆಯನ್ನು ಎದುರಿಸಬೇಕಾಯಿತು. "ರಕ್ತ ಪಿಪಾಸು ಕ್ಲಿಂಟನ್ ಗೋ ಬ್ಯಾಕ್', Clionton No more Bloodshed', `No more Hiroshime", No More Nagasakir ಮುಂತಾದ ಫಲಕಗಳನ್ನು [illegible] ನೂರಾರು ವಿದ್ಯಾರ್ಥಿಗಳು ಬೃಹತ್ ಪ್ರತಿ[illegible] ಪ್ರದರ್ಶನ ನಡೆಸಿದ್ದಾರೆ.

ಭಾ[illegible] ನಂತರ ಭೇಟಿ ನೀಡಲಿರುವ ಪಾಕಿಸ್ತಾನದಲ್ಲಿಯೂ ಸಹ ಪ್ರತಿಭಟನೆಗಳ ವ್ಯಾಪಕ ಸಿದ್ಧತೆ ಕುರಿತು ವರದಿ ಬಂದಿವೆ.

ಬಂಡಾಯ ಸಾಹಿತ್ಯ-ಸಾಂಸ್ಕೃತಿಕ ಚಳುವಳಿಯ ನೇತಾರರಾಗಿ ಬರಗೂರು ರಾಮಚಂದ್ರಪ್ಪನವರು ಸಾಹಿತಿಗಳ ವಲಯದ ಹೊರಗೂ ಚಿರಪರಿಚಿತರು. ಅವರ ಒಂದು ಕಥೆ 'ಕ್ಷಾಮ' ಬರಗಾಲದ ದಾರುಣ ಪರಿಸ್ಥಿತಿ, ಬಡ ಜನರನ್ನು ಅವರ ಮೌಲ್ಯಗಳನ್ನು ಹಿಂದಿ ಹಿಪ್ಪೆ ಮಾಡುವ ಪರಿಯನ್ನು ಬಣ್ಣಿಸುತ್ತದೆ

ಕ್ಷಾಮ

ಬರಗೂರು ರಾಮಚಂದ್ರಪ್ಪ

ಕಥೆ



ರಾಮನ ಗೂರಲು ನಿಲ್ಲಲಿಲ್ಲ. ಎಂದಿಗಿಂತ ಹೆಚ್ಚಾಗಿ ಕೆಮ್ಮು ದಬಾಯಿಸಿಕೊಂಡು ಬರುತ್ತಿತ್ತು. ಪಕ್ಕದಲ್ಲಿಟ್ಟುಕೊಂಡಿದ್ದ ಚಿಪ್ಪಿನಲ್ಲಿ ಉಗಿದ. ಕೆಮ್ಮುತ್ತ ಉಗುಳುತ್ತ ಚಿಪ್ಪು ತುಂಬ್ತ ಬಂದಾಗ ಅದನ್ನೇ ನೋಡುತ್ತ, ಅವನಿಗೇ ಅಸಹ್ಯವೆನಿಸಿ "ಹಾಳು ಪ್ರಾರಬ್ಧಕರ್ಮ; ಸತ್ತಾದ್ರೂ ಹೋಗ್ಬಾರ್ದ" ಎಂದುಕೊಂಡು ಚನ್ನಿಯ ಕಡೆ ನೋಡಿದ. ಹತ್ತಲಾರದ ಹಸಿ ಸೌದೆಕಡ್ಡಿಗಳು; ಒಂದೇ ಸಮ ಊದುತ್ತಿದ್ದಳು. ಬೆಂಕಿ ಹತ್ತದೆ ಹೊಗೆ ಸುತ್ತಿಕೊಂಡು ಕಣ್ಣಲ್ಲಿ ನೀರು ಬರುತ್ತಿತ್ತು. ಹರಿದ ಸೆರಗಿನಿಂದ ಒರೆಸಿಕೊಳ್ಳುತ್ತಲೇ ಊದುತ್ತಲೇ ಒಳಗೊಳಗೆ "ಅಯ್ಯೋ ನನ್ನ ಬಾಳೆ" ಎಂದು ಹಳಿದುಕೊಳ್ಳುತ್ತಲೇ ವಿಧಿಯಿಲ್ಲವೆನ್ನುವಂತೆ ಊದುತ್ತಿದ್ದಳು. ಏನಾದರೂ ಮಾಡಿ ಅಡುಗೆಗೆ ಅಣಿ ಮಾಡಬೇಕಿತ್ತು. ಬಿಟ್ಟರೆ ಬೇರೆ ಗತಿಯಿಲ್ಲದೆ ಕಂಬಳಿಯ ಮೇಲೆ ಕೂತು ಕೆಮ್ಮುತ್ತಿದ್ದ ರಾಮನ ಕಡೆ ನೋಡಿದಳು. ಕೆಮ್ಮು ಯಾಕೋ ಬಿಡುವಂತೆ ಕಾಣಲಿಲ್ಲ. ಸೌದೆ ಹತ್ತುವ ಸೂಚನೆಯೂ ಕಾಣಲಿಲ್ಲ. ರಾಮ ಒಮ್ಮೆ ತನ್ನ ದೇಹವನ್ನು ನೋಡಿಕೊಂಡ. ದೇಹವೆಲ್ಲ ಮೂಳೆ ಎಂದುಕೊಂಡ. ಮದುವೆಯಾಗಿ ಮೂರುವರ್ಷವಾಯಿತು. ಒಂದು ವರ್ಷದ ಹಿಂದೆ ಕಾಣಿಸಿಕೊಂಡ ಕೆಮ್ಮು ಅಸ್ತಮ ಅನ್ನಿಸಿದ್ದು ಸ್ವಲ್ಪ ದಿನಗಳಾದ ಮೇಲೆ. ಆಗ ಅವರಿವರ ಬಾಯಿಗಳು ಚನ್ನಿಯನ್ನು ಬೇಯಿಸಿ ಮೆತ್ತಗೆ ಮಾಡಿದ್ದವು. "ಕಾಲ್ಗುಣ ಸರ್‍ಯಾಗಿಲ್ಲ. ಅದ್ಕೇ ಗೂರ್‍ಲು ಬ್ಯಾರೆ ಬಂತು, ಮಕ್ಳು ಬ್ಯಾರೆ ಆಗ್ಲಿಲ್ಲ" ಎಂದು ಆರೋಪ ಹೊರಿಸಿದ್ದವು. ಚನ್ನಿಯ-ಆಗ ತುಂಬಿದ್ದ-ಮೈಕಟ್ಟು ಕಂಡು ಜೊಲ್ಲು ಸುರಿಸಿದವರು, ಆಕೆ ದಕ್ಕದಿದ್ದಾಗ 'ಯೇ ಬಿಡೋ ಅದೆಲ್ಲೊ ಗೊಡ್ಡು" ಎಂದು ಮಾತು ಉಚಾಯಿಸಿದ್ದರು... ಚನ್ನಿ ತನ್ನ ಆದ್ಯ ಕರ್ತವ್ಯವೆಂಬಂತೆ ಊದುತ್ತಲೇ ಇದ್ದಳು. ರಾಮ ಕೆಮ್ಮುತ್ತಲೇ ಇದ್ದ. ಚನ್ನಿಯನ್ನು ನೋಡಿದ. ಎಷ್ಟು ಸೊರಗಿದ್ದಾಳೆ ಎನ್ನಿಸಿತು. ಊರಿಗೇ ಅಚ್ಚುಕಟ್ಟಾದ ಮೈಕಟ್ಟಿದ್ದ ಚನ್ನಿ ಔಡಲಕಡ್ಡಿಯಾಗಿದ್ದಾಳೆ. ಈ ವರ್ಷ ಬಂದ ಕ್ಷಾಮ ಊರನ್ನೇ ಗಡಗಡ ನಡುಗಿಸಿ ಸುಖದ ತಲೆಯ ಮೇಲೆ ಗಧಾರಿಯಿಂದ ಹೊಡೆದಿತ್ತು.

ದನಕರು ಸತ್ತವು. ಹೊಲ ಒಣಗಿ ವ್ಯಥೆಯನ್ನು ಬರೆಯುತ್ತಿದ್ದವು. ಕೂಲಿಯೂ ಗಿಟ್ಟದಿದ್ದಾಗ ಕೆಲವು ಕುಟುಂಬಗಳು ಊರು ಬಿಟ್ಟವು. ಚನ್ನಿ ಅರಸಾಹಸಪಟ್ಟು ಹೇಗೋ ಉಪವಾಸವೋ ವನವಾಸವೋ ಕಾಲ ತಳ್ಳುತ್ತಿದ್ದಳು. ಎರಡು ದಿನ ಹಿಂದ ಭರ್ಜರಿ ಮಳೆಯೇನೋ ಬಂದು ತರಿ ಜಮೀನಿನವರಿಗೆ ಅನುಕೂಲ ಮಾಡಿತ್ತು. ಆ ಊರಿನಲ್ಲಿ ಆರೇಳು ಮನೆಗೆ ಮಾತ್ರ ಕೆರೆ ಹಿಂದಿನ ಜಮೀನೆಲ್ಲ ಸೇರಿತ್ತಾದ್ದರಿಂದ ಖುಷ್ಕಿಯನ್ನೇ ನಂಬಿದವರಿಗಾದ ಅನುಕೂಲ ಅಷ್ಟಕಷ್ಟೆ. ಬೆಳೆಯೆಲ್ಲ ಒಣಗಿ ಇನ್ನು ಎಷ್ಟು ಹೆಣಗಿದರೂ ಫಲವಿಲ್ಲವೆನ್ನುವಾಗ ಮಳೆ ಧೋ ಎಂದು ಹುಯ್ದಿತ್ತು. ಬರಗಾಲದ ಕಾಮಗಾರಿಗೆ ಮಂಜೂರು ಮಾಡಿದ್ದ ಸರ್ಕಾರ ಸಮೃದ್ಧ ಮಳೆ ಬಂದ ಕಾರಣ ತೋರಿಸಿ ಬಹಳಷ್ಟು ಕಾರ್ಯಗಳನ್ನು ನಿಲ್ಲಿಸಿತು. ಚನ್ನಿಯಂಥವರು 'ಹೊತ್ತಲ್ಲದ ಹೊತ್ನಾಗೆ ಈ ಮಳೆನಾದೂ ಯಾಕ್ ಬಂತೋ ಹಾಳಾದ್ದು" ಎಂದು ಬಯ್ದುಕೊಳ್ಳದೆ ವಿಧಿಯಿರಲಿಲ್ಲ. ಚನ್ನಿ ಪಾಲಿಗೆ ಮತ್ಯಾವ ಹೊಲವೂ ಇರಲಿಲ್ಲ. ಇರುವ ಹೊಲವೆಂದರೆ ಗೂರಲು ರಾಮ-ತನ್ನ ಗಂಡ-ಒಬ್ಬನೇ. ಈ ಹೊಲದ ಉಳುವಿಗಾಗಿ ದಿನ ಬೆಳಗ್ಗ ದುಡಿದು ಎರಡು ಹೊತ್ತು ಕೂಳು ಹುಟ್ಟಿಸಬೇಕಿತ್ತು. "ಮಗನಂತು ವುಟ್ಲಿಲ್ಲ. ಇವ್ರಿಗೆ ಕೂಳು ವುಟ್ಸಾದೆ ನನ್ ಬಾಳು" ಎಂದು ಎಷ್ಟೋ ಸಾರಿ ಅಂದುಕೊಂಡಿದ್ದಳು... ಎಷ್ಟು ಊದಿದರೂ ಒಲೆ ಹತ್ತಲಿಲ್ಲ. "ಥೂ! ಇದ್ರ ಮನೆ ಕಾಯವ್ವಾಗ" ಎಂದು ಬಯ್ದಳು. ರಾಮ ಮಾತನಾಡದೆ-ಮಾತನಾಡಲಾಗದೆ-ಎಂದಿನಂತೆ ನಿಸ್ಸಹಾಯಕ ಸ್ಥಿತಿಯಲ್ಲಿ ಅತ್ತಲೇ ನೋಡುತ್ತಿದ್ದ. ವಿಲವಿಲನೆ ಒದ್ದಾಡುತ್ತಿದ್ದ. ಕ್ಷಾಮ ಬೇರೆ, ಇವಳಿಗೆ ಇಂತ ಸ್ಥಿತಿ ಬರಬಾರದಿತ್ತೆಂದುಕೊಂಡ. ನೋಡ ನೋಡುತ್ತ "ಚನ್ನಿ" ಎಂದ. ತಿರುಗಿದಳು. ಸೊರಗಿದ ಮುಖದಲ್ಲಿ ಹರಿಯುವ ನೀರು; ಕೆದರಿದ ಕೂದಲು; ಕೂದಲ ಮೇಲೆ ಅಲ್ಲಲ್ಲೆ ಬಾಳು ಬರೆಯುತ್ತಿದ್ದ ಬೂದಿ. "ಚಿಪ್ಪ ತುಂಬ್ತು" ಎಂದ. ಎದ್ದು ಬಂದಳು. ಚಿಪ್ಪ ತೆಗೆದುಕೊಂಡು ಹೊರತಂದು ಮೂಲೆಯಲ್ಲಿ ಮಾಡಿಕೊಂಡಿದ್ದ ಸಣ್ಣ ಗುಂಡಿಯಲ್ಲಿ ಹಾಕಿ ತೊಳೆದು, ಮತ್ತೆ ತಂದಿಟ್ಟು ಒಲೆ ಊದಲು ತೊಡಗಿ ಸಾಕು ಸಾಕಾಗಿ, ಹತ್ತುವುದು, ಸ್ವಲ್ಪ ಹೊತ್ತಾದ ಕೂಡಲೇ ಆರುವುದು, ಹೊಗೆ ಸುತ್ತುವುದು - ಹೀಗೆ ಕಣ್ಣುಮುಚ್ಚಾಲೆಯಾಡುತ್ತಿದ್ದಾಗ ಕಣ್ಣು ತೆರೆಯುವುದೇ ಕಷ್ಟವೆನ್ನಿಸುವಂತಾಗಿ ಎದುರುಮನೆ ಮಲ್ಲಿಯನ್ನು ಕೇಳಿ ಊದುಗೊಳವಿನಾದ್ರೂ ತಂದು ಊದೋಣ ಎಂದುಕೊಂಡು ಹೊರಬಂದಾಗ ಮಲ್ಲಿಯ ಹಜಾರದಲ್ಲಿ, "ನಾಳೆ ಗದ್ದೆ ಕಳೆ ತಗೀತೀವಿ ಬರ್ಬೇಕು" ಎಂದು ಒಳಗಿದ್ದ ಮಲ್ಲಿಗೆ ಕೂಗಿ ಹೇಳಿದ ಧ್ವನಿ ಕೇಳಿ 'ಓ ತೀಟೆ ರಂಗಪ್ಪ ಬಂದವ್ನೆ ಆಗ್ಲೆ" ಎಂದುಕೊಂಡು ಕ್ಷಣಕಾಲ ನಿಂತಲ್ಲೇ ನಿಂತಾಗ, ಅವನು ಅವಳ ಹೊಟ್ಟೆಗೆ ಮೃದುವಾಗಿ ಒಂದೇಟು ಕೊಟ್ಟು ಯಾರಾದರೂ ಕಂಡರೋ ಎಂದು ಅತ್ತಿತ್ತ ನೋಡಿದಾಗ, ನೋಡಲಾಗದೆ ಸರಕ್ಕನೆ ಒಳಬಂದು, ಒಲೆಯ ಮುಂದೆ ಕುಳಿತು ರಪರಪನೆ ಯಾವಾಗಿನ ದಕ್ಕಿಂತ ಬಿರುಸಾಗಿ ಊದಿದಳು. 'ಹಾಳ್ ಮಿಂಡ ಎಲೆ ಇಲ್ದದ್ರು ಕಾಲಿಗೆ ತೊಡಕೊಳ್ತಾನೆ, ಊರಾಗಿರೋ ಚೆಲ್ವೇರೆಲ್ಲ ಬೇಕಿವ್ನಿಗೆ" ಎಂದು ಒಳಗೊಳಗೇ ಸಿಡಿಮಿಡಿಗೊಳ್ಳುತ್ತ ಊದುಗೊಳವಿ ತರಲೂ ಅಡ್ಡ ಬಂದ ಬೇವರ್ಸಿ ಎಂದೇ ಶಪಿಸುತ್ತ ಸೌದೆಯನ್ನಷ್ಟು ಥೀಮಾರಿಗೊಳಿಸುತ್ತಾ "ಕಟ್ಕೊಂಡ ಹೆಂಡ್ತಿ ಬಾಳ್ಸೋದ್ ಬಿಟ್ಟು ಊರಾಡ್ಕಂಡು ವೈನಾಗಿ ರೋಕೋಗ್ತಾನೆ ಇವ್ನೊಬ್ಬ ಕಂಡೋರ್ ಮಿಂಡ" ಎಂದು ಯಾಕೊ ಮತ್ತೆ ಮತ್ತೆ ಒಳಗೇ ಉಗುಳಬೇಕೆನ್ನಿಸಿ ವಿಧಿಯಿಲ್ಲದೆ ಒಲೆ ಊದುತ್ತಿದ್ದಳು. ಒಮ್ಮೆ ಊದುವುದು, ಮತ್ತೊಮ್ಮೆ ಕೆಮ್ಮುವ ಗಂಡನನ್ನು ನೋಡುವುದು - ಹೀಗೆ ಸಾಗಿತ್ತು. ಎಂದಿಗಿಂತ ಇವತ್ತು ಹೆಚ್ಚು ಹೊಗೆಯಾದರೂ ತುಟಿಪಿಟಿಕ್ಕೆನ್ನದೆ ಚಳಿಗಾಳಿಗೆ ಎದ್ದು ಹೊರಬರಲೂ ಆಗದೆ ಗೂರಲು ಹೆಚ್ಚುತ್ತಿದ್ದುದರಿಂದ ಕೂರಲೂ ಆಗದೆ ಅವನು ಪಡುವ ಪಾಡು ಕಂಡು ಕನಿಕರದಿಂದ ಎದ್ದು ಅತ್ತ ಇತ್ತ ಹೊಯ್ದಾಡುತ್ತಿದ್ದ ಮಣ್ಣಿನ ದೀಪ ನೋಡಿ, "ಸೀಮೆಎಣ್ಣೆ ಬುಡ್ಡಿನಾರ ಇದ್ದಿದ್ರೆ ಚೆನ್ನಾಗಿತ್ತು. ಅದೂ ಕೆಟ್ಟೋಯ್ತು" ಎಂದು ಆತಂಕಪಟ್ಟುಕೊಂಡು ಕಡೆಗೆ, ಕೆಟ್ಟಿದ್ದನ್ನೇ ಹುಡುಕಿ ನೋಡಿ ತಳದಲ್ಲಿ ಸ್ವಲ್ಪ ಸೀಮೆಎಣ್ಣೆ ಕಂಡು ಆನಂದವಾಗಿ, ಬಾನಗಳ ಸಂದಿಯಲ್ಲಿದ್ದ ಬಟ್ಟೆ ಚೂರು ತೆಗೆದುಕೊಂಡು ಒಂದು ತೊಗರಿಕಡ್ಡಿ ತುದಿಗೆ ಸುತ್ತಿ ಅದನ್ನು ಬುಡ್ಡಿಯ ತಳಕ್ಕೆ ಅದ್ದಿದಾಗ ಸೀಮೆಯೆಣ್ಣೆಯನ್ನು ಕ್ಷಣದಲ್ಲಿ ಹೀರಿತು. ಕಡ್ಡಿ ತಂದು ಸೌದೆ ತಳಕ್ಕೆ ಇಟ್ಟು ಊದಿದಾಗ ಭುಗ್ಗೆಂದು ಹತ್ತಿ, ರಾಮ ಬೆಚ್ಚಿ, "ಏನೇ ಅದು?" ಎಂದ. "ಕೋಲನ್ನೇ ಸಪ್ಪು ಬೇಯಿಸ್ತಿದ್ದೀನಿ" ಎಂದಷ್ಟೇ ಹೇಳಿ ಉರಿಯುವ ಒಲೆಯನ್ನು ಏನೋ ಸಮಾಧಾನದಿಂದ ನೋಡುತ್ತಿರುವಾಗ 'ಗದ್ದೆ ಕಳೆ ತಗೀತೀವಿ ಬರ್ರಮ್ಮಣ್ಣೆ ನೀವಿಬ್ರೂ" ಎಂದು ಪಕ್ಕದಲ್ಲೇ ಕೂಗಿದ್ದು ಗೊತ್ತಾಗಿ, ತನಗೆ ಕೇಳಿಸಲೆಂದೇ ಹೀಗೆ ಪ್ರತಿಸಾರಿ ಗಟ್ಟಿಯಾಗಿ ಕೂಗಿ ಅಕ್ಕಪಕ್ಕದವರಿಗೆ ಹೇಳಿ ಹೋಗುತ್ತಾನೆಂದು ಅರಿವಿದ್ದುದರಿಂದ 'ಕೊರಮ' ಎಂದು ನೆಟಿಗೆ ಮುರಿದು, "ಹೋರಿ ಆಡ್ಡಂಗಾಡ್ತಾನೆ ಊರ್‍ನಾಗೆಲ್ಲ" ಎಂದು ಮತ್ತೆ ಬಯ್ದುಕೊಳ್ಳಲು ಹೋಗಿ ಯಾಕೋ ಅವನ ನನಪೇ ಹೊಟ್ಟೆ ತೊಳಸುವಂತೆ ಮಾಡುವುದರಿಂದ ಉರಿಯುವ ಒಲೆ ನೋಡುತ್ತಾ ಕುಳಿತಳು.

ಹಾಳು ಕ್ಷಾಮ ಬಂದು ಊರೆಲ್ಲಾ ಬಂಜೆ ಮಾಡಿತಲ್ಲ ಎಂದು ನೋವಿನ ನೆಲದಲ್ಲಿ ಬೀಜ ಬಿತ್ತುತ್ತಿರುವಾಗ ಫಕ್ಕನೆ ನಗು ಕಿವಿಗೆ ಅಪ್ಪಳಿಸಿ ನಿಟ್ಟು ಬಿದ್ದಂತಾಗಿ 'ಅವ್ನದೇ ಆ ರಂಗಪ್ಪಂದು. ಆ ಮಲ್ಲಿಗೂ ಗಂಡ ಜಮಾಕರ್ಚಿನಾಗಿಲ್ಲ. ಪಾಪ! ಸಾಧು ಪ್ರಾಣಿ. ಯಾವ್ದೊ ಊರಿಗೆ ಬ್ಯಾರೆ ಹೋಗ್ಯತೆ. ಈಗ ಇವ್ನೆ ಮಾರಾಜ ಆಗವ್ನೆ" ಅಂದುಕೊಂಡು ತನ್ನ ಮೈ ಕೈಯನ್ನು ಮುಟ್ಟಿ ನೋಡಿಕೊಳ್ಳುತ್ತ, ಹೊತ್ತಿಗೊತ್ತಿಗೆ ಕೂಳಿಲ್ಲದೆ ಕಡ್ಡಿಯಾದೆ ಅನ್ನಿಸಿ, "ಯಾವ್ ಜಲ್ಮದ್ ಪಾಪನೊ" ಎಂದು ತನ್ನನ್ನೇ ಹಳಿದುಕೊಳ್ಳುವಾಗ "ಹೊತ್ತಿಗ್ ಸರ್‍ಯಾಗ್ ಬರ್ರವ್ವ. ಬರಗಾಲ್ದಾಗ್ ಬಾಯಿಗ್ ಮಣ್ಣು ಹಾಕ್ಕೊಬಾರ್‍ದು. ಅಮ್ಯಾಲ್ ನನ್ನ ಹೊಲಕ್ಕೆ ಬರೋಲ್ಲ ಅಂತ ನೀವೂನು ಪ್ರತಿಜ್ಞೆ ಮಾಡ್ಬಿಟ್ಟೀರ" ಎಂದು ರಂಗಪ್ಪ ದೊಡ್ಡದಾಗಿ ನಗುತ್ತ ಯಾರಿಗೊ ಹೇಳುತ್ತಿರುವುದು ಕೇಳಿಸಿ, ಬರಗಾಲ್ದಾಗ್ ಬಾಯಿಗೆ ಮಣ್ಣು, ಪ್ರತಿಜ್ಞೆ - ಇವೆಲ್ಲ ತನ್ನ ಕುರಿತ ಮಾತುಗಳೆಂದು ಗೊತ್ತಾಗಿ ಕುಳಿತಲ್ಲೇ ಕೋಪದಿಂದ ಬರಿ ಬಾಯನ್ನು ಪಿಟಿಪಿಟಿ ಎಂದು ಒಳಗೆ ಹೊಗೆಯಾಡಿಸಿದಳು. ಉರಿಯುವ ಒಲೆ ನೋಡುತ್ತ ಒಂದು ರೀತಿಯ ಅಸಹಾಯಕತೆ ಬರುತ್ತ ನಿಟ್ಟುಸಿರುಬಿಟ್ಟು ಮಡಕೆಯ ಮುಚ್ಚಳ ತೆಗೆದು ಈಗಿನ್ನೂ ನೀರಿಗೆ ಬಿಸಿ ಬರುತ್ತಿದೆ, ಸೊಪ್ಪಿನ್ನೂ ಜುಮ್ಮೆಂದಿಲ್ಲವೆಂದು ಖಾತ್ರಿ ಮಾಡಿಕೊಂಡು ರಂಗಪ್ಪನ ಮಾತುಗಳು ಮರುಕಳಿಸಿ, ಚಳಿಯಾಗುತ್ತಿರುವಂತೆ ಭಾಸವಾಗಿ ಗಾಳಿಗೆ ದಡಬಡವೆನ್ನುವ ಹಳೆಯ ಬಾಗಿಲನ್ನು ಮುಂದು ಮಾಡಲು ಬಂದಳು. ಕ್ಷಾಮದ ಬೇಗೆಯಲ್ಲಿ ಬದುಕುವುದೂ ದುಸ್ತರವಾಗಿ, ದಿನ ಒಪ್ಪೊತ್ತಿಗೆ ಕೂಳು ಗಿಟ್ಟಿಸುವುದೂ ಕಷ್ಟವಾದಾಗಲೆ ಬಾಗಿಲು ಅಲ್ಲಲ್ಲೇ ಸೀಳುಬಿಟ್ಟು, ಒಳಚಿಲಕ ಬೇರೆ ಒಂದು ಸಾರಿ ಜಾಡಿಸಿದರೆ ಕಿತ್ತುಬರುವಷ್ಟು ಸಡಿಲವಾಗಿತ್ತು. ಹಲಗೆಗಳು ಸಡಿಲವಾಗಿ ತಾನೊಬ್ಬಳೇ ದುಡಿದು ಗಂಡನನ್ನು ಸಾಕುತ್ತ ತಾನು ಜೀವ ಹಿಡಿದುಕೊಳ್ಳುವ ದಾರುಣತೆ ಒಳಗೆಲ್ಲ ಕೊರೆದು ಕಂಠದಲ್ಲಿ ಒದ್ದುಬರುವ ಅಳಲಿನೊಂದಿಗೆ ಗುದ್ದಾಡುತ್ತಿರುವಾಗ ರಂಗಪ್ಪ ಯಾರೊಂದಿಗೋ ಫಕಫಕನೆ ನಗುತ್ತ ಹೋದದ್ದು ಮಸುಕು ಮಸುಕಾಗಿ ಕಂಡು ಅವನ ಹೊಲಕ್ಕೆ ಹೋಗುವುದಿಲ್ಲವೆಂದು ಹಟ ಮಾಡದಿದ್ದರೆ ಅಷ್ಟು ಇಷ್ಟು ಹಣ ಗಿಟ್ಟುತ್ತಿತ್ತೇನೊ ಎನ್ನಿಸಿ ತಕ್ಷಣ ಥೂ, ಆ ನಾಯಿ ವೊಲಕ್ಕೆ ವೋಗ್ಬಾರ್‍ದು ಎಂದು ಒತ್ತು ಹಾಕಿಕೊಳ್ಳುತ್ತ, ಬಾಗಿಲಿನ ಅಗಣಿಪಟ್ಟಿಯ ಸಡಿಲಗೊಂಡ ಮೊಳೆಗಳನ್ನು ಗುಂಡುಕಲ್ಲಿನಿಂದ ದಬ ದಬ ಕುಟ್ಟಿ ಕೈ ಸೋತಂತಾಗಿ ಹಾಗೇ ಕುಳಿತಳು. ಮತ್ತೆ ಎದ್ದು ಒಳಚಿಲಕವನ್ನು ನೋಡಿ ಇದ್ಕೂ ಬಂದೈತೆ ಕೆಟ್ಟಾಪತ್ತು ಎಂದು ಸಿಟ್ಟೊ, ಅಳಲೊ, ಅಸಹಾಯಕತೆಯೊ ಬೇಸರವೊ ಅಥವಾ ಎಲ್ಲ ಸೇರಿದೆಯೊ ಗೊತ್ತಾಗದ ಭಾವ ಬಿಂಬಿಸಿ ಹಾಳಾಗಿ ಹೋಗಲಿ ಎನ್ನಿಸಿ ಹಾಗೇ ಬಂದು ಮತ್ತೆ ಸುಮ್ಮನಿರಲಾರದೆ ಅಲ್ಲಿನ ಮೊಳೆಗಳನ್ನು- ಗುಂಡುಕಲ್ಲಿನ ಪೆಟ್ಟಿಗೆ ಸಿಕ್ಕದಿದ್ದರೂ ಹೊಡೆದು ಬಿಗಿ ಮಾಡಲು ಯತ್ನಿಸಿ ಹೊಡೆದದ್ದಷ್ಟೇ ಸಮಾಧಾನ ಎನ್ನಿಸಿ, ಒಲೆ ಮೇಲೆ ಉಕ್ಕಿದಂತಾಗಿ ದಡಬಡನೆ ಅತ್ತ ಬಂದಳು. ಮುರುಕುಸೌಟಿನ ತುದಿಯಲ್ಲಿ ಸೊಪ್ಪು ತೆಗೆದುಕೊಂಡು ಕೈಯಲ್ಲಿ ಹಿಸುಕಿ ಸರಿಯಾಗಿ ಬೆಂದಿದೆಯಾ ಇಲ್ಲವೊ ಪರೀಕ್ಷಿಸಿ ಇನ್ನೇನು ಬೇಯುತ್ತೆ ಎಂದುಕೊಂಡು ಕುಳಿತಾಗ, ಬಾಗಿಲು ಇದಕ್ಕೆ? ಬಾಗಿಲು ಬಿದ್ದು ಹಾರೊಡೆದುಕೊಂಡರೆ!... ಎಂದು ಕುಳಿತಲ್ಲೇ ಕಂಪಿಸಿ ನೆಲ ತನ್ನದೋ ಅಲ್ಲವೊ, ನೆಲದ ಮೇಲಿದ್ದೇನೋ ಇಲ್ಲವೊ ಮುಟ್ಟಿ ನೋಡಬೇಕೆನ್ನಿಸಿ, ಏನೋ ಭಯವಾಗಿ ಯಾಕೊ ಮೈಮನಸ್ಸು ಅಸ್ವಸ್ಥವಾಗಿ ಗಂಡನಿಗೆ ಕೆಮ್ಮು ಹೆಚ್ಚಾದ್ದು ಕಂಡು ಯಾವುದಕ್ಕೆ ಪ್ರತಿಕ್ರಿಯಿಸಬೇಕೆಂದು ಗೊತ್ತಾಗದೆ ಮೊಣಕಾಲುಗಳ ಮಧ್ಯೆ, ತಲೆಮೀಮ್ಕೊಂಡು ಸುಮ್ಮನೆ ಕುಳಿತಳು.

(ಮುಂದಿನ ವಾರಕ್ಕೆ)

ಹಾಳು ಕ್ಷಾಮ ಬಂದು ಊರೆಲ್ಲಾ ಬಂಜೆ ಮಾಡಿತಲ್ಲ ಎಂದು ನೋವಿನ ನೆಲದಲ್ಲಿ ಬೀಜ ಬಿತ್ತುತ್ತಿರುವಾಗ ಫಕ್ಕನೆ ನಗು ಕಿವಿಗೆ ಅಪ್ಪಳಿಸಿ ನಿಟ್ಟು ಬಿದ್ದಂತಾಗಿ.......

ಹಕ್ಕಿಯೇ ನೀ ಸೆರೆಯಲಿ ಸಿಲುಕಿರಲು

ಏತರಾಸೆಯನೊ ಹೇಗೋ ಹಚ್ಚಿ
ಆಡುತಾಡುತಲೆ ಹಿಡಿದರು ಕಚ್ಚಿ
ತಲೆಯಲಿ ಮಾಟದ ಮುಳ್ಳನು ಚುಚ್ಚಿ
ನೆಲಮಾಳಿಗೆಯೊಳು ಕತ್ತಲೆ ಹೊಚ್ಚಿಸೆರೆ
ಹಿಡಿದರು ಎಲೆ ಚಿನ್ನದ ಹಕ್ಕಿ
ಬೊಕ್ಕಸದುಕ್ಕಿನ ಬಾಗಿಲವಿಕ್ಕಿ
ಒಗೆದರು ಕೂಡಲೆ ರೆಕ್ಕೆಯ ಕಿತ್ತು
ಸುಮ್ಮನೆ ನೋಡುವೆ ಸುತ್ತೂ ಮುತ್ತು
ಹಕ್ಕಿಯೇ ನೀ ಸೆರೆಯಲಿ ಸಿಕ್ಕಿರಲು
ಧರ್ಮದ ಕೊರಳಿಗೆ ಅನ್ನದ ಉರಲು
ಅನ್ನ ಅನ್ನ ಪ್ರಾಣದ ಕೂಗು
ಪ್ರಳಯಕೆ ಔತಣ ಹಾಗೂ ಹೀಗೂ.
ಈ ಹಸಿವೆಯ ಕೊಲ್ಲುವ ಸುತ್ರಾಣ
ಎಲ್ಲಿದೆ ಎಲ್ಲಿದೆ ಬಿಲ್ಲೂ ಬಾಣ?
ಚಿನ್ನದ ಸೆರೆಯನು ಮೊದಲೇ ಬಿಡಿಸಿ!
ಅನ್ನ ಕಲ್ಪವೃಕ್ಷವ ಚಿಗುರಿಡಿಸಿ
ಅಲ್ಲಿಯವರೆಗೆ ಅನ್ನ ಅನ್ನ
ಒಂದೇ ಹೊಡು ಕೇಳಲೇ ಚಿನ್ನ

- ದ.ರಾ.ಬೇಂದ್ರೆ

ಬ್ರಿಟಿಷರು ಭಾರತವೆಂಬ ಹಕ್ಕಿಯನ್ನು ಸೆರೆಗಿಕ್ಕಿದ ಬಗೆಯನ್ನು ವರ್ಣಿಸಿದ್ದಾರೆ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ದ.ರಾ.ಬೇಂದ್ರೆ. ಏತರಾಸೆಯನು ಹೇಗೋ ಹಚ್ಚಿ...... ತಲೆಯಲಿ ಮಾಟದ ಮುಳ್ಳನು ಚುಚ್ಚಲು ಅಮೇರಿಕಾಧಿಪತಿ ಬಂದಿರುವ ಸಮಯದಲ್ಲಿ ನೆನೆಸಿಕೊಳ್ಳಬೇಕಾದ ಸಾಲುಗಳು 'ಕೆಲಸವಿಲ್ಲದವರ ಹಾಡು' ಕವನದಿಂದ 'ಗರಿ' ಕವನ ಸಂಕಲನದಿಂದ

ಗಲಭೆಯಲ್ಲಿ ನಲುಗಿದ ನರೇಗಲ್ಲ

ನಿತ್ಯಾನಂದ ಸ್ವಾಮಿ

ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನಾದ್ಯಂತ ಗ್ರಾಮ ಪಂಚಾಯತಿ ಚುನಾವಣೆ ಫೆಬ್ರವರಿ 27 ರಂದು ನಡೆಯಿತಾದರೂ ನರೇಗಲ್ಲ ಗ್ರಾಮದಲ್ಲಿ ಅದು ಫೆಬ್ರವರಿ 28 ರಂದು ನಡೆಯಿತು. ರಾಜ್ಯ ಚುನಾವಣಾ ಆಯೋಗವು ಮತದಾನ ಮುಂದೂಡಿ ಆದೇಶ ಹೊರಡಿಸಲು ಜಿಲ್ಲಾಧಿಕಾರಿಗಳ ಮನವಿಯೇ ಕಾರಣವೆನ್ನಲಾಗಿದೆ. ಗ್ರಾಮದಲ್ಲಿ ಇತ್ತೀಚಿಗೆ ನಡೆದ ಗಲಭೆಯ ಹಿನ್ನಲೆಯಲ್ಲಿ ಶಾಂತಿಸುವ್ಯವಸ್ಥೆ ಕಾಪಾಡಲು ಹಾಗೂ ಬಿಗಿ ಪೋಲೀಸ್ ಬಂದೋಬಸ್ತ ಏರ್ಪಡಿಸಲು ಅನುಕೂಲವಾಗುವಂತೆ ಮತದಾನ ಒಂದು ದಿನ ತಡವಾಗಿ ನಡೆಸಲಾಯಿತು.

ನರೇಗಲ್ಲ ಗ್ರಾಮದಲ್ಲಿ ಇತ್ತೀಚಿಗೆ ಗಲಭೆ ನಡೆದಿತ್ತು ಎಂದಾಗ ಕೆಲವರಿಗೆ ಗದಗ ಜಿಲ್ಲೆಯ ರೋಣ್ ತಾಲೂಕಿನ ನರೇಗಲ್ಲ ನೆನಪಾಗಬಹುದು. ಅಲ್ಲಿಯೂ ಇತ್ತೀಚಿಗೆ ಗಲಭೆ ನಡೆದಿದ್ದು. ಕ್ಷುಲ್ಲಕ ಕಾರಣಗಳಿಗಾಗಿ ಎರಡು ಕೋಮುವಗಳ ನಡುವೆ, ಎರಡು ಜಾತಿಗಳ ನಡುವೆ, ಎರಡು ಗುಂಪುಗಳ ನಡುವೆ ಆರಂಭವಾಗುವ ವಾಗ್ವಾದ ಅಥವಾ ಜಗಳ ದಂಗೆಯ ಸ್ವರೂಪ ತಾಳಿ ಇಡೀ ಗ್ರಾಮದ ನೆಮ್ಮದಿಯನ್ನು ಹಾಳು ಮಾಡುವ ಪ್ರಸಂಗಗಳು ಇತ್ತೀಚಿಗೆ ಹೆಚ್ಚಾಗುತ್ತಿರುವುದು ಆತಂಕದ ವಿಷಯವಾಗಿದೆ. ಒಂದೊಂದು ಗುಂಪಿಗೆ ಒಂದೊಂದು ರಾಜಕೀಯ ಪಕ್ಷದ ಪ್ರಚೋದನೆ, ಬೆಂಬಲ ಇದ್ದೇ ಇರುತ್ತದೆ. ಕಾಂಗ್ರೆಸ್, ಜನತಾದಳ, ಬಿಜೆಪಿ ಮೊದಲಾದ ಬಂಡವಾಳಶಾಹಿ ಭೂಮಾಲಕ ಪಕ್ಷಗಳು ತಮ್ಮ ಪಕ್ಷ ರಾಜಕೀಯಕ್ಕಾಗಿ ಗ್ರಾಮೀಣ ಸ್ವಾಸ್ಥ್ಯವನ್ನೇ ಬಲಿ ತೆಗೆದುಕೊಳ್ಳುತ್ತಿರುವುದನ್ನು ಜನಸಾಮಾನ್ಯರು ಮನಗಾಣಬೇಕಾಗಿದೆ.

1999 ರ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡಿತ್ತು. ಹಾನಗಲ್ಲ ವಿಧಾನಸಭಾ ಮತಕ್ಷೇತ್ರದಿಂದ ಸಂಯುಕ್ತ ಜನತಾದಳದ ಅಭ್ಯರ್ಥಿ, ಸಚಿವ ಸಿ.ಎಂ.ಉದಾಸಿ ಪರಾಭವಗೊಂಡು ಕಾಂಗ್ರೆಸಿನ ಮನೋಹರ ತಹಶೀಲ್ದಾರ ಜಯಗಳಿಸಿದ್ದರು. ರಾಜ್ಯದ ಇತರ ಕಡೆಗಳಂತೆ ಇಲ್ಲಿಯೂ ಸಂಯುಕ್ತ ಜನತಾದಳವು ಬಿಜೆಪಿ ಸೆರಗು ಹಿಡಿದುಕೊಂಡು ಹೋದದ್ದು ಅಲ್ಪಸಂಖ್ಯಾತರನ್ನು ಇಡಿಯಾಗಿ ಕಾಂಗ್ರೆಸ್ ಕಡೆ ವಾಲುವಂತೆ ಮಾಡಿತ್ತು. ನೂರಕ್ಕೆ 30 ರಷ್ಟು ಇರುವ ಅಲ್ಪಸಂಖ್ಯಾತರ ಮತಗಳನ್ನು ತನ್ನ ಬುಟ್ಟಿಗೆ ಹಾಕಿಸಿಕೊಂಡ ಕಾಂಗ್ರೆಸಿನ ಮನೋಹರ ತಹಶೀಲ್ದಾರ 15 ಸಾವಿರಕ್ಕೂ ಅಧಿಕ ಅಂತರದಿಂದ ಸಿ.ಎಂ. ಉದಾಸಿ ಅವರನ್ನು ಸೋಲಿಸುವಂತಾಯಿತು.

ಕಾಂಗ್ರೆಸ್ ಅಭ್ಯರ್ಥಿ ಗೆದ್ದ ಸುದ್ದಿ ಕೇಳಿ ನರೇಗಲ್ಲ ಗ್ರಾಮದಲ್ಲಿ ಮಾಂಸದ ವ್ಯಾಪಾರ ಮಾಡುತ್ತಿದವನೊಬ್ಬನಿಗೆ ಹುಚ್ಚು ಹಿಡಿಸಿತು. ಸ್ವತಃ ತಾನೇ ಎಂ.ಎಲ್.ಎ. ಆಗಿದ್ದೇನೆ ಎಂಬಂತೆ ಗಂಟಲುಮಟ್ಟ ಕುಡಿದು ಊರು ತುಂಬ ಪಟಾಕಿ ಹಾರಿಸಿದನಂತೆ. ಇದರಿಂದ ಸಂಯುಕ್ತ ಜನತಾದಳದ ಸ್ಥಳೀಯ ಪುಡಾರಿಗಳಿಗೆ ಅವಮಾನವಾಯಿತಂತೆ. "ಸಾಬರಿಗೆ ಸೊಕ್ಕು ಬಂದಂತಿದೆ, ಪೆಟ್ಟು ತಿನ್ನದೆ ಬಹಳ ದಿನಗಳಾಗಿವೆ. ಸರಿಯಾಗಿ ಬುದ್ದಿ ಕಲಿಸಬೇಕು" ಎಂದುಕೊಂಡರಂತೆ. ಸಾಬನೊಬ್ಬ ಪಟಾಕಿ ಹಾರಿಸಿದ ಕುರಿತಾದ ಚರ್ಚೆ ಹಾನಗಲ್ಲ ವರೆಗೂ ತಲುಪಿತಂತೆ. ಮುಂದುವರಿಯಲು ಹಸಿರು ನಿಶಾನಿ ಪಡೆದುಕೊಂಡು ಬಂದ ಪುಡಾರಿಗಳು ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದರಂತೆ. ಪಟಾಕಿ ಹಾರಿಸಿದವನನ್ನು ಹಿಡಿದು ಹಲ್ಲೆ ಮಾಡಲು ಪ್ರಯತ್ನ ಪಡಲಾಗಿದ್ದರೂ ಅಂದು ಆತ ತಪ್ಪಿಸಿಕೊಂಡು ಓಡಿಹೋಗಿದ್ದಾನಂತೆ.

ದಿನಗಳು ಉರುಳಿದಂತೆ ನರೇಗಲ್ಲ ಗ್ರಾಮದಲ್ಲಿ ರಾಜಕೀಯ ವೈಶಮ್ಯವು ನಿಧಾನವಾಗಿ ಕೋಮು ವೈಶಮ್ಯವಾಗಿ ಬಲಿಯತೊಡಗಿತ್ತು. ಮಸೀದಿ ಎದುರು ವಾದ್ಯ ಬಾರಿಸುತ್ತಾರಂತೆ ಎಂಬ ಸುದ್ದಿಯೊಂದು ಗ್ರಾಮದಲ್ಲಿ ಸ್ಫೋಟಗೊಂಡಾಗ ಅಲ್ಪಸಂಖ್ಯಾತ ಸಮುದಾಯದ ಪ್ರತಿನಿಧಿಗಳು ಆಡೂರು ಪೋಲೀಸ್ ಠಾಣೆಗೆ ಧಾವಿಸಿದರು. ಪೋಲೀಸರು ಎರಡು ಕಡೆಯವರನ್ನು ಕರೆಯಿಸಿ ರಾಜಿ ಮಾಡಿಸಿದ್ದರು. ಮಸೀದಿ ಮುಂದೆ ಹಾದು ಹೋಗುವಾಗ ವಾದ್ಯಗಳನ್ನು ಬಾರಿಸದಿರಲು ಇನ್ನೊಂದು ಗುಂಪಿನವರು ಒಪ್ಪಿಗೆ ನೀಡಿದ್ದರು ಎನ್ನಲಾಗಿದೆ. ಆದರೆ 24 ಗಂಟೆಯೊಳಗಾಗಿ ಒಪ್ಪಂದದ ಉಲ್ಲಂಘನೆಯಾಯಿತು!

ಶಾಲಾ ವಿದ್ಯಾರ್ಥಿಗಳ ಪ್ರಭಾತ ಫೇರಿಯ ಮೇಲೆ ನಡೆದ ಕಲ್ಲು ತೂರಾಟಗಳಿಂದ ಗ್ರಾಮಸ್ಥರಾದ ತಮಗೆ ತೀರಾ ಅವಮಾನವಾಗಿದೆ ಎಂದು ನರೇಗಲ್ಲದ ಬಿಜೆಪಿ ಪ್ರಮುಖ ಶಾಂತಕುಮಾರ್ ಮಿರ್ಜಿ ಹೇಳಿದ್ದಾರೆ. ವಿದ್ಯಾರ್ಥಿಗಳು ವಾದ್ಯ ಬಾರಿಸಿದ್ದು ತಪ್ಪೇ? ನಾವೇನು ವಿದೇಶಿಯರೆ, ಉಗ್ರವಾದಿಗಳೇ? ಎಂದು ಅವರು ಕೇಳುತ್ತಾರೆ. 3 ತಿಂಗಳುಗಳ ಹಿಂದೆಯಷ್ಟೇ ಗ್ರಾಮದಲ್ಲಿ ನಡೆದ ದೊಂಬಿಯಿಂದ ಯಾರೂ ಪಾಠ ಕಲಿತಿರಲಿಲ್ಲ. ಮಸೀದಿಯ ಎದುರು ವಾದ್ಯ ಬಾರಿಸುತ್ತಾ ಮೆರವಣಿಗೆ ಮಾಡುವಂತೆ ಯಾರು ಪ್ರಚೋದಿಸಿದರು ಎಂಬುದು ಬಯಲಾಗಬೇಕಾಗಿದೆ.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ "ಹೋರಿ ಬೆದರಿಸುವ ಸ್ಪರ್ಧೆ' ಒಂದು ಜನಪ್ರಿಯ ಜನಪದ ಪಂದ್ಯಾಟ. ಎರಡೂ ಕಡೆ ಅಡೆತಡೆಗಳನ್ನು ನಿರ್ಮಿಸಿರುವ ಇಕ್ಕಟ್ಟಿನ ದಾರಿಯಲ್ಲಿ ಎತ್ತುಗಳನ್ನು ಬೆದರಿಸಿ ಓಡಿಸಲಾಗುತ್ತದೆ. ಎತ್ತುಗಳ ಮೈ ಮೇಲೆ ಕಟ್ಟಿರುವ ಕೊಬ್ಬರಿಯನ್ನು ಕಿತ್ತುಕೊಳ್ಳಲು ಗಟ್ಟಿ ಎದೆಯ ಯುವಕರು ದಾರಿಯುದ್ದಕ್ಕೂ ನಿಂತಿರುತ್ತಾರೆ. ಬೆದರಿದ ಎತ್ತು ನಾಗಾಲೋಟದಿಂದ ಧಾವಿಸಿ ಬರುತ್ತಿರುವಾಗ ಅದನ್ನು ಹಿಡಿದು ಅದರ ಮೈ ಮೇಲಿನ ಕೊಬ್ಬರಿಯನ್ನು ಕಿತ್ತುಕೊಳ್ಳಲು ಪ್ರಯತ್ನಿಸುವುದು ತುಂಬಾ ಅಪಾಯಕಾರಿ ಸಾಹಸವಾಗಿದೆ. ಎತ್ತಿನ ಮೊನಚಾದ ಕೋಡುಗಳಿಂದ ತಿವಿಯಲ್ಪಟ್ಟು ಮರಣಾಂತಿಕವಾಗಿ ಗಾಯಗೊಂಡು ಸಾಯುವವರಿದ್ದಾರೆ. ಕೆಲವೊಮ್ಮೆ ಸ್ಪರ್ಧೆಯಲ್ಲಿ ಭಾಗವಹಿಸಿದ ಎತ್ತುಗಳು ಸಹ ಬಿದ್ದು ತೀವ್ರವಾಗಿ ಗಾಯಗೊಂಡು ಸಾಯುವುದುಂಟು. ದೇವರೆಂದೇ ಪೂಜಿಸಲ್ಪಡುವ ಮೂಕ ಪ್ರಾಣಿಯನ್ನು ಪ್ರಾಣಸಂಕಟಕ್ಕೆ ದಬ್ಬಿ ಮೋಜು ನೋಡುವುದು ಒಂದು ವಿಪರ್ಯಾಸವೇ ಎನ್ನಬಹುದು.

ಸ್ಪರ್ಧೆಯಲ್ಲಿ ಭಾಗವಹಿಸಲೆಂದೇ ಎತ್ತುಗಳನ್ನು ವಿಶೇಷವಾಗಿ ಮೇಯಿಸಿ, ಓಡಾಡಿಸಿ ತಯಾರು ಮಾಡಲಾಗುತ್ತದೆ. ಸ್ಪರ್ಧೆಯಲ್ಲಿ ಯಾರ ಕೈಗೂ ಸಿಗದೇ ಅತಿ ಹೆಚ್ಚು ವೇಗದಿಂದ ಓಡಿದ ಎತ್ತಿಗೆ ಬಹುಮಾನ ನೀಡಲಾಗುತ್ತದೆ. ಬಹುಮಾನ ಪಡೆದ ಎತ್ತಿನ ಮಾಲೀಕನೂ ಅದರೊಂದಿಗೆ ಪ್ರಚಾರ ಪಡೆಯುತ್ತಾನೆ. ಬಹುಮಾನ ಪಡೆದ ಎತ್ತುಗಳನ್ನು ಬಾರಿ ಬೆಲೆಗೆ ಮಾರುವುದೂ ಉಂಟು. ತಮ್ಮ ಒಕ್ಕಲುತನದ ಕೆಲಸಗಳಿಗಾಗಿ ಹಿಂದುಗಳು ಹಾಗೂ ಮುಸಲ್ಮಾನರು ಪ್ರೀತಿಯಿಂದ ಸಾಕುವ ಒಂದು ಎತ್ತು ಗಲಭೆಗೆ ಕಾರಣವಾಯಿತು ಎಂದರೆ ನೀವು ನಂಬುವಿರಾ?

ನರೇಗಲ್ಲ ಗ್ರಾಮದ ಬಸವರಾಜ ಕುರಬರ ಎಂಬುವರು ತನ್ನ ಅತ್ಯುತ್ತಮವಾದ ಕೊಬ್ಬರಿ ಹೋರಿಯನ್ನು ಪಕ್ಕದ ವರ್ದಿ ಗ್ರಾಮದವರಿಗೆ ಮಾರಾಟ ಮಾಡಿದ್ದರು. ಹೋರಿಯನ್ನು ಕೊಂಡೊಯ್ಯುವಾಗ ಮೆರವಣಿಗೆ ಏರ್ಪಾಡಾಯ್ತು. ವಾದ್ಯಗಳನ್ನು ಬಾರಿಸುತ್ತಾ ಪಟಾಕಿ ಸಿಡಿಸುತ್ತಾ ಹೊರಟ ಮೆರವಣಿಗೆ ಮಸೀದಿ ಬಳಿ ಬಂದಾಗ ಅದನ್ನು ತಡೆಯಲು ಇನ್ನೊಂದು ಗುಂಪು ಪ್ರಯತ್ನಿಸಿತು. ಹಿಂದಿನ ದಿನವಷ್ಟೆ ಪೊಲೀಸ್ ಠಾಣೆಯಲ್ಲಿ ಏರ್ಪಟ್ಟ ಒಪ್ಪಂದವನ್ನು ಉಲ್ಲಂಘಿಸುವ ಉದ್ಧಟತನ ಅವರನ್ನು ಕೆರಳಿಸಿತ್ತು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಎಲ್ಲಿಂದಲೋ ಕಲ್ಲುಗಳು ಬೀಳಲಾರಂಭಿಸಿದವು. ಹಲವು ವ್ಯಕ್ತಿಗಳು ಪರಿಸ್ಥಿತಿಯ ದುರ್ಲಾಭ ಪಡೆಯಲು ಮುಂದಾದರು. ಮನೆಗಳ ಮೇಲೆ ಕಲ್ಲುಗಳು ಬಿದ್ದವು. ಘಟನೆಯಲ್ಲಿ ಮಹಿಳೆಯೊಬ್ಬಳು ಗಾಯಗೊಂಡಳು. ಗುಂಪೊಂದು ಅಂಗಡಿ ಲೂಟಿ ನಡೆಸಿತು. ದೋಚಿದವರಲ್ಲಿ ಹಿಂದೂ-ಮುಸಲ್ಮಾನ ಎಂಬ ಬೇಧವಿರಲಿಲ್ಲ. ನಾಗಪ್ಪ ನಂದಿಕೊಪ್ಪ ಅವರ ಅಂಗಡಿ ಭಸ್ಮವಾದಾಗ ಸುಮಾರು 6 ಲಕ್ಷ ರೂಪಾಯಿ ಹಾನಿಯಾಯಿತು. ಮೋಟಾರ್ ಸೈಕಲ್ ಒಂದು ಬೆಂಕಿಗೆ ಆಹುತಿಯಾಯಿತು. ಹೇಮಚಂದ್ರ ಮಿರ್ಜಿ ಅವರ ಬಟ್ಟೆ ಅಂಗಡಿ, ಔಷಧಿ ಅಂಗಡಿ, ಚಹದ ಅಂಗಡಿ ಲೂಟಿಯಾದವು. ಹಿರಿಯ ಅಧಿಕಾರಿಗಳಾಗಲಿ, ಪೋಲೀಸರಾಗಲಿ ತಕ್ಷಣ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನಿಸಲಿಲ್ಲ. ಹೆಚ್ಚಿನ ಪೋಲೀಸ್ ಪಡೆ ಅಲ್ಲಿಗೆ ತಲುಪುವ ವೇಳೆಗೆ ಸಾಕಷ್ಟು ಹಾನಿ ಆಗಿ ಹೋಗಿತ್ತು. ಗ್ರಾಮಸ್ಥರ ಪ್ರಕಾರ ಸುಮಾರು 30 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ.

ಘಟನೆಯ ನಂತರ ಸ್ಥಳಕ್ಕೆ ಆಗಮಿಸಿದ ಪೋಲೀಸರು ಮಾಮೂಲಿನಂತೆ ಸುಮಾರು 40 ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಬಂಧನಕ್ಕೊಳಗಾದವರಲ್ಲಿ ಹೆಚ್ಚಿನವರು ಅಮಾಯಕರೆಂದು ಗ್ರಾಮಸ್ಥರ ತಕರಾರು. ಪೋಲೀಸ್ ದೌರ್ಜನ್ಯಕ್ಕೆ ಹೆದರಿ ಗ್ರಾಮದ ಎರಡೂ ಕೋಮಿನ ಪುರುಷರು, ಮುಖ್ಯವಾಗಿ ಯುವಕರು ಊರು ಬಿಟ್ಟರು. ಮನೆಗಳಲ್ಲಿ ಉಳಿದಿದ್ದ ವೃದ್ಧರು ಮಹಿಳೆಯರು ಮತ್ತು ಮಕ್ಕಳು ಕಣ್ಣೀರು ಹಾಕುತ್ತಾ ದಿನಕಳೆಯುತ್ತಿದ್ದರು.

ಬೆಂಕಿಗೆ ಎಣ್ಣೆ ಹೊಯ್ಯುವವರು

ಮಾಜಿ ಸಚಿವರಾದ ಸಿ.ಎಂ.ಉದಾಸಿಯವರು ವಿಧಾನಸಭೆಯಲ್ಲಿ ವಿರೋಧ ಪಕ್ಷದನಾಯಕ ಬಿಜೆಪಿಯ ಜಗದೀಶ ಶೆಟ್ಟರ್ ಅವರನ್ನು ಕರೆತಂದರು. ಶೆಟ್ಟರು ಯಾರಿಗೆ ಏನು ಕಿವಿಮಾತು ಹೇಳಿದರು ಎಂಬುದು ತಿಳಿದುಬರಲಿಲ್ಲ. ಕ್ರಮೇಣ ಊರು ಬಿಟ್ಟು ಹೋದವರು ವಾಪಸಾಗತೊಡಗಿದರು. ಜೈಲಿನಲ್ಲಿದ್ದವರು ಜಾಮೀನು ನೀಡಿ ಹೊರ ಬಂದರು. ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿಗಳು ಮುಂಜಾಗ್ರತ ಜಾಮೀನು ಪಡೆದುಕೊಂಡು ಪ್ರತ್ಯಕ್ಷರಾದರು. ನರೇಗಲ್ಲ ಗ್ರಾಮ ಸಹಜಸ್ಥಿತಿಗೆ ಬರುತ್ತಿದ್ದಂತೆ ಭಾಸವಾಯ್ತು.

ಅಂದು ಜನವರಿ 26, ಪ್ರಜಾರಾಜ್ಯೋತ್ಸವ ದಿನ. ಗಲಭೆ ನಡೆದು ಸರಿಯಾಗಿ ಮೂರು ತಿಂಗಳುಗಳ ನಂತರ ಮತ್ತೆ ನರೇಗಲ್ಲ ಗ್ರಾಮದಲ್ಲಿ ಒಂದು ವಾರದ ವರೆಗೆ 144 ನೇ ಕಲಮಿನ ಮೇರೆಗೆ ನಿಷೇದಾಜ್ಞೆ ಜಾರಿ! ಶಾಲಾ ಮಕ್ಕಳ ಮೆರವಣಿಗೆಯು ಬ್ಯಾಂಡ್ ಬಾರಿಸುತ್ತಾ ಅದೇ ಮಸೀದಿಯ ಮುಂದೆ ಬಂದಾಗ ಆಕ್ಷೇಪ ವ್ಯಕ್ತವಾಯಿತು. ಆಗ ಉಂಟಾದ ಗೊಂದಲದಲ್ಲಿ ಕೆಲವರು ಮೆರವಣಿಗೆಕಾರರ ಮೇಲೆ ಕಲ್ಲು ತೂರಿದಾಗ 8 ವರ್ಷದ ಬಾಲಕಿಯೊಬ್ಬಳು ಗಾಯಗೊಂಡಳು, ಅದೇ ಬಡಾವಣೆಯ ಒಂದು ಮನೆಯ ಮೇಲೂ ಕಲ್ಲುಗಳು ಬಿದ್ದದ್ದರಿಂದ ಅದೂ ಹಾನಿಗೊಳಗಾಯಿತು. ಸ್ಥಳದಲ್ಲಿ ಹಾಜರಿದ್ದ ಪೋಲೀಸ್ ಸಿಬ್ಬಂದಿಯವರು ಪರಿಸ್ಥಿತಿಯನ್ನು ನಿಯಂತ್ರಿಸಲು ಲಾಠಿ ಪ್ರಯೋಗ ಮಾಡಿದರು. ಶಾಲಾ ಬಾಲಕ ಬಾಲಕಿಯರು ಪ್ರಭಾತ ಫೇರಿಯನ್ನು ಕೈಬಿಟ್ಟು ಓಡಿಹೋದರು.

ಬಿ.ಜೆ.ಪಿ. ತಾಲೂಕ ಘಟಕವು ಘಟನೆಯನ್ನು ಉಗ್ರವಾಗಿ ಖಂಡಿಸಿತು. ಶಾಲಾ ವಿದ್ಯಾರ್ಥಿಗಳ ಪ್ರಭಾತ ಫೇರಿಯ ಮೇಲೆ ನಡೆದ ಕಲ್ಲು ತೂರಾಟಗಳಿಂದ ಗ್ರಾಮಸ್ಥರಾದ ತಮಗೆ ತೀರಾ ಅವಮಾನವಾಗಿದೆ ಎಂದು ನರೇಗಲ್ಲದ ಬಿಜೆಪಿ ಪ್ರಮುಖ ಶಾಂತಕುಮಾರ್ ಮಿರ್ಜಿ ಹೇಳಿದ್ದಾರೆ. ವಿದ್ಯಾರ್ಥಿಗಳು ವಾದ್ಯ ಬಾರಿಸಿದ್ದು ತಪ್ಪೇ? ನಾವೇನು ವಿದೇಶಿಯರೆ, ಉಗ್ರವಾದಿಗಳೇ? ಎಂದು ಅವರು ಕೇಳುತ್ತಾರೆ. 3 ತಿಂಗಳುಗಳ ಹಿಂದೆಯಷ್ಟೇ ಗ್ರಾಮದಲ್ಲಿ ನಡೆದ ದೊಂಬಿಯಿಂದ ಯಾರೂ ಪಾಠ ಕಲಿತಿರಲಿಲ್ಲ. ಮಸೀದಿಯ ಎದುರು ವಾದ್ಯ ಬಾರಿಸುತ್ತಾ ಮೆರವಣಿಗೆ ಮಾಡುವಂತೆ ಯಾರು ಪ್ರಚೋದಿಸಿದರು ಎಂಬುದು ಬಯಲಾಗಬೇಕಾಗಿದೆ.

ನರೇಗಲ್ಲ ಗ್ರಾಮದಲ್ಲಿ ಇಂದು ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಎರಡೂ ಕೋಮಿನ ಬಡವರಿಗೆ ಗ್ರಾಮದಲ್ಲಿ ಶಾಶ್ವತ ಶಾಂತಿ ನೆಲೆಸುವುದನ್ನು ಎದುರುನೋಡುತ್ತಿದ್ದಾರೆ. ವಿಭಿನ್ನ ರಾಜಕೀಯ ಪಕ್ಷಗಳನ್ನು ಬೆಂಬಲಿಸುವ ಎರಡೂ ಕೋಮಿನ ಮುಖಂಡರು ಮಾತ್ರ ಬೆಂಕಿಯನ್ನು ನಂದಿಸಲು ಆಸಕ್ತರಾಗಿಲ್ಲ. ಇತ್ತೀಚಿಗೆ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲೂ ಕಾಂಗ್ರೆಸ್ ಹಾಗೂ ಸಂಯುಕ್ತ ಜನತಾದಳ ಪಕ್ಷಗಳು ಇದರ ರಾಜಕೀಯ ಲಾಭ ಪಡೆಯಲು ಹಿಂದೇಟು ಹಾಕಲಿಲ್ಲ. ಉರಿಯುತ್ತಿರುವ ಬೆಂಕಿಗೆ ಎಣ್ಣೆ ಹೊಯ್ಯುವ ಪ್ರಯತ್ನ ನಡೆಯುತ್ತಿರುವುದು ಹೆಚ್ಚು ಆತಂಕದ ವಿಷಯವಾಗಿದೆ. ಸಿರ್ಸಿಯಿಂದ ಆರ್.ಎಸ್.ಎಸ್. ತಂಡವೊಂದು ಇಲ್ಲಿಗೆ ಆಗಮಿಸಿ ಉದ್ರೇಕಕಾರಿ ಭಾಷಣ ಮಾಡಿರುವುದು ವರದಿಯಾಗಿದೆ. ವಾರಕ್ಕೊಮ್ಮೆ ಗುಪ್ತ ಸಭೆಗಳು ನಡೆಯಲಾರಂಭಿಸಿವೆ. ಗಲಭೆಯಲ್ಲಿ ಹಿಂದುಗಳಿಗೇ ಹೆಚ್ಚು ಹಾನಿಯಾಗಿದೆ. ಇದರಸೇಡು ತೀರಿಸಿ ಕೊಳ್ಳಲೇಬೇಕು, ಹೆದರಬೇಡಿ, ನಾವಿದ್ದೇವೆ" ಎಂದು ಮುಗ್ಧರನ್ನು ಕೋಮು ದ್ವೇಷದಲ್ಲಿ ಗಟ್ಟಿಗೊಳಿಸುವ ಕೆಲಸ ವ್ಯವಸ್ಥಿತವಾಗಿ ನಡೆಯತೊಡಗಿದೆ. ಈ ಮಧ್ಯದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ತಾಲೂಕು ಘಟಕವು ನರೇಗಲ್ಲ ಗ್ರಾಮದಲ್ಲಿ ಮತ್ತೆ ಅಹಿತಕರ ಘಟನೆಗಳು ಮರುಕಳಿಸದಂತೆ ಕಟ್ಟೆಚ್ಚರದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದೆ.

ಇ.ಎಂ.ಎಸ್.ಭವನ ನಿಧಿ

ಹಿಂದಿನ ಮೊತ್ತ	**18,60,986.50**
ಸಿಪಿಐ(ಎಂ) ಶಿರಸಿ ಶಾಖೆ	155
ಎಲ್ಐಸಿ ಸಂಗಾತಿಗಳು, ರಾಯಚೂರು	1550
ಬಿ.ಆರ್.ಯಶೋಧ, ಕಾಂ. ಸೂರಿಯವರ ಪತ್ನಿ	10,000
ಹೆಚ್.ಸುಂದರಶೆಟ್ಟಿ, ಎಲ್ಐಸಿ, ಉಡುಪಿ	250
ಸಿ.ಬಾಲಕೃಷ್ಣನ್, ಜಿಐಸಿ ನೌಕರರ ಮುಖಂಡರು	2500
ಎಸ್.ಕೆ.ಉಪಾಧ್ಯಾಯ ಮೂಲಕ	1001
ಬಿ.ಆರ್.ದೇವರಾಜ್ ಮತ್ತು ರೋಸಿ ದೇವರಾಜ್ ಅವರ 50 ವರ್ಷದ ವೈವಾಹಿಕ ಜೀವನದ ನೆನಪಿನಲ್ಲಿ	500
ಸಿಪಿಐ(ಎಂ) ಹೂವಿನಹಡಗಲಿ, ಬಳ್ಳಾರಿ	3000
ಕೆ.ಎಲ್.ರಾವ್, ಶಿವಮೊಗ್ಗ ಮೂಲಕ ಸಂಗ್ರಹ	
ಶ್ರೀಮತಿ ರೇಣುಕಮ್ಮ, ಭದ್ರಾವತಿ	100
ಶ್ರೀಮತಿ ಹೇಮಾವತಿ ಹೊನ್ನಾಳಿ	100
ಶ್ರೀಮತಿ ಹುಸ್ನಾ ಭಾನು, ಬಸವಪಟ್ನ	100
ಶ್ರೀಮತಿ ಪ್ರಸನ್ನ ಕುಮಾರಿ, ಶಿವಮೊಗ್ಗ	100
ಹಿತೈಷಿ, ಶಿವಮೊಗ್ಗ	100
ಕಾಂ. ಸುನೀಲ್ ಸಾಗರ್, ಎಲ್ಐಸಿ, ಶಿವಮೊಗ್ಗ	50
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಮೂಲಕ	
ಯಾಪಚ್ಚನ್	100
ಧನಕುಮಾರ್	100
ಸೆಂಥಿಲ್	50
ಇಳಂಗು	100
ಜಗನ್ನಾಥ್	50
ಮುರುಗನ್	100
ಹುಸೇನ್	100
ಅಬ್ದುಲ್ ರಹಮಾನ್	300
ಹೆನ್ರಿ ಎಂ. ಡಾಂಟೆ, ಯು.ಎ.ಎಸ್.	10875
ಎಲ್ ಅಂಡ್ ಟಿ ಎಂಪ್ಲಾಯಿಸ್ ಅಸೋಸಿಯೇಷನ್	40,000
ಸಿಪಿಐ(ಎಂ) ಬೀದರ್ ತಾಲೂಕು ಸಮಿತಿ	500
ಎಸ್.ಎಫ್.ಐ. ಭಟ್ಕಳ ತಾಲೂಕು ಸಮ್ಮೇಳನದಲ್ಲಿ ಸಂಗ್ರಹ	150
ಒಟ್ಟು ಮೊತ್ತ	**19,32,117.50**

ಶಿಕ್ಷಣ ಮತ್ತು ಸಂಸ್ಕೃತಿಯನ್ನು ಕೇಸರೀಕರಣಗೊಳಿಸುವುದನ್ನು ಭಾರತದ ನಾಗರಿಕ ಸಮಾಜ ವಿಫಲಗೊಳಿಸುವುದು

- ಶಬಾನಆಜ್ಮಿ

ಇತ್ತೀಚೆಗೆ ವಾರಾಣಸಿಯಲ್ಲಿ ದೀಪಾ ಮೆಹತಾ ಅವರು 'ವಾಟರ್' ಚಿತ್ರೀಕರಣ ನಡೆಸುತ್ತಿದ್ದುದನ್ನು ಮತಾಂಧ ಸಂಘ ಪರಿವಾರದವರು ತಡೆದು, ತಂಡದ ಕೋಟ್ಯಾಂತರ ರೂ. ಬೆಲೆ ಬಾಳುವ ರಂಗ ಸಜ್ಜಿಕೆಗಳನ್ನು ಹಾಳುಗೆಡವಿರುವುದನ್ನು ದೇಶಾದ್ಯಂತ ಪ್ರಜ್ಞಾವಂತರೂ, ಪ್ರಗತಿಪರ ಸಂಘಟನೆಗಳೂ ಪ್ರತಿಭಟಿಸಿವೆ. ಧಾರವಾಡದಲ್ಲಿಯೂ ಸಮುದಾಯ, ಇಪ್ಟಾ, ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಎಸ್.ಎಫ್.ಐ., ಡಿ.ವೈ.ಎಫ್.ಐ, ಎ.ಐ.ಐ.ಇ.ಎ(ವಿಮಾ), ಕಾಂಗ್ರೆಸ್ ಅಲ್ಪಸಂಖ್ಯಾತರ ವೇದಿಕೆ ಮುಂತಾದ ಅನೇಕ ಸಾಮೂಹಿಕ ಸಂಘಟನೆಗಳ 200ಕ್ಕೂ ಹೆಚ್ಚು ಪ್ರತಿನಿಧಿಗಳು ಸಹಿಹಾಕಿರುವ ಮತ್ತು 'ವಾಟರ್' ಚಿತ್ರೀಕರಣದ ಸಂದರ್ಭ ನಡೆದ ದುರ್ಘಟನೆಯನ್ನು ಖಂಡಿಸಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಒತ್ತಾಯಿಸಿ ಭಾರತದ ರಾಷ್ಟ್ರಾಧ್ಯಕ್ಷರಿಗೆ ಜಿಲ್ಲಾಧಿಕಾರಿಗಳ ಮೂಲಕ ಒಂದು ಮನವಿಯನ್ನು ಸಲ್ಲಿಸಲಾಗಿತ್ತು. ಅದರ ಪ್ರತಿಗಳನ್ನು ದೆಹಲಿಯ 'ಸಹಮತ್' ನ ಶಬನಂ ಹಷ್ಮಿ, ದೀಪಾ ಮೆಹ್ತಾ ಹಾಗೂ 'ವಾಟರ್' ಸಿನೇಮಾದ ನಟಿ, ರಾಜ್ಯಸಭಾ ಸದಸ್ಯೆ ಶಬನಾ ಆಜ್ಮಿ ಅವರಿಗೂ ಕಳುಹಿಸಿಕೊಡಲಾಗಿತ್ತು. ಮನವಿಯ ಪ್ರತಿಯನ್ನು ನೇರವಾಗಿ ರಾಷ್ಟ್ರಾಧ್ಯಕ್ಷರಿಗೂ ಕಳುಹಿಸಿಕೊಡಲಾಗಿತ್ತು. ಉತ್ತರವಾಗಿ ಪ್ರತಿನಿಧಿಗಳ ನೇತೃತ್ವ ವಹಿಸಿದ್ದ ಸಮುದಾಯದ ರಾಜ್ಯ ಉಪಾಧ್ಯಕ್ಷರಾದ ಸಿ.ಆರ್.ಭಟ್ ಅವರಿಗೆ ಶಬನಾ ಆಜ್ಮಿ ದಿ 18.2.2000 ರಂದು ಬರೆದ ಪತ್ರ ಹೃದಯ ಸ್ಪರ್ಶಿ ಆಗಿದೆ. ಜಾತ್ಯಾತೀತತೆಗಾಗಿ ಹೋರಾಡಲು ಇನ್ನಷ್ಟು ಸ್ಫೂರ್ತಿ ಬರಿಸುವಂತಾಗಿದೆ. ಇಂಗ್ಲೀಷ್ ಪತ್ರದ ಕನ್ನಡ ಪೂರ್ಣಪಾಠ ಹೀಗಿದೆ.

"ವಾಟರ್ ಚಿತ್ರೀಕರಣವನ್ನು ಬೆಂಬಲಿಸಿ ನೀವು ಬರೆದ ಶಕ್ತಿಶಾಲಿ ಪತ್ರಕ್ಕೆ ಮತ್ತು ವಿವಿಧ ಸಾಂಸ್ಕೃತಿಕ ಸಂಘಟನೆಗಳು ಈ ಕುರಿತು ರಾಷ್ಟ್ರಾಧ್ಯಕ್ಷರಿಗೆ ಮನವಿ ಸಲ್ಲಿಸಿದುದಕ್ಕೆ ತುಂಬು ಕೃತಜ್ಞತೆಗಳು

ನಮ್ಮ ಶಿಕ್ಷಣ ಮತ್ತು ಸಂಸ್ಕೃತಿ ಕ್ಷೇತ್ರಗಳನ್ನು ಕೇಸರೀಕರಣಗೊಳಿಸುವ ಸಂಘ ಪರಿವಾರದ ಪ್ರಯತ್ನಗಳನ್ನು ಭಾರತದ ನಾಗರಿಕ ಸಮಾಜ ವಿಫಲಗೊಳಿಸುವುದೆಂದು ನನ್ನ ದೃಢವಾದ ನಂಬಿಕೆ.

ಬಹುಸಂಖ್ಯಾತ ಜನರು ಈ ಕುರಿತು ಇನ್ನೂ ಮೌನವಾಗಿರುವುದಾದರೂ, ಅವರು ಇಂತಹ ದುರ್ಘಟನೆಗಳನ್ನು ಭಯ ಹಾಗೂ ಜಿಗುಪ್ಸೆಯಿಂದ ಕಾಣುವರು.

ನಿಮ್ಮ ಬೆಂಬಲಕ್ಕಾಗಿ
ಇನ್ನೊಮ್ಮೆ ಕೃತಜ್ಞತೆಗಳು
ಶಬನಾ ಅಜ್ಮಿ


SHABANA AZMI
MEMBER OF PARLIAMENT
RAJYA SABHA

Dated: 18th February, 2000

To,

Mr. C.R. Bhat,
4, Shakti Apartments,
Sridevi Nagar,
Vidyagiri, Dharwad- 580 004

Thank you for your strong letter of support for 'Water' and the memorandum issued by various cultural organisations to the President of India.

It is my belief that the efforts of the Sangh Parivar to saffronise our educational and culture spheres will be defeated because civil society in India, though a majority remains silent, views such distortions with horror and disgust.

Thanking you once again for your support.

Yours Sincerely,

Shabana Azmi

ಸಮಾಜಕ್ಕೆ 'ಸ್ಲೋ ಪಾಯ್ಸನ್' ಫ್ಯಾಸಿಸ್ಟ್ ಕುತಂತ್ರ

ದೇಶದ ಎಲ್ಲ ನಗರ ಹಳ್ಳಿಗಳಿಗೂ ಇಂದು ಕೋಮುವಾದದ 'ವಿಷಜ್ವಾಲೆ' ಹರಡಿ ಜನರು 'ನೆಮ್ಮದಿ' ಎಂಬ ಪದದ ಅರ್ಥ ಹುಡುಕುತ್ತಿರುವುದು ಸರಿಯಷ್ಟೆ. ಸಮಾಜದ್ರೋಹಿ ಮೂಲಭೂತ ವಾದಿಗಳು ನಡೆಸುವ ಕುತಂತ್ರದಿಂದ ವಿದ್ಯಾರ್ಥಿಗಳು, ಜನಸಾಮಾನ್ಯರು ಸರಿಯಾದ ನಿಲುವು ತೆಗೆದು ಕೊಳ್ಳಲಾಗದೆ ಗೊಂದಲದಲ್ಲಿ ಮುಳುಗಿರುತ್ತಾರೆ. ಹಾಸನದಲ್ಲಿ ನಡೆದ ಇಂತಹ ಗೊಂದಲ ಸೃಷ್ಟಿಕರ್ತರ ಎರಡು ಉದಾಹರಣೆಗಳನ್ನು ಪರಿಶೀಲಿಸೋಣ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಗೆ ಎರಡು ದಿನ ಮುಂಚೆ ರಾತ್ರೋರಾತ್ರಿ ಪ್ರತೀ ಮನೆ ಮನೆಗೆ, ಮನೆ ಬಾಗಿಲಿಗೆ ಒಂದು ಸ್ಪೆಷಲ್ ಕರಪತ್ರ ಹಂಚಲಾಯ್ತು. ಅದರ ಶೀರ್ಷಿಕೆ 'ಸೋನಿಯಾ ಗಾಂಧಿ ಯಾರು?' ಮತದಾರರೆ ಎಚ್ಚರಗೊಳ್ಳಿ" ಇದರಲ್ಲಿ ಆರು ಪ್ರಶ್ನೆ ಮತ್ತು ಉತ್ತರಗಳಿದ್ದವು. ಇದರ ಪ್ರಕಾರ ಸೋನಿಯಾರ ತಂದೆ ಪಾಕಿಸ್ತಾನಿ ಐ.ಎಸ್.ಐ. ಎಜಂಟ್ ಅಮಿದ್ ಗುಲ್ ಮತ್ತು ಅವರೇ ತಯಾರಿಸಿದ ಅಣುಬಾಂಬೆ 'ಸೋನಿಯಾ' ಈ ಕರಪತ್ರದ ಇನ್ನೊಂದು ಬಾಂಬ್ ಎಂದರೆ ಅಮಿದ್ ಗುಲ್‌ನ ಹಿರಿಯ ಮಗ ಈಗಿನ ತಾಲಿಬಾನ್ ಅಧ್ಯಕ್ಷ 'ಮುಲ್ಲಾ ಮಹಮ್ಮದ್ ಓಮರ್'.

ಈ ಕರಪತ್ರದ ಸೃಷ್ಟಿಕರ್ತರು ಯಾರೋ ಏನು ಕತೆಯೋ, ಅವರನ್ನ ಹಿಡಿದು ಸಂದರ್ಶನ ಮಾಡೋಣವೆಂದರೆ ಆ (ಪುಣ್ಯಾತ್ಮರು) ವ್ಯಕ್ತಿಗಳು ಯಾರೂ ಮುಂದೆ ಬಂದಿಲ್ಲ.. ಅದರ ಅಡಿಯಲ್ಲಿ ಪಿ.ಆರ್.ಕೃಷ್ಣ ಸಿಂಗ್ ಯಾದವ್, ಮಾಜಿ ಸಿಬಿಐ ಆಫೀಸರ್, ಪ್ರಕಟಣೆ-ಕರ್ನಾಟಕ ಮತದಾರರ ವೇದಿಕೆ ಎಂದಿದೆ. ಆ ವ್ಯಕ್ತಿ ಸಾರ್ವಜನಿಕವಾಗಿ ಹೇಳಿಕೆ ಕೊಡಲಿಕ್ಕಾಗದೆ(ಕುಡಿಯೋ ನೀರಿನಲ್ಲಿ ಕಡ್ಡಿ ಅಲ್ಲಾಡಿಸಿದ ಹಾಗೆ) ಸಮಾಜದಲ್ಲಿ ಏಕೀ ಹಸಿಸುಳ್ಳುಗಳನ್ನು ಸೃಷ್ಟಿಸಿ ಗೊಂದಲಕ್ಕೆಡೆ ಮಾಡುತ್ತಾರೋ ಗೊತ್ತಿಲ್ಲ. ಇದು ಯಾವ ಗೊಂದಲೇಶ್ವರರ ಕುತಂತ್ರ ಎಂದು ಬೇರೆ ಹೇಳಬೇಕಾಗಿಲ್ಲ. ಬಹುಶಃ ಭಾರತದ ಜನ ದಿನ ಪತ್ರಿಕೆಗಳನ್ನೇ ಓದದಿದ್ದರೆ ಮೂರ್ಖರಾಗುತ್ತಿದ್ದರೋ ಏನೋ. ಆದರೆ ಅದಾಗದೆ ಹಾಸನ ಲೋಕಸಭಾ ಕ್ಷೇತ್ರಕ್ಕೆ ಮತದಾರರು ಆರಿಸಿದ್ದು ಫ್ಯಾಸಿಸ್ಟರನ್ನಲ್ಲ, ಕಾಂಗ್ರೆಸ್ಸನ್ನ!

ಆಗ ಮತದಾರರಿಗೆ, ಈಗ ವಿದ್ಯಾರ್ಥಿಗಳಿಗೂ ಗೊಂದಲದ ವಿಷವುಣಿಸುವಲ್ಲಿ ಈ ದ್ರೋಹಿಗಳು ಹಿಂದೆ ಬಿದ್ದಿಲ್ಲ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್(ಎಬಿವಿಪಿ) 'ನೇತಾಜಿ ಸುಭಾಶ್ ಚಂದ್ರ ಬೋಸ್, ವೀರ ಸನ್ಯಾಸಿ ವಿವೇಕಾನಂದ, ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್‌ರವರ ಜೀವನ ಕುರಿತ ಪ್ರಶ್ನಾವಳಿ' ಎಂಬ ನೂರು ಅಂಕಗಳ ಪ್ರಶ್ನೆ ಪತ್ರಿಕೆಯನ್ನು ಇದೇ 2000 ನೇ ಫೆಬ್ರವರಿಯ ಪ್ರಾರಂಭದಲ್ಲಿ ಸ್ಪರ್ಧೆಗಾಗಿ ರೂಪಾಯಿಗೆ ಬೆಲೆಗೆ ಮಾರಾಟಮಾಡಲಾಯಿತು.

ಆ ಮಹಾನ್ ವ್ಯಕ್ತಿಗಳ ಯಾವ ಆದರ್ಶವೂ ಈ ಪತ್ರಿಕೆಯಲ್ಲಿ ಹುಡುಕಿದರೂ ಸಿಗುವುದಿಲ್ಲ. ವಿದ್ಯಾರ್ಥಿಗಳನ್ನು ಗೊಂದಲಕ್ಕೆಡೆಮಾಡುವ ಹಲವು ಪ್ರಶ್ನೆಗಳಿದ್ದವು.

33ನೇ ಪ್ರಶ್ನೆ "ಸುಭಾಷ್ ಕಾಂಗ್ರೆಸ್‌ನ ಅಧ್ಯಕ್ಷ ಪದವಿಗೆ ರಾಜಿನಾಮೆ ನೀಡಲು ಕಾರಣ ಗಾಂಧೀಜಿಯವರು ಒಪ್ಪದ ...." ಇದರರ್ಥ ಗಾಂಧೀಜಿಗೂ ಸುಭಾಶ್‌ರಿಗೂ ಒಮ್ಮತವಿರಲಿಲ್ಲ ಎಂದು ಭಾವಿಸುವುದು. 36ನೇ ಪ್ರಶ್ನೆಯಲ್ಲಿ 'ಸುಭಾಷ್‌ರು ಭೇಟಿ ಮಾಡಿದ ಹಿಟ್ಲರನ ವಿದೇಶಿ ಮಂತ್ರಿ ...." ಹಾಗಾದರೆ ಸ್ಪಷ್ಟವಾಯಿತು ಇದರ ಹಿಂದಿರುವ ಹುನ್ನಾರ ಏನೆಂಬುದು.

"............... ನಲ್ಲಿ ದೇಶದ ಹಿತದೃಷ್ಟಿಯಿಂದ ನಾನು ಗಾಂಧೀಜಿಯವರಿಗಿಂತಲೂ 2000 ಮೈಲು ಮುಂದೆ ಇದ್ದೆ ಎಂದು ಅಂಬೇಡ್ಕರ್ ನುಡಿದಿದ್ದರು" ಇದು 83ನೇ ಪ್ರಶ್ನೆ. ಇದರಿಂದ ನಮ್ಮ ವಿದ್ಯಾರ್ಥಿಗಳು ಗಾಂಧೀಜಿಗೂ ಅಂಬೇಡ್ಕರ್‌ರವರಿಗೂ ಭಿನ್ನಮತವಿತ್ತು ಎಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳುವುದು.

ಇದೇ ಎಬಿವಿಪಿ 1998 ರ ಒಂದು ಸಮ್ಮೇಳನದಲ್ಲಿ ಸಂವಿಧಾನ ಬದಲಾವಣೆಯ ಬಗ್ಗೆ (ಹೆಚ್ಚಿನ ವಿವರ ಬೇಡ) ಕರಡಿನಲ್ಲಿ ಪ್ರಸ್ತಾಪಿಸಲಾಗಿತ್ತು. ವಿದ್ಯಾರ್ಥಿ ಹಂತದಲ್ಲೇ ಹಕ್ಕಿಗಾಗಿ ಹೋರಾಡುವ ಮನೋಭಾವನೆ ಬೆಳೆಸುವ ಬಗ್ಗೆ ಇದಕ್ಕೆ ಕಿಂಚಿತ್ತೂ ಆಸಕ್ತಿಯಿಲ್ಲ.

80ನೇ ಪ್ರಶ್ನೆಯಲ್ಲಿ "1954 ರ ಆಗಸ್ಟ್ 26 ರಂದು .... ಯಲ್ಲಿ ಕಮ್ಯುನಿಸಂ ಎನ್ನುವುದು ಕಾಳ್ಗಿಚ್ಚಿನಂತೆ ನಾಲ್ಕೂ ದಿಕ್ಕಿನಿಂದ ಆವರಿಸುತ್ತಾ ಎಲ್ಲವನ್ನೂ ಧ್ವಂಸ ಮಾಡುವುದಷ್ಟೇ ಅದು ಮಾಡುವ ಕಾರ್ಯ" ಎಂದು ಅಂಬೇಡ್ಕರ್ ಹೇಳಿದರು. ಇದು ಇವರು ವಿದ್ಯಾರ್ಥಿಗಳಿಗೆ ಕೇಳಿರುವ ಪ್ರಶ್ನೆ. ಯಾವ ಸಂದರ್ಭದಲ್ಲಿ ಅವರು ಹೀಗೆ ಮಾತನಾಡಿದರು ಎಂಬುದನ್ನು ಗಮನಿಸದಿದ್ದರೆ ವಿದ್ಯಾರ್ಥಿಗಳಲ್ಲಿ ಅನವಶ್ಯಕ ಗೊಂದಲ ಸೃಷ್ಟಿಸುವುದು ಸುಲಭ.

ಗಾಂಧೀಜಿಯವರು ಹೇಳಿದ್ದರು "ಭಾರತದ ಅನೇಕ ದೇವಾಲಯಗಳು ವೇಶ್ಯಾವಾಟಿಕೆಗೆ ಸಮನಾಗಿವೆ" ಈ ಹೇಳಿಕೆಯನ್ನು ಗಾಂಧೀಜಿಯವರು ಯಂಗ್ ಇಂಡಿಯಾದಲ್ಲಿ ಅಕ್ಟೋಬರ್ 6, 1927 ರಂದು ನೀಡಿದ್ದರು. ಹಾಗಿದ್ದರೆ ಗಾಂಧೀಜಿಯವರಿಗೆ ದೇವಾಲಯಗಳ ಬಗ್ಗೆ ಈ ಅಭಿಪ್ರಾಯ ಇತ್ತೇ? ಹಾಗೆಂದುಕೊಂಡರೆ ಅದು ನನ್ನ ತಪ್ಪಲ್ಲ. ಈ ರೀತಿಯ ಅಸ್ಪಷ್ಟ ಪ್ರಶ್ನೆಗಳಿಂದ ಗೊಂದಲಕರ್ತರು ಯಾವ ಬೇಳೆ ಬೇಯಿಸಿಕೊಳ್ಳುತ್ತಾರೆಂದು ಬಹುಶಃ ಜನರಿಗೆ ತಿಳಿದಿದೆ.

ಸಮಾಜದಲ್ಲಿ ವಿಷ ಬೆರೆಸುವ, ಜನಸಾಮಾನ್ಯರನ್ನು, ವಿದ್ಯಾರ್ಥಿಗಳನ್ನು ಅನವಶ್ಯಕ ಗೊಂದಲಕ್ಕೆಡೆ ಮಾಡುವ ಈ ಹಲಾಲ್ ಖೋರ್‌ತನ ಇನ್ನೆಷ್ಟು ದಿನ?

- ಬಿ.ಆರ್.ರಾಜಕುಮಾರ್

ಕೆ.ಜಿ.ಎಫ್. ಕಾರ್ಮಿಕರ ಹೋರಾಟ..........

ಪುಟ 7 ರಿಂದ

ಕಾರ್ಮಿಕರ ಸಂಘಟನೆಯ ಶಕ್ತಿಯನ್ನು ಹೀಗೆ ಮುಂದುವರೆಯಲು ಬಿಟ್ಟರೆ ಚಿನ್ನಲೂಟಿ ಹೊಡೆಯಲು ಸಾಧ್ಯವಾಗದೆಂದು ಅರಿತ ಗಣಿ ಕಾರ್ಖಾನೆ ಮಾಲೀಕರು ಸಂಘಟನೆಯನ್ನು ಸಂಘಟನೆಯನ್ನು ನಿಗ್ರಹಿಸಲು ಕುತಂತ್ರ ಹೂಡತೊಡಗಿದರು. ಕಾರ್ಮಿಕರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಕೆ.ಎಸ್. ವಾಸನ್ ಮತ್ತು ವಿ.ಎಂ. ಗೋವಿಂದನ್‌ರನ್ನು ಹತ್ಯೆ ಮಾಡಲು ಕಂಪನಿ ಮಾಲೀಕರು ಸಂಚು ಹೂಡ ತೊಡಗಿದರು. ಆಡಳಿತವರ್ಗದ ಏಜೆಂಟರಾದ 10 ಜನ ಗೂಂಡಾಗಳು ಕೆ.ಎಸ್. ವಾಸನ್ ಗಣಿಗೆ ಹೋಗಿ ವಾಪಾಸಾಗುತ್ತಿರುವಾಗ ಹಲ್ಲೆಗೈದರು. ಆ ಕ್ಷಣದಲ್ಲೇ ಕಾರ್ಮಿಕರು ಸ್ಥಳಕ್ಕೆ ಧಾವಿಸಿದ್ದರಿಂದ ಕೆ.ಎಸ್. ವಾಸನ್ ಬದುಕುಳಿದರು.

ಬ್ರಿಟಿಷ್ ಪೋಲಿಸರಿಗೂ ನಮ್ಮ ಕಾರ್ಮಿಕರಿಗೂ ಕಾಳಗ

50 ವರ್ಷಗಳ ಕಾಲ ನಿರಂತರವಾಗಿ ಅನ್ನ, ಗಾಳಿ, ಬೆಳಕು, ನೀರು ಎನ್ನದೇ ದುಡಿಯುತ್ತಿದ್ದ ಕಾರ್ಮಿಕರಿಗೆ ಕನಿಷ್ಠ ಸೌಲಭ್ಯವನ್ನು ಒದಗಿಸಿಕೊಂಡಿದ್ದ ವೀರಹೋರಾಟದ ನೇತಾರನಾದ ಕೆ.ಎಸ್. ವಾಸನ್ ರವರ ಮೇಲೆ ಹಲ್ಲೆಯಾದ ಸುದ್ದಿ ತಿಳಿದಾಕ್ಷಣ ಕಾರ್ಮಿಕರು ಕೆಲಸ ಬಂದ್ ಮಾಡಿ ಹಲ್ಲೆಕೋರರನ್ನು ಹುಡುಕಾಡ ತೊಡಗಿದರು. ಕಾರ್ಖಾನೆ ಮಾಲೀಕರ ವಿರುದ್ಧ ಹೋರಾಟ ಹೂಡಿದರು. ಈ ಹೋರಾಟದಲ್ಲಿ ಮಧ್ಯ ಪ್ರವೇಶಿಸಿದ ಪೋಲೀಸರು 6 ಜನ ಕಾರ್ಮಿಕರನ್ನು ಬಲಿ ತೆಗೆದು ಕೊಂಡರು.

ನೂರಾರು ಕಾರ್ಮಿಕರು ತೀವ್ರ ಪೆಟ್ಟು ತಿಂದರು. ಸಾವಿರಾರು ಕಾರ್ಮಿಕರನ್ನು ಅಮಾನತ್ತು ಮಾಡಲಾಯಿತು. ಕೊಲೆ ಮೊಕದ್ದಮೆಗಳನ್ನು ಕಾರ್ಮಿಕರ ಮೇಲೆ ಹೇರಲಾಯಿತು. ಬ್ರಿಟಿಷ್ ಪೋಲಿಸ್ ಮತ್ತು ನಮ್ಮ ಕಾರ್ಮಿಕರ ಉಗ್ರ ಹೋರಾಟದಲ್ಲಿ ಸತ್ತ 6 ಜನ ಕಾರ್ಮಿಕರ ಮಾಟ್ರಿಯನ್ ಸಿಮೆಂಟರಿ (ಅಲ್ಲಿಯ ಸ್ಮಶಾನ ಭೂಮಿ) ಕೆ.ಜಿ.ಎಫ್.ನ ಮಾರಿಕುಪ್ಪಂನಲ್ಲಿದೆ. ಪ್ರತಿವರ್ಷ ನವೆಂಬರ್ 4 ರಂದು ಕಾರ್ಖಾನೆಯ ಕಾರ್ಮಿಕರಿಗಾಗಿ ಪ್ರಾಣ ತೆತ್ತ ಮಹನೀಯರನ್ನು ನೆನಪಿನಿಂದ ಸ್ಮರಿಸುತ್ತಾರೆ. ಅವರ ಆತ್ಮ ಸ್ಥೈರ್ಯ ನಮಗೂ ನೀಡಿ ಎಂಬ ಕೆಂಪು ವಂದನೆ ಸಲ್ಲಿಸಿ ದೃಢ ಸಂಕಲ್ಪವನ್ನು ಇಂದಿಗೂ ಅಲ್ಲಿನ ಚಿನ್ನದ ಗಣಿ ಕಾರ್ಮಿಕರು ಹೊಂದುತ್ತಿದ್ದಾರೆ.


ಹೋರಾಟದಲ್ಲಿ ಬಲಿಯಾಗಿ ಹುತಾತ್ಮರಾದ ಕಾರ್ಮಿಕರ ಸ್ಮಾರಕ

ಹೀಗೆ ಸಾವಿರಾರು ಕಾರ್ಮಿಕರ ಪ್ರಾಣಗಳು ನಿರಂತರ ಹೋರಾಟಗಳು ಪ್ರತಿಭಟನೆಗಳು ಮುಷ್ಕರಗಳನ್ನು ನಡೆಸಿ ಕಾರ್ಖಾನೆ ಮಾಲೀಕರ ವಿರುದ್ಧ ಸಿಡಿದೆದ್ದ ಮಹನೀಯರಾದ ಕಾರ್ಮಿಕರ ತ್ಯಾಗ ಬಲಿದಾನವನ್ನು ಇಂದು ನಮ್ಮನ್ನು ಆಳುವ ಸರ್ಕಾರಗಳು ಮರೆತಿವೆ. ದೇಶದ ಸಾರ್ವ ಜನಿಕ ವಲಯಗಳಲ್ಲಿ ಪ್ರಮುಖವಾಗಿದ್ದ ಚಿನ್ನದ ಗಣಿ. ಕೈಗಾರಿಕೆಯನ್ನು ಇಂದೋ-ನಾಳೆಯೇ ಮುಚ್ಚುವ ಹಣಾಹಣಿ ಯಲ್ಲಿರುವುದನ್ನು ನೋಡುತ್ತಿದ್ದೇವೆ.

ಹೊಸ ಆರ್ಥಿಕ ನೀತಿಗಳಿಂದ ವಿದೇಶಿ ಕಂಪನಿಗಳನ್ನು ಆಹ್ವಾನಿಸುತ್ತಾ ನಮ್ಮ ದೇಶದ ಕಾರ್ಖಾನೆಗಳ ಸ್ವಾಯತ್ತತೆಗೆ ಧಕ್ಕೆ ತಂದು ನಷ್ಟದಲ್ಲಿವೆ ಎಂದು ಮುಚ್ಚುವುದರಲ್ಲಿ ನಿರತರಾಗಿದ್ದಾರೆ. ಚಿನ್ನದ ಗಣಿ ಕಾರ್ಮಿಕರ ಅಂದಿನ ಹೋರಾಟದ ಕೆಚ್ಚೆದೆಯ ಕಿಚ್ಚನ್ನು ಇಂದು ದುಡಿವ ವರ್ಗದ ಜನ ನಾವೆಲ್ಲಾ ಸ್ಫೂರ್ತಿ ಪಡೆದು ಆಳುವ ವರ್ಗದ ವಿರುದ್ಧ ಸಮ್ರಾಜ್ಯ ಶಾಹಿಗಳ ವಿರುದ್ಧ ಹೋರಾಟ ಮಾಡಲು ಸಜ್ಜಾಗಬೇಕಿದೆ. ಇಲ್ಲವಾದಲ್ಲಿ ಪ್ರಾರಂಭದಲ್ಲಿ ನಮ್ಮ ಗಣಿ ಕಾರ್ಮಿಕರು ಗುಲಾಮರ ರೀತಿಯಲ್ಲಿದ್ದಂತೆ ಇರುವ ಕಾಲ ನಮಗೂ ಬಂದೊದಗುವ ಕಾಲ ದೂರವಿಲ್ಲ.

PRBDECR 319-79/79 AIKYARANGA WEEKLY Reg.No.17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N NAGARAJ